prajavani.net prajavani | ಶುಕ್ರವಾರ, ಡಿಸೆಂಬರ್ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 356 | ಪುಟ 12 | www.prajavani.net

ಶಾಂತಿಯ ಬೆಳಕು...

ಕೊಪ್ಪಳದ ಎಸ್‌ಎಫ್‌ಎಸ್ ಚರ್ಚ್‌ನಲ್ಲಿ ಗುರುವಾರ ಕ್ರಿಸ್‌ಮಸ್ ಅಂಗವಾಗಿ ತಾಯಿಯೊಬ್ಬರು ತಮ್ಮ ಮಗುವಿಗೆ ಸೆಂಟಾಕ್ಲಾಸ್ ವೇಷ ತೊಡಿಸಿ, ಮೇಣದ ಬತ್ತಿ ಬೆಳಗಿ ಸಂಭ್ರಮಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಚಿನ್ನ (Std. 10g) ₹1,43,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,33,500 (ಬೆಂಗಳೂರು)

ಅಪಘಾತ: 6 ಮಂದಿ ಸಜೀವ ದಹನ

ಹಿರಿಯೂರು ಬಳಿ ಹೊತ್ತಿ ಉರಿದ ಸ್ಲೀಪರ್ ಬಸ್, ಕಂಟೇನರ್ ಚಾಲಕ ಅಪ್ಪಚ್ಚಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಂಟೇನರ್‌ವೊಂದು ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಗುದ್ದಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಸೀಬರ್ಡ್ ಸ್ಲೀಪರ್ (ಎ.ಸಿ ರಹಿತ) ಬಸ್‌ಗೆ ಡಿಕ್ಕಿ ಹೊಡೆದಿದ್ದರಿಂದ ಬೆಂಕಿ ಹೊತ್ತಿಕೊಂಡು ಐವರು ಗುರುತಿಸಲು ಸಾಧ್ಯವಾಗದಷ್ಟು ಸುಟ್ಟು ಕರಕಲಾದ ದಾರುಣ ಘಟನೆ ಹಿರಿಯೂರು ತಾಲ್ಲೂಕು ಗೊರ್ಲಡುಕು ಕ್ರಾಸ್ ಬಳಿ ಗುರುವಾರ ನಸುಕಿನ 2 ಗಂಟೆ ವೇಳೆಗೆ ಸಂಭವಿಸಿದೆ. ಕಂಟೇನರ್ ಕೂಡ ಅಪ್ಪಚ್ಚಿಯಾಗಿದ್ದರಿಂದ ಚಾಲಕ ಕುಳಿತಲ್ಲೇ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ಕರ್ನೂಲ್ ಬಳಿ ನಡೆದಿದ್ದ ವೋಲ್ವೊ ಬಸ್ ದುರಂತದ ಕಹಿ ನೆನಪು ಮಾಸುವ ಮುನ್ನವೇ ಸಂಭವಿಸಿದ ಈ ಅಪಘಾತ ಸಾರ್ವಜನಿಕರಲ್ಲಿ ತಲ್ಲಣ ಉಂಟುಮಾಡಿದೆ. ಕ್ರಿಸ್‌ಮಸ್ ರಜೆ ಕಳೆಯಲು ಗೋಕರ್ಣ ಕಡಲ ಕಿನಾರೆಗೆ ತೆರಳುತ್ತಿದ್ದ ತಾಯಿ- ಮಗಳು ಹಾಗೂ ಮೂವರು ಯುವತಿಯರು ಪ್ರಯಾಣದ ಅರ್ಧದಲ್ಲೇ ತಮ್ಮ ಬದುಕಿನ ಯಾತ್ರೆ ಮುಗಿಸಿದರು. ಸಡಗರ ಸಂಭ್ರಮದ ನಡುವೆ ಬಸ್ ಹತ್ತಿದ್ದ ಅವರು ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಸುಟ್ಟು ಕರಕಲಾದರು.

ಬೆಂಗಳೂರಿನ ಬಿಂದು (28), ಅವರ ಮಗಳು ಗ್ರೇಯಾ (5), ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಎಚ್.ಸಿ.ಮಾನಸ (26), ಮಂಡ್ಯ ಜಿಲ್ಲೆ ಅಂಕನಹಳ್ಳಿಯ ಎ.ಎಂ.ನವ್ಯಾ (27), ಭಟ್ಕಳದ ರಶ್ಮಿ ಆರ್. ಮಹಾಲೆ (25) ಸಜೀವ ದಹನಗೊಂಡವರು. ಕಂಟೇನರ್ ಚಾಲಕ ಕುಲದೀಪ್ ಯಾದವ್ (29) ಕೂಡ ಮೃತಪಟ್ಟರು. 'ಕಂಟೇನರ್ ಚಾಲಕನ ನಿರ್ಲಕ್ಷ್ಯದಿಂದಲೇ ಘಟನೆ ನಡೆದಿದೆ' ಎಂದು ಪೊಲೀಸರು ತಿಳಿಸಿದರು. 5

₹7 ಲಕ್ಷ ಪರಿಹಾರ

ಬೆಂಗಳೂರು: ಚಿತ್ರದುರ್ಗದ ಬಳಿ ಕಂಟೇನರ್-ಬಸ್ ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ತಲಾ ₹5 ಲಕ್ಷ ಪರಿಹಾರ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ಮೃತರ ಕುಂಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರವನ್ನು 'ಎಕ್ಸ್'ನಲ್ಲಿ ಪ್ರಕಟಿಸಿದ್ದಾರೆ.

ಗಾಯಾಳುಗಳಿಗೆ ತಲಾ ₹50,000 ನೆರವನ್ನು ಒದಗಿಸಲಾಗುವುದು ಎಂದು ಪ್ರಧಾನಿ ಹಾಗೂ ಮುಖ್ಯಮಂತ್ರಿ ಇಬ್ಬರೂ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಚಾಲಕನಿಂದಾಗಿ ವಿದ್ಯಾರ್ಥಿಗಳು ಪಾರು

ಸಚಿನ್

ಅಪಘಾತದಲ್ಲಿ 43 ವಿದ್ಯಾರ್ಥಿಗಳು, ಮೂವರು ಶಿಕ್ಷಕರು ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದಾರೆ. ಬೆಂಗಳೂರಿನ ಟಿ.ದಾಸರಹಳ್ಳಿಯ ಶಾಲೆಯೊಂದರ ವಿದ್ಯಾರ್ಥಿಗಳು ದಾಂಡೇಲಿಗೆ ಪ್ರವಾಸ ಹೊರಟಿದ್ದರು. ಸಚಿನ್ ಚಲಾಯಿಸುತ್ತಿದ್ದ ಈ ಶಾಲಾ ಬಸ್ ಸೀಬರ್ಡ್ ಬಸ್ ಹಿಂದೆಯೇ ಚಲಿಸುತ್ತಿತ್ತು. 5

ಕಂಟೇನರ್ ಡಿಕ್ಕಿಯ ನಂತರ ಹಿರಿಯೂರು ತಾಲ್ಲೂಕು ಗೊರ್ಲಡುಕು ಕ್ರಾಸ್ ಬಳಿ ಸ್ಲೀಪರ್ ಬಸ್ ಹೊತ್ತಿ ಉರಿಯುತ್ತಿರುವುದು

ಜೀವಂತ ದಹನ

ಬಸ್‌ನಲ್ಲಿ 30 ಪ್ರಯಾಣಿಕರಿದ್ದರು. 28 ಮಂದಿ ಸೀಟುಗಳನ್ನು ಮುಂಗಡ ಕಾಯ್ದಿರಿಸಿದ್ದರು, ಇಬ್ಬರು ಮಧ್ಯದಲ್ಲಿ ಬಸ್ ಹತ್ತಿದ್ದರು. ಘಟನೆಯ ನಂತರ ಬಹುತೇಕ ಮಂದಿ ಬಸ್‌ನಿಂದ ಜಿಗಿದು ಸಿಕ್ಕ ವಾಹನ ಹತ್ತಿ ಆಸ್ಪತ್ರೆ ಸೇರಿದರು. 20 ನಿಮಿಷದ ನಂತರ ಸ್ಥಳಕ್ಕೆ ಬಂದ ಪೊಲೀಸರು ತೀವ್ರವಾಗಿ ಗಾಯಗೊಂಡ ವರನ್ನು ಆಸ್ಪತ್ರೆಗಳಿಗೆ ದಾಖಲು ಮಾಡಿದರು. ಬಸ್ ಚಾಲಕ ರಫೀಕ್, ನಿರ್ವಾಹಕ ಮೊಹಮ್ಮದ್ ಸಾದಿಕ್ ಸೇರಿ 24 ಜನರು ಚಿತ್ರದುರ್ಗ, ಶಿರಾ, ಹಿರಿಯೂರು, ಹುಬ್ಬಳ್ಳಿ, ಬೆಂಗಳೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗಾಯಾಳುಗಳು ಸ್ವತಃ ಆಸ್ಪತ್ರೆಗೆ ದಾಖಲಾದ ಕಾರಣ ಸತ್ತವರ ಸಂಖ್ಯೆ ಎಣಿಕೆಗೆ ಸಿಗದಂತಾಯಿತು. ಗುರುವಾರ ಬೆಳಿಗ್ಗೆ 11 ಗಂಟೆ ವೇಳೆಗೆ ಗಾಯಾಳುಗಳು ಸಂಪರ್ಕಕ್ಕೆ ಬಂದ ನಂತರವಷ್ಟೇ ಸಾವಿನ ಸಂಖ್ಯೆ ಖಾತರಿಯಾಯಿತು. ಬಸ್‌ನಲ್ಲಿ ಸುಟ್ಟು ಕರಕಲಾಗಿದ್ದ ಐವರ ಮೃತದೇಹ ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸಂಗ್ರಹಿಸಿದರು. ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆಯ ಮೊರೆ ಹೋಗಬೇಕಾಯಿತು. 'ಮೃತಪಟ್ಟ ಎಲ್ಲರ ಗುರುತು ಪತ್ತೆಯಾಗಿದೆ. ಡಿಎನ್‌ಎ ವರದಿ ಬಂದ ನಂತರ ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರ ಮಾಡಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು.

ಪುತ್ರಿಯರ ವಿವಾಹ ಇನ್ನೆಲ್ಲಿ?: ಆಕ್ರಂದನ

ಚನ್ನರಾಯಪಟ್ಟಣದ ಹೋಟೆಲ್‌ನಲ್ಲಿ ಕ್ಯಾಷಿಯರ್ ಆಗಿರುವ ಚಂದ್ರೇಗೌಡ ತಮ್ಮ ಪುತ್ರಿ ಮಾನಸ ಅವರ ಮದುವೆಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಎ.ಎನ್. ಮಂಜಪ್ಪ ಕೂಡ ತಮ್ಮ ಪುತ್ರಿ ನವ್ಯಾ ವಿವಾಹಕ್ಕೆ ದಿನಾಂಕ ನಿಗದಿಪಡಿಸುವ ತವಕದಲ್ಲಿದ್ದರು. ನಗರದ ಜಿಲ್ಲಾ ಆಸ್ಪತ್ರೆ ಎದುರು ನಿಂತಿದ್ದ ಚಂದ್ರೇಗೌಡ ಹಾಗೂ ಮಂಜಪ್ಪ, 'ಪುತ್ರಿಯರ ವಿವಾಹದ ಕನಸು ನನಸಾಗಲಿಲ್ಲ' ಎಂದು ಗದ್ಗದಿತರಾದರು. ಮಾನಸ ಅವರಿಗೆ ಗೊತ್ತು ಮಾಡಿದ್ದ ಹುಡುಗ ಕೂಡ ಕಣ್ಣೀರು ಸುರಿಸಿದರು.

37 ಲಕ್ಷ ಕುಟುಂಬಕ್ಕಿಲ್ಲ ಸೂರು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕನ್ನಡ ಮಾತನಾಡುವ ಪ್ರದೇಶಗಳನ್ನು ಒಳಗೊಂಡ ಕರ್ನಾಟಕ ಉದಯವಾಗಿ ಏಳು ದಶಕಗಳು ಕಳೆದರೂ ರಾಜ್ಯದಲ್ಲಿ ವಾಸಿಸುವ 37.48 ಲಕ್ಷ ಕುಟುಂಬಗಳಿಗೆ ಸ್ವಂತ ಸೂರು ಇಲ್ಲ.

ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದ ಎಲ್ಲ ಸರ್ಕಾರಗಳೂ ಬಡತನ ನಿರ್ಮೂಲನೆಗಾಗಿ ರೂಪಿಸಿದ ಕಾರ್ಯಕ್ರಮಗಳಲ್ಲಿ ವಸತಿ ಯೋಜನೆಗಳಿಗೆ ಆದ್ಯತೆ ನೀಡಿವೆ. ಆದರೂ ವಸತಿಹೀನರ ಸಂಖ್ಯೆ ಬೆಳೆಯುತ್ತಲೇ ಇದೆ.

ವಸತಿರಹಿತರಿಗೆ 'ಸೂರು' ಕಲ್ಪಿಸಲು ಬಸವ ವಸತಿ ಯೋಜನೆ, ಡಾ.ಬಿ.ಆರ್.ಅಂಬೇಡ್ಕರ್ ನಗರ ಮತ್ತು ಗ್ರಾಮೀಣ ವಸತಿ ಯೋಜನೆ, ದೇವರಾಜ ಅರಸು ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆಗಳನ್ನು ರಾಜ್ಯ ಸರ್ಕಾರ ರೂಪಿಸಿದೆ. ಅತಿವೃಷ್ಟಿ, ನೆರೆಯಿಂದ ಮನೆಗಳನ್ನು ಕಳೆದುಕೊಂಡು ಸಂತ್ರಸ್ತರಾಗುವ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನರಿಗೆ ಪುನರ್‌ವಸತಿ ಕಲ್ಪಿಸಲು ದೇವರಾಜ ಅರಸು ಅವರ ಹೆಸರಿನಲ್ಲಿ ಪ್ರತ್ಯೇಕ ವಸತಿ ಯೋಜನೆ ಜಾರಿಗೊಳಿಸಲಾಗಿದೆ. ಬೆಂಗಳೂರಿನಲ್ಲಿ ವಾಸಿಸುವ ವಸತಿ ರಹಿತರಿಗೆ ಬಹುಮಹಡಿ ವಸತಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಕೇಂದ್ರ ಸರ್ಕಾರ ಗ್ರಾಮೀಣ ಮತ್ತು ನಗರ ಪ್ರದೇಶಗಳ ವಸತಿ ರಹಿತರಿಗಾಗಿಯೇ ಪ್ರತ್ಯೇಕ ಪ್ರಧಾನ ಮಂತ್ರಿ ಆವಾಸ್ ಯೋಜನೆ ರೂಪಿಸಿದೆ. ಪಿಎಂ-ಜನಮನ್ ಯೋಜನೆ ಅಡಿಯೂ ಮನೆಗಳನ್ನು ಮಂಜೂರು ಮಾಡುತ್ತಿದೆ.

ಅಂಕಿ ಅಂಶಗಳು

37.48 ಲಕ್ಷ
ವಸತಿರಹಿತ ಕುಟುಂಬಗಳು

24.19 ಲಕ್ಷ
ಗ್ರಾಮೀಣ ವಸತಿರಹಿತ ಕುಟುಂಬಗಳು

13.29 ಲಕ್ಷ
ನಗರ ವಸತಿರಹಿತ ಕುಟುಂಬಗಳು

ಕಾಂಗ್ರೆಸ್ ಆಡಳಿತವಿದ್ದ 2013-18ರ ಅವಧಿಯಲ್ಲಿ 13 ಲಕ್ಷ ಮನೆಗಳು ಮಂಜೂರಾಗಿತ್ತು. ನಂತರ ಬಂದ ಬಿಜೆಪಿ ಒಂದೂ ಮನೆ ನೀಡಲಿಲ್ಲ. ಈಗ ಮತ್ತೆ 7.38 ಲಕ್ಷ ಮನೆ ನೀಡಿದ್ದೇವೆ
ಜಮೀರ್ ಅಹಮದ್ ಖಾನ್, ವಸತಿ ಸಚಿವ

ಫಲಾನುಭವಿಗಳ ಆಯ್ಕೆಯನ್ನು ನಿಯಮದಂತೆ ಆಯಾ ಗ್ರಾಮ, ವಾರ್ಡ್ ಸಭೆಗಳಿಗೆ ನೀಡಬೇಕು. ಶಾಸಕರ, ಅಧಿಕಾರಿಗಳ ಹಸ್ತಕ್ಷೇಪ ತಡೆಯಬೇಕು
ಕಾಡಶೆಟ್ಟಹಳ್ಳಿ ಸತೀಶ್,
ಅಧ್ಯಕ್ಷ, ಕರ್ನಾಟಕರಾಜ್ಯಗ್ರಾಮ ಪಂಚಾಯಿತಿ ಸದಸ್ಯರ ಮಹಾಒಕ್ಕೂಟ

ಕೇಂದ್ರದ ಸೂಚನೆಯಂತೆ ರಾಜ್ಯ ಸರ್ಕಾರ ನಡೆಸಿದ್ದ ಸಮೀಕ್ಷೆಯ ಅಂಕಿಅಂಶಗಳ ಪ್ರಕಾರ ವಸತಿ ಇಲ್ಲದ 37.48 ಲಕ್ಷ ಜನರಲ್ಲಿ 17.31 ಲಕ್ಷ ಜನರಿಗೆ ಸ್ವಂತ ನಿವೇಶನವೂ ಇಲ್ಲ. 20.17 ಲಕ್ಷ ಜನರು ಸಾಲ ಮಾಡಿ ಸ್ವಂತ ನಿವೇಶನಗಳನ್ನು ಖರೀದಿಸಿದ್ದರೂ ಸ್ವಂತ ಸೂರು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. 3A

'ಕೈ' ಅಧ್ಯಕ್ಷನಾಗಿ ಕಸ ಗುಡಿಸಿದ್ದೇನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಕೇವಲ ವೇದಿಕೆಯಲ್ಲಿ ಕುಳಿತು, ಭಾಷಣ ಮಾಡಿಕೊಂಡು ಹೋಗಿಲ್ಲ. ಕೆಪಿಸಿಸಿ ಅಧ್ಯಕ್ಷ ಆದಾಗಲೂ ಪಕ್ಷದ ಬಾವುಟ ಕಟ್ಟಿದ್ದೇನೆ, ಪೋಸ್ಟರ್ ಅಂಟಿಸಿದ್ದೇನೆ, ಕಸ ಗುಡಿಸಿದ್ದೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಒಂದು ಗಂಟೆಗೂ ಹೆಚ್ಚು ಹೊತ್ತು ಚರ್ಚಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು ಕಾಂಗ್ರೆಸ್ ಕಾರ್ಯಕರ್ತರಾಗಿ ತಾವು ಮಾಡಿದ ಕಾರ್ಯ, ತಮ್ಮ ಪಕ್ಷ ನಿಷ್ಠೆಯನ್ನು ಬಲವಾಗಿ ಪ್ರತಿಪಾದಿಸಿದರು.

'ಪಕ್ಷಕ್ಕೆ ಏನೇನು ಬೇಕೋ ಎಲ್ಲವನ್ನೂ ಮಾಡಿದ್ದೇನೆ. ಮುಂದೆಯೂ ಪಕ್ಷದ ಕಾರ್ಯಕರ್ತನಾಗಿ ಇರಲು ಬಯಸುತ್ತೇನೆ. ಮುಂದೆಯೂ ಅದೇ ಕೆಲಸವನ್ನು ಬದ್ಧತೆಯಿಂದ ಮಾಡುತ್ತೇನೆ. ಮಲ್ಲಿಕಾರ್ಜುನ ಖರ್ಗೆ ಅವರ ಬಳಿ ನಾಯಕತ್ವ ವಿಚಾರ, ರಾಜಕೀಯ ಚರ್ಚೆ ಮಾಡಿಲ್ಲ. ನಾನು ಚರ್ಚೆ ಮಾಡುವುದೂ ಇಲ್ಲ. ಮಾಡುವ ಅವಶ್ಯಕತೆಯೂ ಇಲ್ಲ' ಎಂದರು.

ಆಹ್ವಾನ ಬಂದರೆ ಭಾಗಿ

'ದೆಹಲಿಯಲ್ಲಿ ನಡೆಯುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ (ಸಿಡಬ್ಲ್ಯೂಸಿ) ಕರೆದರೆ ಖಂಡಿತಾ ಹೋಗುತ್ತೇನೆ. ಆದರೆ, ಇದುವರೆಗೂ ಕರೆದಿಲ್ಲ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು. 'ಸಭೆಗೆ ಮೂವರು ಮುಖ್ಯಮಂತ್ರಿಗೆ ಆಹ್ವಾನ ನೀಡಿದ್ದಾರೆ. ಕೆಪಿಸಿಸಿ ಅಧ್ಯಕ್ಷನಾಗಿ ಸಮಿತಿಯ ವಿಸ್ತರಿತ ಸಭೆಗೆ ಕರೆಯುತ್ತಾರೆ' ಎಂದರು.

ಸಿ.ಎಂ ಇಂದು ದೆಹಲಿಗೆ

ದೆಹಲಿಯಲ್ಲಿ ಡಿ.27ರಂದು ನಡೆಯುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸುತ್ತಿದ್ದಾರೆ.

ಸಭೆಯಲ್ಲಿ ಭಾಗವಹಿಸಲು ಅವರು ಶುಕ್ರವಾರ ರಾತ್ರಿ ವಿಶೇಷ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

'ನೌಕರರಿಗೆ ₹1 ಕೋಟಿ ಅಪಘಾತ ವಿಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆಯ ಕಾಯಂ ಅಧಿಕಾರಿ ಮತ್ತು ಸಿಬ್ಬಂದಿಗೆ ₹1 ಕೋಟಿ ಮೊತ್ತದ ಅಪಘಾತ ವಿಮೆ ಮತ್ತು ಹೊರಗುತ್ತಿಗೆ ಸಿಬ್ಬಂದಿಗೆ ₹20 ಲಕ್ಷ ಮೊತ್ತದ ಅಪಘಾತ ವಿಮೆ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ಅರಣ್ಯ ಇಲಾಖೆ ಸೌಲಭ್ಯ

ಗುರುವಾರ ಪ್ರಕಟಣೆ ಹೊರಡಿಸಿರುವ ಅವರು, 'ಇಲಾಖೆಯ ಸಿಬ್ಬಂದಿಗೆ ವಿಮೆ ಭದ್ರತೆ ಒದಗಿಸುವ ಉದ್ದೇಶದಿಂದ ಬ್ಯಾಂಕ್ ಆಫ್ ಬರೋಡಾದ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದಿದ್ದಾರೆ.

'ಕಾಡು ಮತ್ತು ವನ್ಯಜೀವಿಗಳ ರಕ್ಷಣೆಗಾಗಿ ಮುಂಚೂಣಿ ಸಿಬ್ಬಂದಿ, ಹಸಿರು ಸೈನಿಕರು ಪ್ರತಿದಿನ ಅಪಾಯಗಳನ್ನು ಎದುರಿಸುತ್ತಾ ಶ್ರಮಿಸುತ್ತಿದ್ದಾರೆ. ಅಂತಹ ಶೌರ್ಯಶಾಲಿ ಮುಂಚೂಣಿ ಸಿಬ್ಬಂದಿಯನ್ನು ಇಲಾಖೆ ಕಳೆದುಕೊಂಡಿದೆ. ಹೀಗಾಗಿ ಎಲ್ಲ ಸಿಬ್ಬಂದಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಲು ಈ ತಿಳಿವಳಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಅರಣ್ಯ ಸಂರಕ್ಷಣೆಯಲ್ಲಿ ಹೊರಗುತ್ತಿಗೆ ಮುಂಚೂಣಿ ಸಿಬ್ಬಂದಿಯ ಮಹತ್ತರ ಪಾತ್ರವಿದೆ. ಹೀಗಾಗಿ ಅವರಿಗೂ ₹20 ಲಕ್ಷಗಳ ಅಪಘಾತ ವಿಮೆ ಸೌಲಭ್ಯ ಕಲ್ಪಿಸಲಾಗಿದೆ' ಎಂದಿದ್ದಾರೆ.

'ಇಲಾಖೆಯ ಕಾಯಂ ಸಿಬ್ಬಂದಿಯ ವೇತನ ಮತ್ತು ಶ್ರೇಣಿಯ ಹೊರತಾಗಿ ಎಲ್ಲರಿಗೂ ₹1 ಕೋಟಿ ಮೊತ್ತದ ಅಪಘಾತ ವಿಮೆಯನ್ನು ಬ್ಯಾಂಕ್ ಒದಗಿಸುತ್ತದೆ. ಕರ್ತವ್ಯದಲ್ಲಿ ಇದ್ದಾಗಲೇ ಮೃತಪಟ್ಟರೆ, ಹೆಚ್ಚುವರಿಯಾಗಿ ₹25 ಲಕ್ಷವನ್ನು ಬ್ಯಾಂಕ್ ಪಾವತಿಸಲಿದೆ' ಎಂದಿದ್ದಾರೆ.

'ಈ ಸೌಲಭ್ಯ ಪಡೆಯಲು ಸಿಬ್ಬಂದಿ ಬ್ಯಾಂಕ್ ಆಫ್ ಬರೋಡಾದಲ್ಲಿ ವೇತನ ಖಾತೆಯನ್ನು ತೆರೆಯಬೇಕಿದೆ. ನಿವೃತ್ತಿ ನಂತರವೂ ಪಿಂಚಣಿ ಖಾತೆಯನ್ನು ಅದೇ ಬ್ಯಾಂಕ್‌ನಲ್ಲಿ ಮುಂದುವರಿಸಿದರೆ, ಅಪಘಾತ ವಿಮೆ ಸೌಲಭ್ಯ 70 ವರ್ಷ ವಯಸ್ಸಿನವರೆಗೆ ಮುಂದುವರೆಯಲಿದೆ. ಅಲ್ಲದೆ, ಕಾಯಂ ಉದ್ಯೋಗಿಗಳಿಗೆ ₹10 ಲಕ್ಷದ ಜೀವ ವಿಮೆ ರಕ್ಷಣೆಯನ್ನೂ ಬ್ಯಾಂಕ್ ಒದಗಿಸುತ್ತದೆ' ಎಂದು ತಿಳಿಸಿದ್ದಾರೆ.

ಸೆಂಗರ್ ಶಿಕ್ಷೆ ಅಮಾನತು: 'ಸುಪ್ರೀಂ'ನಲ್ಲಿ ಮೇಲ್ಮನವಿ

ವಿವರ 9

ಒಡಿಶಾ: ಉಯಿಕೆ ಸೇರಿ ಆರು ನಕ್ಸಲರ ಹತ್ಯೆ- ಅಮಿತ್ ಶಾ

ಭುವನೇಶ್ವರ/ನವದೆಹಲಿ (ಪಿಟಿಐ): 'ಒಡಿಶಾದ ಕಂಧಮಾಲ್ ಪ್ರದೇಶದ ಅರಣ್ಯದಲ್ಲಿ ನಡೆಸಿದ ಪ್ರಮುಖ ಕಾರ್ಯಾಚರಣೆಯಲ್ಲಿ ನಕ್ಸಲ್ ಕೇಂದ್ರ ಸಮಿತಿಯ ಸದಸ್ಯ ಗಣೇಶ್ ಉಯಿಕೆ (69) ಸೇರಿ ಆರು ನಕ್ಸಲರನ್ನು ಹತ್ಯೆ ಮಾಡಲಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, 'ನಕ್ಸಲ್ ಮುಕ್ತ ಭಾರತದೆಡೆಗೆ ಇದೊಂದು ಮೈಲಿಗಲ್ಲು. ಇನ್ನೇನು ಸದ್ಯದಲ್ಲಿಯೇ ಒಡಿಶಾವು ನಕ್ಸಲ್ ಚಟುವಟಿಕೆಗಳಿಂದ ಮುಕ್ತವಾಗಲಿದೆ. 2026ರ ಮಾರ್ಚ್ 31ರ ಒಳಗೆ ಭಾರತವು ನಕ್ಸಲ್ ಮುಕ್ತವಾಗಲಿದೆ' ಎಂದಿದ್ದಾರೆ.

ಉಯಿಕೆ ಅವರನ್ನು ಹುಡುಕಿ ಕೊಟ್ಟವರಿಗೆ ₹1.1 ಕೋಟಿ ಬಹುಮಾನ ನೀಡಲಾಗುವುದು ಎಂದು ಘೋಷಿಸಲಾಗಿತ್ತು. ಒಡಿಶಾದಲ್ಲಿ ಇವರು ನಿಷೇಧಿತ ನಕ್ಸಲ್ ಗುಂಪಿನ ಮುಖ್ಯಸ್ಥ ರಾಗಿದ್ದರು. ತೆಲಂಗಾಣದವರಾದ ಗಣೇಶ್ ಅವರನ್ನು ಪಕ್ಕಾ ಹನುಮಂತು, ರಾಜೇಶ್ ತಿವಾರಿ, ಚರ್ಮು ಮತ್ತು ರೂಪ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತಿತ್ತು.

'ಇಬ್ಬರು ಮಹಿಳಾ ನಕ್ಸಲರು ಸೇರಿ ಉಳಿದ ಐವರ ಗುರುತು ಪತ್ತೆಯಾಗಿಲ್ಲ' ಎಂದು ಪೊಲೀಸರು ತಿಳಿಸಿದರು.

'ರಾಜ್ಯದಲ್ಲಿ ಆಡಳಿತವೇ ಇಲ್ಲದಂತಾಗಿದೆ'

ಬೆಂಗಳೂರು: 'ಭಾರತವು ವಿಶ್ವದಲ್ಲಿಯೇ ಮೂರನೇ ಅತ್ಯಂತ ದೊಡ್ಡ ಆರ್ಥಿಕತೆ ಯಾಗುತ್ತಿದೆ. ಸಾಂಸ್ಕೃತಿಕವ

ಬಾಪೂಜಿ ವಿದ್ಯಾ ಸಂಸ್ಥೆ (ರಿ)

2ನೇ ಮುಖ್ಯ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ–577002

ಶಿವಗಣಾರಾಧನೆ ಮತ್ತು ನುಡಿ ನಮನ

ಐವತ್ತು ವರ್ಷಗಳಿಗೂ ಹೆಚ್ಚು ಕಾಲ ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ
ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸಿದ ಅಮೃತ ಪುರುಷರು, ಶತಮಾನ ಶ್ರೇಷ್ಠರು,
ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಸಚಿವರು, ಶಾಸಕರೂ ಆದ

ಅಂ. ಡಾ. ಶಾಮನೂರು ಶಿವಶಂಕರಪ್ಪ ಅವರು

ದಿ. 14.12.2025ರಂದು ನಮ್ಮೆಲ್ಲರನ್ನು ಅಗಲಿದ್ದು, ಅವರ **ಶಿವಗಣಾರಾಧನೆ ಮತ್ತು ನುಡಿ ನಮನ** ಕಾರ್ಯಕ್ರಮವನ್ನು
ದಿ. 26.12.2025ರ ಶುಕ್ರವಾರ ಬೆಳಿಗ್ಗೆ 10.15ಕ್ಕೆ ಹಮ್ಮಿಕೊಳ್ಳಲಾಗಿದೆ. ದಾವಣಗೆರೆಯ ಬಂಬೂಬಜಾರ್ ಮುಖ್ಯ ರಸ್ತೆಯಲ್ಲಿರುವ ಶ್ರೀ ಕಲ್ಲೇಶ್ವರ
ರೈಸ್ ಮಿಲ್ ಆವರಣದಲ್ಲಿ ಕಾರ್ಯಕ್ರಮ ನೆರವೇರಲಿದ್ದು, ತಾವುಗಳೆಲ್ಲರು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಲು ವಿನಂತಿಸುತ್ತೇವೆ.

ಉಪಾಧ್ಯಕ್ಷರು, ಜಂಟಿ ಗೌರವ ಕಾರ್ಯದರ್ಶಿಗಳು, ಖಜಾಂಚಿ, ಆಡಳಿತ ಮಂಡಳಿ ಸದಸ್ಯರು, **ಬಾಪೂಜಿ ವಿದ್ಯಾಸಂಸ್ಥೆ**
ಮತ್ತು ಬಾಪೂಜಿ ಬ್ಯಾಂಕ್‌ನ ಹಾಗೂ ಶಾಮನೂರು ಒಡೆತನದ ಸಮೂಹ ಸಂಸ್ಥೆಗಳ ಎಲ್ಲ ಅಂಗ ಸಂಸ್ಥೆಗಳ ನೌಕರ ವರ್ಗ, ದಾವಣಗೆರೆ

ಭಾವಪೂರ್ಣ ಗೌರವ ಶ್ರದ್ಧಾಂಜಲಿ ಸಲ್ಲಿಸುವವರು

ಶ್ರೀಮತಿ ಪ್ರೀತಿ ಬಕ್ಕೇಶ್ ಹಾಗೂ ಶ್ರೀ ಎಸ್.ಎಸ್. ಬಕ್ಕೇಶ್, ಆಶಿಕ್, ಅಕ್ಷತಾ, ಅದಿತ್
ಶ್ರೀಮತಿ ರೇಖಾ ಗಣೇಶ್ ಹಾಗೂ ಶ್ರೀ ಎಸ್.ಎಸ್. ಗಣೇಶ್, ಅಭಿಜಿತ್, ಆಂಚಲ್, ಅಖಿಲಾ
ಡಾ॥ ಪ್ರಭಾ ಮಲ್ಲಿಕಾರ್ಜುನ್ ಹಾಗೂ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಸಮರ್ಥ್, ಡಾ॥ ಶ್ರೇಷ್ಠಾ, ಶಿವ

ಪಂಚ ಪೀಠಾಧೀಶ್ವರರೂ ಸೇರಿದಂತೆ ನಾಡಿನ ಎಲ್ಲಾ ಮಠಾಧೀಶರು, ಹರ, ಗುರು, ಚರ ಮೂರ್ತಿಗಳು ದಿವ್ಯ ಸಾನ್ನಿಧ್ಯ ವಹಿಸುವರು

ಉದ್ಘಾಟನೆ:
ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ
ಅಧ್ಯಕ್ಷರು, ಭಾರತ ರಾಷ್ಟ್ರೀಯ ಕಾಂಗ್ರೆಸ್

ಪುತ್ಥಳಿ ಅನಾವರಣ:
ಮಾನ್ಯ ಶ್ರೀ ಸಿದ್ದರಾಮಯ್ಯ
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಾಕ್ಷ್ಯಚಿತ್ರ ಬಿಡುಗಡೆ :
ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಉಪಮುಖ್ಯಮಂತ್ರಿಗಳು, ಅಧ್ಯಕ್ಷರು, ಕೆ.ಪಿ.ಸಿ.ಸಿ.

ಅಧ್ಯಕ್ಷತೆ:
ನ್ಯಾ. ಶಿವರಾಜ್ ಪಾಟೀಲ್
ನಿವೃತ್ತ ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ

–: ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿ :–

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್
ದಾವಣಗೆರೆ ಜಿಲ್ಲಾ ಉಸ್ತುವಾರಿ
ಸಚಿವರು, ಕರ್ನಾಟಕ ಸರ್ಕಾರ

ಡಾ॥ ಪ್ರಭಾ ಮಲ್ಲಿಕಾರ್ಜುನ್
ಮಾನ್ಯ ಸಂಸದರು,
ದಾವಣಗೆರೆ ಲೋಕಸಭಾ ಕ್ಷೇತ್ರ

ಕಿರು ಹೊತ್ತಿಗೆ ಬಿಡುಗಡೆ

ಶ್ರೀ ಹೆಚ್.ಡಿ.ದೇವೇಗೌಡ
ಮಾಜಿ ಪ್ರಧಾನಿಗಳು,
ಭಾರತ ಸರ್ಕಾರ

–: ವಂದನಾರ್ಪಣೆ :–

ಶ್ರೀ ಎಸ್.ಎಸ್. ಗಣೇಶ್
ಉದ್ಯಮಿಗಳು ಹಾಗೂ ರಾಷ್ಟ್ರೀಯ ಉಪಾಧ್ಯಕ್ಷರು,
ಅ.ಭಾ.ವೀ.ಲಿಂ. ಮಹಾಸಭಾ

ನುಡಿ ನಮನ

ಶ್ರೀ ಬಿ.ಎಸ್.ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿಗಳು

ಶ್ರೀ ವೇಣುಗೋಪಾಲ್
ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಶ್ರೀ ಜಗದೀಶ್ ಶೆಟ್ಟರ್
ಸಂಸದರು, ಮಾಜಿ ಮುಖ್ಯಮಂತ್ರಿಗಳು

ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಮಾನ್ಯ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು

ಶ್ರೀ ಬಸವರಾಜ ಬೊಮ್ಮಾಯಿ
ಸಂಸದರು, ಮಾಜಿ ಮುಖ್ಯಮಂತ್ರಿಗಳು

ಶ್ರೀ ವಿ.ಸೋಮಣ್ಣ
ಮಾನ್ಯ ಕೇಂದ್ರ ಸಚಿವರು, ಭಾರತ ಸರ್ಕಾರ

ಶ್ರೀ ಯು.ಟಿ.ಖಾದರ್
ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಶ್ರೀ ರಣದೀಪ್ ಸುರ್ಜೆವಾಲಾ
ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಶ್ರೀ ಈಶ್ವರ ಬಿ ಖಂಡ್ರೆ, ಸಚಿವರು
ಹಿರಿಯ ಉಪಾಧ್ಯಕ್ಷರು, ಅ.ಭಾ.ವೀ.ಲಿಂ.ಮ

ಶ್ರೀ ಎಂ.ಬಿ.ಪಾಟೀಲ್, ಸಚಿವರು
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ

ರಾಜ್ಯದ ಎಲ್ಲಾ ಮಂತ್ರಿಗಳು, ಮಾಜಿ ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಶಾಸಕರು, ವಿಧಾನ ಪರಿಷತ್ ಸದಸ್ಯರು, ನಿಗಮ-ಮಂಡಳಿ ಅಧ್ಯಕ್ಷರು, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಮುಖಂಡರುಗಳು ಹಾಗೂ ಎಲ್ಲಾ ಪಕ್ಷಗಳ ಮುಖಂಡರು ನುಡಿನಮನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ವಿ.ಸೂ: ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಎಲ್ಲರಿಗೂ ತಲುಪಿಸಲಾಗಿದ್ದು, ತಲುಪದೆ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕಾಗಿ ವಿನಂತಿ

MARUTI SUZUKI

NEXA

We Are Now

3 CRORE STRONG & COUNTING.

THANK YOU, INDIA.

Let's celebrate together with special offers.

FRONX

EFFECTIVE PRICE OF ₹6.6 LAKH*

BALENO

EFFECTIVE PRICE OF ₹5.52 LAKH*

OFFERS VALID TILL 31ST DEC 2025

NEXA SAFETY SHIELD

UP TO 100% WAIVER ON CAR LOAN PROCESSING FEE**

SCAN TO CONNECT TO A SHOWROOM NEAR YOU

E-BOOK TODAY @ *WWW.NEXAEXPERIENCE.COM*

Contact us at
1800-200-[6392]
1800-102-[6392]

T&C available at your nearest dealership. *Ex. Showroom Price of Fronx Sigma ₹ 6.85 lakh, Consumer Offer (-) ₹ 15 000, Exchange Bonus (-) ₹ 10 000 = ₹ 6.6 lakh. *Ex. Showroom Price of Baleno Sigma ₹ 5.99 lakh, Consumer Offer (-) ₹ 30 000, Exchange Bonus (-) ₹ 15 000, Rural Offer (-) ₹ 2 100 = ₹ 5.52 lakh. The actual Effective Price mentioned may vary based on the customer's eligibility, profile, and applicable offers at the time of purchase. Offers valid on Fronx Sigma Variant & Baleno Sigma Variant. Maruti Suzuki India Limited reserves the right to discontinue offers without notice and offers may vary across variants. ^Offers include consumer offer, exchange bonus, and institutional or rural offers (wherever applicable) on select models/variants. The above offers are valid until stocks last. Creative visualization. Images used are for illustration purposes only. Car colour may vary due to printing on paper. ^^Prices subject to applicable GST rates as notified by the Government of India. **By selected finance partners. Finance is at the sole discretion of the financer. Prices and savings mentioned above are for select variants and may vary across cities/variants.

ಸೂರ್ಯೋದಯ: 6:39 ಸೂರ್ಯಾಸ್ತ : 6:00 ಚಂದ್ರೋದಯ: ಬೆ. 10:33 ಚಂದ್ರಾಸ್ತ: ರಾ. 10:35 | ಗುರುವಾರದ ಉಷ್ಣಾಂಶ : ಗರಿಷ್ಠ 28° ಕನಿಷ್ಠ 15°

ಶುಕ್ರವಾರ • ಡಿಸೆಂಬರ್ 26, 2025

ಶುಕ್ರವಾರದ ಉಷ್ಣಾಂಶ 28° ಗರಿಷ್ಠ 15° ಕನಿಷ್ಠ | ಶನಿವಾರ 28 : 16 | ಭಾನುವಾರ 28° : 16° | ಸೋಮವಾರ 28° : 16°

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದೆ.

ಅರಮನೆ ಮೈದಾನದಲ್ಲಿ ಆಯುರ್ವೇದ 'ಪ್ರಪಂಚ'

ನಾಲ್ಕು ದಿನಗಳ ದ್ವಿತೀಯ ಆಯುರ್ವೇದ ವಿಶ್ವ ಸಮ್ಮೇಳನಕ್ಕೆ ಚಾಲನೆ • ಆಯುರ್ವೇದ ಕ್ಷೇತ್ರದ ಸಾಧಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಆಹಾರವನ್ನೇ ಔಷಧದ ರೂಪದಲ್ಲಿ ಉಪಯೋಗಿಸಬಹುದು. ಆಹಾರ, ಜೀವನ ಪದ್ಧತಿ ಬದಲಾದರೆ ಅನೇಕ ರೋಗಗಳನ್ನು ಪರಿಹರಿಸಬಹುದು
ವಿಶ್ವಪ್ರಸನ್ನತೀರ್ಥ ಸ್ವಾಮೀಜಿ,
ಪೇಜಾವರ ಮಠ

ಆಯುರ್ವೇದ ನಮ್ಮ ದೇಶದ ಸ್ವತ್ತು. ಜೀವನ ಪದ್ಧತಿಯನ್ನು ಸರಿಪಡಿಸಿ, ಆಯುರ್ವೇದವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು
ಶೋಭಾ ಕರಂದ್ಲಾಜೆ,
ಕೇಂದ್ರ ಸಚಿವೆ

ಮುಖ್ಯಾಂಶಗಳು

- ದಾಖಲೆ ಆಧಾರಿತ ಸಂಶೋಧನಾ ಪ್ರಬಂಧಗಳ ಮಂಡನೆ
- ಕಿರು ನಾಟಕಗಳ ಪ್ರದರ್ಶನ
- ಇತರ ವೈದ್ಯಕೀಯ ಪದ್ಧತಿಯ ತಜ್ಞರಿಂದ ವಿಷಯ ಮಂಡನೆ

ಆಯುರ್ವೇದ ಉತ್ಪನ್ನ ಪ್ರದರ್ಶನ, ಮಾರಾಟ

ಸಾವಿರಾರು ಸಂಖ್ಯೆಯಲ್ಲಿ ನಗರದ ವಿವಿಧೆಡೆಯಿಂದ ಬಂದಿದ್ದ ಜನರು ವಿವಿಧ ಕಂಪನಿಗಳ ಆಯುರ್ವೇದ ಉತ್ಪನ್ನಗಳ ಬಗ್ಗೆ ವಿಚಾರಿಸಿ, ಆರೋಗ್ಯ ವೃದ್ಧಿಗೆ ಪೂರಕವಾದ ಉತ್ಪನ್ನಗಳನ್ನು ಖರೀದಿಸಿದರು. ಮಳಿಗೆಗಳ ಪ್ರತಿನಿಧಿಗಳು ಆಯುರ್ವೇದ ಚಿಕಿತ್ಸೆ, ಔಷಧ ಹಾಗೂ ಉತ್ಪನ್ನಗಳ ಮಹತ್ವವನ್ನು ಜನರಿಗೆ ತಿಳಿಸಿದರು. ಸಾವಯವ, ಗೃಹ ಹಾಗೂ ಕರಕುಶಲ ಉತ್ಪನ್ನಗಳ ಮಳಿಗೆಗಳು ಆಕರ್ಷಣೆಯ ಕೇಂದ್ರಬಿಂದುವಾಗಿದ್ದವು. ಇಲ್ಲಿ ಸುಮಾರು 200 ಮಳಿಗೆಗಳಿದ್ದವು. ದೇಸಿ ಗೋ ಪ್ರದರ್ಶನ, ಆಹಾರೋತ್ಪನ್ನಗಳು ಸಮ್ಮೇಳನದಲ್ಲಿದ್ದವು.

ಚಾಲನೆ ದೊರೆಯಿತು. ಚಂಡೆ ವಾದನ ಹಾಗೂ ಪೂರ್ಣಕುಂಭ ಸ್ವಾಗತದೊಂದಿಗೆ ವಿವಿಧ ಮಠಾಧೀಶರು ಹಾಗೂ ಗಣ್ಯರನ್ನು ಬರಮಾಡಿಕೊಳ್ಳಲಾಯಿತು.

ಮುಖ್ಯ ವೇದಿಕೆಯಾದ ಋಷಿ ರಾಜ ವೈದ್ಯ ಸಭಾವು ಆಯುರ್ವೇದ ಚಿಕಿತ್ಸಾ ಪದ್ಧತಿ ಬಗೆಗಿನ ಚಿಂತನ ಮಂಥನಕ್ಕೆ ಸಾಕ್ಷಿಯಾಯಿತು. ಆಯುರ್ವೇದದ ಜತೆಗೆ ಅಲೋಪಥಿ, ಹೋಮಿಯೋಪಥಿ, ಸಿದ್ಧ, ನ್ಯಾಚುರೋಪಥಿ ಹಾಗೂ ಯುನಾನಿ ವೈದ್ಯಕೀಯ ಪದ್ಧತಿಯ ತಜ್ಞರೂ ಸಮ್ಮೇಳನದಲ್ಲಿ ವಿಷಯ ಮಂಡಿಸಿದರು.

ಆಯುರ್ವೇದ ಚಿಕಿತ್ಸಾ ಕ್ಷೇತ್ರದ ಸಾಧಕರನ್ನೂ ಸಮ್ಮೇಳನದಲ್ಲಿ ಗೌರವಿಸಲಾಯಿತು. ವೈಜ್ಞಾನಿಕ ವಿಚಾರಗೋಷ್ಠಿಗಳಿಗೆ 'ಚರಕ ಸಭಾ' ವೇದಿಕೆಯಾಯಿತು. 'ಆಯುರ್ವೇದ' ವಿಷಯ ವಸ್ತುವನ್ನು ಆಧರಿಸಿ ಹಮ್ಮಿಕೊಂಡಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯು ಆಯುರ್ವೇದದ ಮಹತ್ವ ಸಾರುವ ಜತೆಗೆ ನೆರೆದಿದ್ದ ಜನರನ್ನು ರಂಜಿಸಿತು. ಈ ಸ್ಪರ್ಧೆಗಾಗಿ 'ಅಶ್ವಿನಿ ರಂಗಸ್ಥಳ' ವೇದಿಕೆ ನಿರ್ಮಿಸಲಾಗಿದ್ದು, ನಾಲ್ಕೂ ದಿನ ಇಲ್ಲಿ ಸ್ಪರ್ಧೆ ನಡೆಯಲಿದೆ. ಪ್ರಥಮ ಸ್ಥಾನ ಪಡೆದವರಿಗೆ ₹3 ಲಕ್ಷ ನಗದು ಸಹಿತ ಒಟ್ಟು ₹11 ಲಕ್ಷ ನಗದು ಬಹುಮಾನವನ್ನು ಈ ಸ್ಪರ್ಧೆ ಒಳಗೊಂಡಿದೆ.

ಸಮ್ಮೇಳನದಲ್ಲಿ ವಿಚಾರಗೋಷ್ಠಿಗಳು ಒಂದೆಡೆಯಾದರೆ, ಇನ್ನೊಂದೆಡೆ ಧನ್ವಂತರಿ ಮಹಾಯಜ್ಞ ನಡೆಯಿತು. ಧನ್ವಂತರಿಯ ಪೂಜೆ ಹಾಗೂ ಆರಾಧನೆಗಳು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ನೆರವೇರಿದವು.

ಹತ್ತು ಆಯುರ್ವೇದ ಅನುಭವ ಕೇಂದ್ರಗಳನ್ನು ನಿರ್ಮಿಸಲಾಗಿದ್ದು, ಚಿಕಿತ್ಸೆಯ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮ್ಮೇಳನಕ್ಕೆ ಬಂದಿದ್ದವರನ್ನು ಮುಖ್ಯ ವೇದಿಕೆಗೆ ಕರೆತಂದಿತು. 350 ಕಲಾವಿದರಿಂದ ಆಳ್ವಾಸ್ ಸಾಂಸ್ಕೃತಿಕ ಸಂಭ್ರಮ ನಡೆಯಿತು. ಲೇಸರ್ ಶೋ ಮೂಲಕ ಆಯುರ್ವೇದದ ಮಹತ್ವ ಸಾರಲಾಯಿತು. ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆವರೆಗೂ ವಿವಿಧ ಕಾರ್ಯಕ್ರಮಗಳು ನಡೆದವು.

ಸಮ್ಮೇಳನದಲ್ಲಿ ಇಂದು

ಆಯುರ್ವೇದ ವಿಶ್ವ ಸಮ್ಮೇಳನದ 2ನೇ ದಿನವಾದ ಶುಕ್ರವಾರವೂ ಬೆಳಿಗ್ಗೆ 9ರಿಂದ ರಾತ್ರಿ 8ಗಂಟೆವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 9 ಗಂಟೆಗೆ ಮುಖ್ಯ ವೇದಿಕೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹರಿಹರಪುರ ಮಠದ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಕುಕ್ಕೆ ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ, ಈಶ ಫೌಂಡೇಷನ್‌ನ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್, ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ನಿತ್ಯಸ್ಥಾನಂದ, ಗೌರಿಗದ್ದೆಯ ವಿನಯ್ ಗುರೂಜಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ವಿಆರ್‌ಎಲ್ ಸಮೂಹದ ಮುಖ್ಯಸ್ಥ ವಿಜಯ್ ಸಂಕೇಶ್ವರ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಉದಯವಾಣಿ ಸಂಪಾದಕ ರವಿಶಂಕರ್ ಭಟ್ ಇರಲಿದ್ದಾರೆ.

ಸಮ್ಮೇಳನದಲ್ಲಿ ವಚನಾನಂದ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಪ್ರೇಕ್ಷಕರು ಯೋಗ ಮಾಡಿದರು (ಎಡ) ಚಂಡೆ ವಾದಕರು ಹಾಗೂ ಗೊಂಬೆ ವೇಷಧಾರಿಗಳು ಪ್ರದರ್ಶನ ನೀಡಿದರು —ಪ್ರಜಾವಾಣಿ ಚಿತ್ರಗಳು

ಸುದ್ದಿ 2 ನಿಮಿಷ

ನವ ವಿವಾಹಿತೆ ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಪತಿ ಹಾಗೂ ಅವರ ಕುಟುಂಬಸ್ಥರ ಕಿರುಕುಳಕ್ಕೆ ಬೇಸತ್ತು ನವ ವಿವಾಹಿತೆಯೊಬ್ಬರು ನೇಣುಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ನಡೆದಿದೆ.

ಬಿ.ಚನ್ನಸಂದ್ರ ನಿವಾಸಿ ಗಾನವಿ(24) ಆತ್ಮಹತ್ಯೆಗೆ ಯತ್ನಿಸಿದವರು. ಗಾನವಿ ಅವರ ಪತಿ ಸೂರಜ್, ಅವರ ಸಹೋದರ ಸಂಜಯ್ ಹಾಗೂ ತಾಯಿ ಜಯಂತಿ ವಿರುದ್ಧ ಪೋಷಕರು ವರದಕ್ಷಿಣೆ, ಕೌಟುಂಬಿಕ ದೌರ್ಜನ್ಯ ಆರೋಪದಡಿ ದೂರು ನೀಡಿದ್ದಾರೆ. ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿದ್ಯಾರಣ್ಯಪುರ ನಿವಾಸಿ ಸೂರಜ್ ಅವರು ಡಿಪ್ಲೊಮಾ ಪದವಿ ಪಡೆದಿದ್ದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅ.29ರಂದು ಗಾನವಿ ಅವರನ್ನು ಮದುವೆ ಆಗಿದ್ದರು.

'₹40 ಲಕ್ಷ ಖರ್ಚು ಮಾಡಿ ಅರಮನೆ ಮೈದಾನದಲ್ಲಿ ಆರತಕ್ಷತೆ ಮಾಡಲಾಗಿತ್ತು. ಅಲ್ಲದೆ, ದಂಪತಿಯನ್ನು ಶ್ರೀಲಂಕಾಕ್ಕೆ ಮಧುಚಂದ್ರಕ್ಕೂ ಕಳುಹಿಸಲಾಗಿತ್ತು. ಆದರೆ, ದಂಪತಿ ಐದನೇ ದಿನಕ್ಕೆ ವಾಪಸ್ ಬಂದಿದ್ದರು. ಈ ಸಂಬಂಧ ಸೂರಜ್ ಹಾಗೂ ಅವರ ಕುಟುಂಬಸ್ಥರನ್ನು ಕೇಳಿದಾಗ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ಎಂದು ಬೆದರಿಸಿದ್ದರು' ಎಂದು ಪೊಲೀಸರು ಹೇಳಿದರು.

'ಬುಧವಾರ ಮಧ್ಯಾಹ್ನ ಕೊಠಡಿಗೆ ತೆರಳಿ ಆತ್ಮಹತ್ಯೆಗೆ ಯತ್ನಿಸಿದ್ದರು. ಕುಟುಂಬದ ಸದಸ್ಯರು ಕೂಡಲೇ ನೇಣು ಕುಣಿಕೆ ಯಿಂದ ಆಕೆಯನ್ನು ಇಳಿಸಿ, ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸದ್ಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾನವಿ ಅವರ ಮಿದುಳು ನಿಷ್ಕ್ರಿಯಗೊಂಡಿದೆ ಎಂಬುದಾಗಿ ವೈದ್ಯರು ತಿಳಿಸಿದ್ದಾರೆ' ಎಂದು ತಿಳಿಸಿದರು.

'ಕಿ.ರಂ. ದಾರಿಯಲ್ಲಿ ಸಾಗೋಣ'

ಬೆಂಗಳೂರು: 'ಕಿ.ರಂ. ತೋರಿದ ಕಾವ್ಯದ 'ಗುಡಿ'ಯ ಬೆಳಕಿನಲ್ಲಿ ನಾವು ಸಾಗಬೇಕು' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದರು. ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ಗುರುವಾರ ಹಮ್ಮಿಕೊಂಡಿದ್ದ ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಿ.ರಂ. ಶಿಷ್ಯರು ರಾಜ್ಯದಾದ್ಯಂತ ಇದ್ದಾರೆ. ಅವರು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಕಿ.ರಂ.ಗೆ ನೀವೆಲ್ಲ ಸೇರಿ ಗುಡಿ ಕಟ್ಟುತ್ತಿದ್ದೀರಾ ಎಂಬ ಪ್ರಶ್ನೆ ಒಮ್ಮೆ ಬಂದಿತ್ತು. ಹೌದು ಎಂದು ಆಗ ಹೇಳಿದ್ದೆವು. ಗುಡಿ ಅಂದರೆ ಬಾಬರಿ ಮಸೀದಿಯನ್ನು ಕೆಡವಿ ರಾಮಮಂದಿರ ಕಟ್ಟಿದ್ರಲ್ಲ, ಅದಲ್ಲ. ಗುಡಿ ಅಂದರೆ ಬಾವುಟ ಎಂಬ ಅರ್ಥವೂ ಇದೆ' ಎಂದು ವಿಶ್ಲೇಷಿಸಿದರು.

'ಪ್ರಶಸ್ತಿ ಸ್ವೀಕರಿಸಿದ ವಿಜಯಾ ಅವರು ಹಿಂದೆ ಎಲ್ಲ ಬೀದಿ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ವ್ಯವಸ್ಥೆಯನ್ನು ಪ್ರಶ್ನಿಸುವ ಕೆಲಸವನ್ನು ಅವರ ನಾಟಕಗಳು ಸಹಿತ ಎಲ್ಲ ಬರಹಗಳಲ್ಲೂ ಮಾಡುತ್ತಿದ್ದರು' ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿದ ಲೇಖಕಿ ವಿಜಯಾ ಮಾತನಾಡಿ, 'ಈಗ ನನಗೆ 84 ವರ್ಷ ಆಗಿದೆ. ಪ್ರಶಸ್ತಿ ಸ್ವೀಕರಿಸಿ ಸಂಭ್ರಮಿಸುವ ವಯಸ್ಸು ನನ್ನದಲ್ಲ. ಬೇರೆ ಪ್ರಶಸ್ತಿಯಾಗಿದ್ದರೆ ನಿರಾಕರಿಸುತ್ತಿದ್ದೆ. ಕಿ.ರಂ. ಅವರ ಹೆಸರಲ್ಲಿ ನೀಡಿದ ಕಾರಣಕ್ಕೆ ಪ್ರಶಸ್ತಿಯಾಗಿ ಅಲ್ಲ, ಪ್ರಸಾದ ಎಂದು ಸ್ವೀಕರಿಸಿದ್ದೇನೆ' ಎಂದು ತಿಳಿಸಿದರು. ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ನಲ್ಲೂರು ಪ್ರಸಾದ್ ಆರ್.ಕೆ. ಅಧ್ಯಕ್ಷತೆ ವಹಿಸಿದ್ದರು. ಕವಿ ಪಿ. ಮಲ್ಲಿಕಾರ್ಜುನಪ್ಪ, ಪ್ರಾಧ್ಯಾಪಕ ರುದ್ರೇಶ್ ಅದರಂಗಿ, ಕಿ.ರಂ. ಅವರ ಮಕ್ಕಳಾದ ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ ಉಪಸ್ಥಿತರಿದ್ದರು.

37 ಲಕ್ಷ ಕುಟುಂಬಕ್ಕಿಲ್ಲ ಸೂರು

ಒಂದನೇ ಪುಟದಿಂದ...

ರಾಜ್ಯ ಸರ್ಕಾರ ವಿವಿಧ ವಸತಿ ಯೋಜನೆಗಳ ಅಡಿ 2024-25ನೇ ಸಾಲಿನಲ್ಲಿ 7.38 ಲಕ್ಷ ಮನೆ ಗಳನ್ನು ನಿರ್ಮಾಣ ಮಾಡುವುದಾಗಿ ಘೋಷಿಸಿತ್ತು. 3.27 ಲಕ್ಷ ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ. ಇನ್ನೂ 4.11 ಲಕ್ಷ ಮನೆಗಳ ಅನುಮೋದನೆ ಬಾಕಿ ಇದೆ. 2025-26ನೇ ಹಣಕಾಸು ವರ್ಷ ಮುಗಿಯುತ್ತಾ ಬಂದರೂ ಅನುಮೋದನೆ ನೀಡಿದ ಮನೆಗಳಲ್ಲಿ ಪೂರ್ಣ ಗೊಂಡಿರುವುದು 9,839 ಮನೆಗಳು ಮಾತ್ರ. 46,540 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 2.70 ಲಕ್ಷ ಮನೆಗಳ ನಿರ್ಮಾಣ ಕಾರ್ಯ ಇದುವರೆಗೂ ಆರಂಭವಾಗಿಲ್ಲ. ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ 2024-25 ರಲ್ಲಿ ರಾಜ್ಯದಲ್ಲಿ 2.74 ಲಕ್ಷ ಮನೆ ನಿರ್ಮಾಣದ ಗುರಿ ಹೊಂದಲಾಗಿತ್ತು. ಇಲ್ಲಿಯವರೆಗೆ 4,443 ಮನೆಗಳು ಮಾತ್ರ ನಿರ್ಮಾಣವಾಗಿವೆ.

ಮನೆಗಳ ಅಪೂರ್ಣಕ್ಕೆ ಕಾರಣ...

- ಆಶ್ರಯ ಯೋಜನೆಗಳಲ್ಲಿ ಮನೆಗಳ ನಿರ್ಮಾಣ ಕಾರ್ಯಗಳು ನಿರೀಕ್ಷೆಯಂತೆ ಅನುಷ್ಠಾನಗೊಳ್ಳದೇ ಇರಲು ಪ್ರಮುಖ ಕಾರಣ ಸರ್ಕಾರ ನೀಡುವ ಕಡಿಮೆ ವಂತಿಗೆ, ವಂತಿಗೆ ನೀಡುವಲ್ಲಿನ ವಿಳಂಬ.
- ಪ್ರತಿ ಮನೆಗಳ ನಿರ್ಮಾಣಕ್ಕೆ ಸರ್ಕಾರ ₹1.20 ಲಕ್ಷ ನಿಗದಿ ಮಾಡಿದೆ. ಉದ್ಯೋಗ ಖಾತ್ರಿ ಯೋಜನೆ ಯಡಿ ₹20,000 ಭರಿಸಲಾಗುತ್ತದೆ. ಅಲ್ಲಿಗೆ ಒಂದು ಮನೆಯ ನಿರ್ಮಾಣಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರ ಭರಿಸುವ ವೆಚ್ಚ ₹1.40 ಲಕ್ಷ ಮಾತ್ರ. ಉಳಿದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಿದೆ.
- 'ಕಳೆದ ನಾಲ್ಕು ತಿಂಗಳಿನಿಂದ ಹಣ ಬಿಡುಗಡೆ ಯಾಗಿಲ್ಲ. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಕೇಂದ್ರದ ಪಾಲೂ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ' ಎನ್ನುತ್ತಾರೆ ವಸತಿ ಯೋಜನೆ ಹೋರಾಟ ಸಮಿತಿ ಕಾರ್ಯದರ್ಶಿ ನಿರಂಜನ್.
- 'ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ವಿಳಂಬ, ನಿವೇಶನಗಳ ಪಕ್ಕಾ ದಾಖಲೆಗಳ ಕೊರತೆ, ಸಾಲ ಮಂಜೂರಾತಿ ವಿಳಂಬ ಮತ್ತಿತರ ಸಮಸ್ಯೆಗಳಿಂದ ಮನೆಗಳ ನಿರ್ಮಾಣ ಕಾರ್ಯ ನಿರೀಕ್ಷೆಯಂತೆ ನಡೆಯುತ್ತಿಲ್ಲ. ಬಡತನದ ರೇಖೆ ಗಿಂತ ಕೆಳಗಿರುವ ವಸತಿ ರಹಿತ ಕುಟುಂಬಗಳಿಗೆ ಸರ್ಕಾರವೇ ಪೂರ್ಣಮೊತ್ತ ಪಾವತಿಸಿ ಮನೆ ನಿರ್ಮಾಣ ಮಾಡಿಕೊಡಬೇಕು' ಎನ್ನುತ್ತಾರೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಅಧ್ಯಕ್ಷ ಕಾಡಶೆಟ್ಟಹಳ್ಳಿ ಸತೀಶ್.

'ಶಾಮನೂರರ ಕೊಡುಗೆ ಅಪಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನಲ್ಲಿ 1,000 ವಿದ್ಯಾರ್ಥಿನಿಯರಿಗೆ ವಸತಿ ಕಲ್ಪಿಸುವ ಸಾಮರ್ಥ್ಯದ ವಿದ್ಯಾರ್ಥಿನಿಲಯ ನಿರ್ಮಿಸಬೇಕು ಎಂಬುದು ಶಾಮನೂರು ಶಿವಶಂಕರಪ್ಪ ಅವರ ಕನಸಾಗಿತ್ತು. ಅದನ್ನು ನನಸು ಮಾಡುತ್ತೇವೆ' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಬಿ.ಖಂಡ್ರೆ ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾವು ನಗರದ ತರಳಬಾಳು ಭವನದಲ್ಲಿ ಆಯೋಜಿಸಿದ್ದ ಶಾಮನೂರು ಶಿವಶಂಕರಪ್ಪ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ವಿದ್ಯಾರ್ಥಿನಿಲಯ ಸ್ಥಾಪನೆಗೆ ಈಗಾಗಲೇ ಎರಡು ಎಕರೆ ಜಮೀನು ಖರೀದಿಸಲಾಗಿದ್ದು, ಕಟ್ಟಡದ ರೂಪುರೇಷೆ ಸಿದ್ಧವಾಗಿದೆ' ಎಂದು ಅವರು ಮಾಹಿತಿ ನೀಡಿದರು.

'ನಮ್ಮೆಲ್ಲರಿಂದ ಅಪ್ಪಾಜಿ ಎಂದೇ ಕರೆಯಿಸಿಕೊಳ್ಳುತ್ತಿದ್ದ ಶಾಮನೂರು ಆಡಳಿತ ಪಕ್ಷದಲ್ಲೇ ಇರಲಿ, ವಿರೋಧ ಪಕ್ಷದಲ್ಲೇ ಇರಲಿ, ಯಾರಿಗೂ ಅಂಜದೆ ನಿಷ್ಠುರವಾಗಿ ಮಾತನಾಡುತ್ತಿದ್ದರು. ಸಮಾಜದ ಹಿತ ಕಾಯುವುದಷ್ಟೇ ಅವರಿಗೆ ಮುಖ್ಯವಾಗಿತ್ತು' ಎಂದರು.

ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರು, 'ಶಾಮನೂರು ಶಿವಶಂಕರಪ್ಪ ಅವರು ಉದ್ಯಮಿಯಾಗಿ, ಶಾಸಕರಾಗಿ, ಸಚಿವರಾಗಿ ಈ ಸಮಾಜಕ್ಕೆ ಮಹತ್ತರ ಕೊಡುಗೆ ನೀಡಿದ್ದಾರೆ. ಶಿಕ್ಷಣ, ಉದ್ಯಮ, ರಾಜಕೀಯ ಕ್ಷೇತ್ರ ಒಳಗೊಂಡು ದಾವಣಗೆರೆ ಜಿಲ್ಲೆಯನ್ನು ವಿಶ್ವದ ಭೂಪಟದಲ್ಲಿ ಕಾಣುವಂತೆ ಮಾಡಿದರು' ಎಂದು ಹೇಳಿದರು.

ಸುತ್ತೂರು ಸಂಸ್ಥಾನದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮಾತನಾಡಿ, 'ಕೈಗಾರಿಕಾ ನಗರವಾಗಿದ್ದ ದಾವಣಗೆರೆಯನ್ನು ಶಿಕ್ಷಣ ಕಾಶಿಯಾಗಿ ಪರಿವರ್ತಿಸಿದ ಕೀರ್ತಿ ಶಾಮನೂರು ಶಿವಶಂಕರಪ್ಪ ಅವರಿಗೆ ಸಲ್ಲುತ್ತದೆ' ಎಂದು ತಿಳಿಸಿದರು.

ಸಂಸದ ಬೊಮ್ಮಾಯಿ ಅವರು ಮಾತನಾಡಿ, 'ಭವಿಷ್ಯದಲ್ಲಿ ವೀರಶೈವ-ಲಿಂಗಾಯತ ಸಮಾಜದ ಸಾಮಾಜಿಕ ರಾಜಕೀಯ ಸವಾಲುಗಳನ್ನು ನಿಭಾಯಿಸಲು, ಮಹಾಸಭೆ ಅಡಿಯಲ್ಲಿ ಎಲ್ಲರೂ ಸೇರಿ ಕೆಲಸ ಮಾಡಿದಾಗ ಮಾತ್ರ ಶಾಮನೂರು ಶಿವಶಂಕರಪ್ಪ ಅವರಿಗೆ ನಿಜವಾದ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಸಚಿವ ಶರಣ ಪ್ರಕಾಶ ಪಾಟೀಲ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ತುಮಕೂರಿನ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿರಿಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮತ್ತು ಮಹಾಸಭಾ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಬಿ.ಖಂಡ್ರೆ ಅವರು ಶಾಮನೂರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಅಪಘಾತ: ನಾಲ್ವರು ಯುವಕರ ಸಾವು

ಚಿಕ್ಕಬಳ್ಳಾಪುರ: ನಗರದ ಹೊರವಲಯದ ಚಿಂತಾಮಣಿ ರಸ್ತೆಯ ಅಜ್ಜವಾರ ಬಳಿ ಗುರುವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ನಾಲ್ವರು ಯುವಕರು ಮೃತಪಟ್

Prestige®
ಕುಕ್ಕಿಂಗನ್ನು ಪ್ರೀತಿಸುವವರು,
ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ.

ಪತಿ ಕೊಂದ ಪತ್ನಿ ಬಂಧನ

ಬೆಂಗಳೂರು: ಪತಿಗೆ ಚಾಕುವಿನಿಂದ ಇರಿದು ಕೊಲೆ ಮಾಡಿದ್ದ ಪತ್ನಿಯನ್ನು ವರ್ತೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂನ ರಾಜೀವ್ ರಜಪೂತ್ (29) ಕೊಲೆಯಾದವರು. ಅವರ ಪತ್ನಿ ರುಬಿನಾ ಕೌರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಎಂಟು ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿಗೆ ಒಂದು ಮಗುವಿದೆ. ಎರಡು ವರ್ಷಗಳ ಹಿಂದೆ ನಗರಕ್ಕೆ ಬಂದು ಮುನ್ನೇನಕೊಳಾಲು ಬಳಿಯ ಸಿಲ್ವರ್ ಪಾರ್ಕ್ ಲೇಔಟ್ ಬಾಡಿಗೆ ಮನೆಯಲ್ಲಿ ನೆಲಸಿದ್ದರು.

'ರಾಜೀವ್ ರಜಪೂತ್ ಅವರು ಯಾವುದೇ ಕೆಲಸಕ್ಕೆ ಹೋಗದೆ ನಿತ್ಯ ಪಾನಮತ್ತರಾಗಿ ಮನೆಗೆ ಬಂದು ಪತ್ನಿಯ ಜತೆ ಜಗಳ ಆಡುತ್ತಿದ್ದರು. ಕುಟುಂಬ ನಿರ್ವಹಣೆಗಾಗಿ ತಾನು ಕೆಲಸಕ್ಕೆ ಹೋಗುವುದಾಗಿ ರುಬಿನಾ ಕೌರ್ ಹೇಳಿದ್ದರೂ ಪತಿ ಅದಕ್ಕೆ ಒಪ್ಪಿರಲಿಲ್ಲ. ಇದರಿಂದ ಹಣಕಾಸು ಸಮಸ್ಯೆಯಾಗಿ ದಂಪತಿ ಮಧ್ಯೆ ಜಗಳವಾಗುತ್ತಿತ್ತು' ಎಂದು ಪೊಲೀಸರು ಹೇಳಿದರು.

'ರಾಜೀವ್ ರಜಪೂತ್, ಗುರುವಾರ ಬೆಳಿಗ್ಗೆಯೇ ಮದ್ಯ ಸೇವಿಸಿ ಬಂದು ಪತ್ನಿಯ ಜತೆ ಜಗಳವಾಡಿದ್ದರು. ಜಗಳ ವಿಕೋಪಕ್ಕೆ ಹೋಗಿ ರುಬಿನಾ ಕೌರ್ ಅವರು ಪತಿಗೆ ಚಾಕು ಇರಿದು ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಅಶ್ಲೀಲ ಸಂದೇಶ: ತನಿಖೆಗೆ ತಂಡ

ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದ ದರ್ಶನ್ ಪತ್ನಿ ವಿಜಯಲಕ್ಷ್ಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿರುವ ಕಿಡಿಗೇಡಿಗಳ ಬಂಧನಕ್ಕೆ ಮೂರು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದೆ.

ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ವಿಜಯಲಕ್ಷ್ಮಿ ಅವರು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ಬುಧವಾರ ದೂರು ನೀಡಿದ್ದರು. ಆ ದೂರು ಆಧರಿಸಿ ಯೋಗಿ ಕಿಚ್ಚ, ಮಿ.ಅನಾಥ, ಮಹಿ ಕಿಚ್ಚ, ವಿರಾಟ್ ಕಿಚ್ಚ ಹೆಸರಿನಲ್ಲಿದ್ದ ಖಾತೆ ಸೇರಿದಂತೆ 18 ಇನ್‌ಸ್ಟಾಗ್ರಾಂ ಖಾತೆಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಚುರುಕು ಮಾಡಲಾಗಿದೆ. ಕಿಡಿಗೇಡಿಗಳು ಬೇರೆ ಬೇರೆ ವಿಜಯಲಕ್ಷ್ಮಿ ಹೆಸರಿನಲ್ಲಿ ಖಾತೆಗಳನ್ನು ನಿರ್ವಹಣೆ ಮಾಡುತ್ತಿರುವುದು ಕಂಡುಬಂದಿದೆ. ಖಾತೆಗಳ ಬಳಕೆದಾರರು ಯಾರು ಎಂಬುದನ್ನು ಪತ್ತೆ ಮಾಡಲಾಗಿದೆ. ಸದ್ಯ ಕೆಲವು ಖಾತೆಗಳಲ್ಲಿದ್ದ ಅಶ್ಲೀಲ ಬರಹಗಳನ್ನು ಅಳಿಸಿ ಹಾಕಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಸಾಮಾಜಿಕ ಜಾಲತಾಣಗಳ ಮೂಲಕ ವಿಜಯಲಕ್ಷ್ಮಿ ಹಾಗೂ ಅವರ ಕುಟುಂಬಸ್ಥರನ್ನು ನಿಂದಿಸಿ 150ಕ್ಕೂ ಪೋಸ್ಟ್ ಹಾಕಿರುವುದು ತನಿಖೆ ವೇಳೆ ಕಂಡುಬಂದಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ದಾವಣಗೆರೆಯಲ್ಲಿ ಆಯೋಜಿಸಿದ್ದ 'ಡೆವಿಲ್' ಸಿನಿಮಾದ ಪ್ರಚಾರದಲ್ಲಿ ಯಾರು ಏನೇ ಹೇಳಿದರೂ ತಲೆಕೆಡಿಸಿಕೊಳ್ಳಬೇಡಿ ಎಂದು ಅಭಿಮಾನಿಗಳಿಗೆ ಕರೆ ನೀಡಿದ್ದೆ. ಈ ಬಗ್ಗೆ ಹಲವರು ಸಾಮಾಜಿಕ ಜಾಲತಾಣದ ಮೂಲಕ ನನ್ನ ಹಾಗೂ ನಮ್ಮ ಕುಟುಂಬದ ಕುರಿತು ಅಶ್ಲೀಲ ಸಂದೇಶಗಳನ್ನು ಹಾಕುತ್ತಿದ್ದಾರೆ. ಅದರಿಂದ ನಮ್ಮ ಗೌರವಕ್ಕೆ ಧಕ್ಕೆಯಾಗುತ್ತಿದ್ದು, ಮನಸ್ಸಿಗೆ ತೀವ್ರ ನೋವುಂಟು ಮಾಡಿದೆ. ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ವಿಜಯಲಕ್ಷ್ಮಿ ಅವರು ದೂರಿನಲ್ಲಿ ಕೋರಿದ್ದರು.

ನಟಿ ರಮ್ಯಾ ಅವರಿಗೂ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ಹಿಂದೆ ಬೆದರಿಕೆ ಸಂದೇಶ ಕಳುಹಿಸಲಾಗಿತ್ತು. ಅವರು ನೀಡಿದ್ದ ದೂರು ಆಧರಿಸಿ, 11 ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ನವ ವಿವಾಹಿತೆ ಆತ್ಮಹತ್ಯೆ ಪತಿ ಸೇರಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ



ಐಶ್ವರ್ಯಾ ಹಾಗೂ ಲಿಖಿತ್

ಬೆಂಗಳೂರು: ಬಾಗಲಗುಂಟೆ ಬಳಿಯ ಬಾಬಣ್ಣ ಲೇಔಟ್‌ನಲ್ಲಿ ಐಶ್ವರ್ಯಾ(26) ಎಂಬ ನವವಿವಾಹಿತೆ ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಐಶ್ವರ್ಯಾ ಅವರು ಒಂದು ತಿಂಗಳ ಹಿಂದೆ ಬಾಬಣ್ಣ ಲೇಔಟ್ ನಿವಾಸಿ ಲಿಖಿತ್ ಅವರನ್ನು ಮದುವೆ ಆಗಿದ್ದರು. ಐಶ್ವರ್ಯಾ ಅವರು ಎಂಬಿಎ ಓದಿದ್ದರು. ಲಿಖಿತ್ ಡಿಪ್ಲೊಮಾ ಓದಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು.

'ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಐಶ್ವರ್ಯಾ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಕುಟುಂಬಸ್ಥರು ಆರೋಪಿಸಿ ದೂರು ನೀಡಿದ್ದಾರೆ.

ನೇಣು ಬಿಗಿದ ಸ್ಥಿತಿಯಲ್ಲಿ ಐಶ್ವರ್ಯಾ ಅವರ ಮೃತದೇಹ ಪತ್ತೆಯಾಗಿದೆ.

'ಲಿಖಿತ್ ಮತ್ತು ಕುಟುಂಬ ಸದಸ್ಯರು ತವರು ಮನೆಯಿಂದ ಹಣ ಹಾಗೂ ಚಿನ್ನಾಭರಣ ತರುವಂತೆ ಐಶ್ವರ್ಯಾ ಅವರಿಗೆ ಕಿರುಕುಳ ನೀಡುತ್ತಿದ್ದರು.

ಅಪರಾಧ ಸುದ್ದಿ

ಲಿಖಿತ್, ಸಣ್ಣಪುಟ್ಟ ವಿಚಾರಕ್ಕೂ ಪತ್ನಿಯೊಂದಿಗೆ ಜಗಳವಾಡಿ ನಿಂದಿಸುತ್ತಿದ್ದರು. ಪ್ರತಿ ವಿಚಾರ ದಲ್ಲೂ ತಾಯಿಯ ಆಣತಿಯಂತೆ ನಡೆದು-ಕೊಳ್ಳುತ್ತಿದ್ದರು. ಈ ವಿಷಯ ತಿಳಿದು ಐಶ್ವರ್ಯಾ ಕುಟುಂಬಸ್ಥರು ಬುಧವಾರ ಬೆಳಿಗ್ಗೆ ಲಿಖಿತ್ ಮನೆಗೆ ಬಂದು ಮಾತುಕತೆ ನಡೆಸಿ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಲಿಖಿತ್ ಹಾಗೂ ಕುಟುಂಬಸ್ಥರು, ಮಗಳಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು. ಪುತ್ರಿಯನ್ನು ಕೊಲೆ ಮಾಡಿ ನೇಣು ಹಾಕಿದ್ದಾರೆ ಎಂದು ಐಶ್ವರ್ಯಾ ಅವರ ತಂದೆ ಕೃಷ್ಣ ಅವರು ದೂರು ಕೊಟ್ಟಿದ್ದಾರೆ. ಕೊಲೆ, ವರದಕ್ಷಿಣೆ ಸಾವು ಪ್ರಕರಣ ದಾಖಲಿಸಿಕೊಂಡು ಲಿಖಿತ್ ಹಾಗೂ ಅವರ ಕುಟುಂಬದವರಾದ ಅರುಣಾ, ವರುಣ್ ಎಂಬುವವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಭವಿಷ್ಯದ ಕುಕ್ಕಿಂಗನ್ನು ಗಿಫ್ಟ್ ಮಾಡಿ

ಹಲವೆಡೆ ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಆರ್‌ಎಸ್ 220/66/11 ಕೆ.ವಿ. ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಡಿ. 27 ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಪೀಣ್ಯ ಗ್ರಾಮ, ಎಸ್‌ಆರ್‌ಎಸ್ ರಸ್ತೆ, ಎಂಇಐ ಫ್ಯಾಕ್ಟರಿ, ರಾಜಗೋಪಾಲ ನಗರ, ಕಸ್ತೂರಿ ಬಡಾವಣೆ, ಜಿಕೆಡಬ್ಲ್ಯೂ ಲೇಔಟ್, ಬೈರವೇಶ್ವರ ನಗರ, 10ನೇ ಕ್ರಾಸ್, ಒಂದನೇ ಹಂತದ ಪೀಣ್ಯ ಕೈಗಾರಿಕಾ ಪ್ರದೇಶ, ಮೂರನೇ ಕ್ರಾಸ್, ನಾಲ್ಕನೇ ಕ್ರಾಸ್, ಒಂದನೇ ಹಂತ ಪೀಣ್ಯ ಕೈಗಾರಿಕಾ ಪ್ರದೇಶ, ಅನು ಸೋಲಾರ್ ರಸ್ತೆ, ಸ್ನೋ ವೈಟ್ ರಸ್ತೆ, ಸನ್‌ರೈಸ್ ಕಾಸ್ಟಿಂಗ್ ರಸ್ತೆ, ವೈಷ್ಣವಿ ಮಾಲ್, ಗೃಹಲಕ್ಷ್ಮಿ ಅಪಾರ್ಟ್‌ಮೆಂಟ್, ಎಸ್.ಎಂ. ರಸ್ತೆ, ಜಾಲಹಳ್ಳಿ ಕ್ರಾಸ್, ಚೊಕ್ಕಸಂದ್ರ, ಮಾರುತಿ ಲೇಔಟ್, ಕೆಂಪಯ್ಯ ಲೇಔಟ್, ಜಿ.ಜಿ ಪಾಳ್ಯ, ಇಸ್ರೊ, ನಾರಾಯಣಪುರ, ಎನ್.ಟಿ.ಟಿ.ಎಫ್ ವೃತ್ತ, ಗಣಪತಿನಗರ ಮುಖ್ಯರಸ್ತೆ, ಪೊಲೀಸ್ ಠಾಣೆ ರಸ್ತೆ, ಚಾಮುಂಡಿಪುರ, ರಾಜೇಶ್ವರಿನಗರ, ಆಕಾಶ್ ಥಿಯೇಟರ್ ರಸ್ತೆ, ಬ್ಯಾಂಕ್ ಕಾಲೊನಿ, ಮುನೇಶ್ವರ ಲೇಔಟ್, ಕೆ.ಜಿ. ಲೇಔಟ್, ರಾಜೀವ್‌ಗಾಂಧಿ ನಗರ, ಚೌಡೇಶ್ವರಿ ನಗರ, ಲಗ್ಗೆರೆ ಹಳೆ ಗ್ರಾಮ, ಪೀಣ್ಯ ನಾಲ್ಕನೇ ಹಂತ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

507 ಚಾಲಕರು, ಸವಾರರ ವಿರುದ್ಧ ಎಫ್‌ಐಆರ್

ಬೆಂಗಳೂರು: ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಿರುವ ನಗರದ ಸಂಚಾರ ಪೊಲೀಸರು, ಒಂದೇ ದಿನ 507 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಮದ್ಯಪಾನ ಮಾಡಿ ವಾಹನ ಚಾಲನೆಯ ವಿರುದ್ಧ ಬುಧವಾರ ರಾತ್ರಿ ನಗರದಾದ್ಯಂತ ವಿಶೇಷ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಚರಣೆ ವೇಳೆ 33,375ಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆ ಮಾಡಲಾಯಿತು. ಸಂಚಾರ ನಿಯಮ ಉಲ್ಲಂಘಿಸಿ ಸವಾರರು ಹಾಗೂ ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ಈ ವಿಶೇಷ ಕಾರ್ಯಾಚರಣೆಯನ್ನು ನಿರಂತರವಾಗಿ ನಡೆಸಲಾಗುವುದು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ. ಡಿ.22ರಿಂದ 24ರ ವರೆಗೆ ನಡೆದ ಈ ವಿಶೇಷ ಕಾರ್ಯಾಚರಣೆಯಲ್ಲಿ 89,236ಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆ ನಡೆಸಲಾಗಿದೆ. ಒಟ್ಟು 1,295 ಸವಾರರು, ಚಾಲಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹೇಳಿದರು.

ಬೀದಿ ನಾಯಿ ದತ್ತು: ಅವಕಾಶ

ಬೆಂಗಳೂರು: ಸಮುದಾಯದ ನಾಯಿಗಳು/ಬೀದಿ ನಾಯಿಗಳನ್ನು ಮಾನವೀಯ ನಿರ್ವಹಣೆಯ ಭಾಗವಾಗಿ, ಸಾರ್ವಜನಿಕರು, ಸಂಘ-ಸಂಸ್ಥೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ದತ್ತು ಪಡೆದುಕೊಳ್ಳುವಂತೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ಕೋರಿದೆ.

ದತ್ತು ನೀಡಲಾಗುವ ನಾಯಿಗಳ ಆರೋಗ್ಯ ತಪಾಸಣೆ ಮಾಡಿ, ಲಸಿಕೆ ನೀಡಿ, ಸಂತಾನಶಕ್ತಿ ನಿರೋಧಕ ಶಸ್ತ್ರಚಿಕಿತ್ಸೆ ಮಾಡಿರಲಾಗಿರುತ್ತದೆ ಎಂದು ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ದತ್ತು ಪಡೆಯಲು ಇಚ್ಛಿಸುವವರು ಎನ್.ಆರ್. ಚೌಕ ದಲ್ಲಿರುವ ಪಾಲಿಕೆಯ ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು.

ನಗರದಲ್ಲಿ ಇಂದು

ಪ್ರಾಂಶುಪಾಲರ ಸಮಾಲೋಚನಾ ಸಭೆ, ಸನ್ಮಾನ ಸಮಾರಂಭ: ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಅತಿಥಿಗಳು: ಸಿ.ಎಸ್. ಷಡಕ್ಷರಿ, ಜಿ. ಶೋಭಾ, ಅಧ್ಯಕ್ಷತೆ: ಮನೋಜಕುಮಾರ್ ಕೊಳ್ಳಾ, ಆಯೋಜನೆ: ಬೆಂಗಳೂರು ದಕ್ಷಿಣ ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ, ಸ್ಥಳ: ಮಂಗಳ ಮಂಟಪ, ಎನ್.ಎಂ.ಕೆ.ಆರ್.ವಿ. ಪದವಿ ಪೂರ್ವ ಕಾಲೇಜು, ಜಯನಗರ, ಬೆಳಿಗ್ಗೆ 9.30

ಎ.ಬಿ. ಪಾಟೀಲ ಅವರ 'ಅಶೋಕವೃಕ್ಷ' ಅಭಿನಂದನಾ ಗ್ರಂಥ ಬಿಡುಗಡೆ, 70ನೇ ವರ್ಷದ ಸಂಭ್ರಮದ ಉದ್ಘಾಟನೆ: ನಿಶ್ಚಲಾನಂದನಾಥ ಸ್ವಾಮೀಜಿ, ಗ್ರಂಥ ಬಿಡುಗಡೆ: ಎನ್. ಚಲುವರಾಯಸ್ವಾಮಿ, ಗ್ರಂಥದ ಪರಿಚಯ: ಎಲ್.ಎನ್. ಮುಕುಂದರಾಜ್, ಅತಿಥಿಗಳು: ಶಿವಾನಂದ ಎಸ್. ಪಾಟೀಲ, ಲಕ್ಷ್ಮಣ ಎಸ್. ಸವದಿ, ಎನ್.ಎಚ್. ಶಿವಶಂಕರ ರೆಡ್ಡಿ, ಬಿ.ಸಿ. ಪಾಟೀಲ, ವೈ.ಎಸ್. ಪಾಟೀಲ, ಸಿ.ಎನ್. ಶಿವಪ್ರಕಾಶ್, ಅಧ್ಯಕ್ಷತೆ: ಅಶೋಕ ದಳವಾಯಿ, ಆಯೋಜನೆ: ಡಾ.ಎ.ಬಿ. ಪಾಟೀಲರ ಅಭಿನಂದನಾ ಸಮಿತಿ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಬೆಂಗಳೂರು ಅಂತರರಾಷ್ಟ್ರೀಯ ಶಾಸ್ತ್ರೀಯ ನೃತ್ಯೋತ್ಸವದ ಉದ್ಘಾಟನೆ: ಪ್ರದೀಪ್ ಕುಮಾರ್, ಭರತನಾಟ್ಯ ಪ್ರದರ್ಶನ: ಆದಿತ್ಯ ಸುಬ್ರಮಣ್ಯಂ, ಶೀಲಾ ಶ್ರೀನಿವಾಸ್, ಮೀರಾ ರತ್ನಾಗಿರಿ, ಆಯೋಜನೆ: ಶಾಂತಲಾ ಆರ್ಟ್ಸ್ ಟ್ರಸ್ಟ್, ಸೂರ್ಯ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಶ್ರಾವ್ಯ ಕುಮಾರ್, ಉಪಸ್ಥಿತಿ: ರತ್ನಾ ಕುಮಾರ್, ಶ್ರೀದೇವಿ ಉನ್ನಿ, ದೀಪಾ ಗಣೇಶ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.30

ಮಾರ್ಗಶೀರ್ಷೋತ್ಸವ: ಬೊಂಬೆ ಆಟ: ರವೀಂದ್ರ ನರಹರಿ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ರೈಲ್ವೆ ದರ ಹೆಚ್ಚಳ: ಎಸ್‌ಯುಸಿಐ ಖಂಡನೆ

ಬೆಂಗಳೂರು: ವರ್ಷದಲ್ಲಿ 2ನೇ ಬಾರಿಗೆ ರೈಲು ಪ್ರಯಾಣ ದರ ಏರಿಕೆ ಮಾಡಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸೋಷಲಿಸ್ಟ್ ಯೂನಿಟಿ ಆಫ್ ಇಂಡಿಯಾ (ಕಮ್ಯೂನಿಸ್ಟ್) ಪಕ್ಷವು ಖಂಡಿಸಿದೆ.

'ಹೆಚ್ಚುತ್ತಿರುವ ರೈಲ್ವೆ ಅಪಘಾತಗಳು, ಸಮಯ ಪಾಲನೆ ಮತ್ತು ಬೋಗಿಗಳ ನಿರ್ವಹಣೆಯ ಕೊರತೆ ಸೇರಿದಂತೆ ಬೆಟ್ಟದಷ್ಟು ಸಮಸ್ಯೆಗಳ ನಡುವೆಯೂ ರೈಲ್ವೆ ಪ್ರಯಾಣದ ದರ ಏರಿಕೆ ಮಾಡಲಾಗಿದೆ. ಕೇಂದ್ರ ಸರ್ಕಾರವು ಸಿಬ್ಬಂದಿ ವೆಚ್ಚದ ಆರ್ಥಿಕ ಹೊರೆಯನ್ನು ಪ್ರಯಾಣಿಕರಿಗೆ ಹೊರಿಸಲು ಈ ಕ್ರಮ ಕೈಗೊಂಡಿದೆ' ಎಂದು ಪಕ್ಷದ ಕಾರ್ಯದರ್ಶಿ ಕೆ. ಉಮಾ ಟೀಕಿಸಿದ್ದಾರೆ.

ಕಾಂಗ್ರೆಸ್ ತೆಕ್ಕೆಗೆ ಡಿಸಿಸಿ ಬ್ಯಾಂಕ್

ರಾಜರಾಜೇಶ್ವರಿ ನಗರ: ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಬಿಡಿಸಿಸಿ) ಅಧ್ಯಕ್ಷ-ಉಪಾಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಎಚ್.ಎನ್.ಅಶೋಕ್, ಎಂ.ರಮೇಶ್ ಅವರು ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾ ಅಧಿಕಾರಿಯಾಗಿದ್ದ ಸಹಕಾರ ಇಲಾಖೆ ಉಪ ನಿರ್ದೇಶಕ ಸಲೀಂ ಅವರು ಆಯ್ಕೆಯನ್ನು ಪ್ರಕಟಿಸಿದರು. ಬೆಂಗಳೂರು ನಗರ, ಬೆಂ. ಗ್ರಾಮಾಂತರ, ಬೆಂಗಳೂರು ದಕ್ಷಿಣ ಜಿಲ್ಲೆಗಳು ಈ ಬ್ಯಾಂಕ್ ವ್ಯಾಪ್ತಿಗೆ ಸೇರುತ್ತವೆ.

ಎಚ್.ಎನ್.ಅಶೋಕ್ ಮಾತನಾಡಿ, 'ರೈತರು, ಸ್ತ್ರೀಶಕ್ತಿ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಸ್ವಯಂ ಉದ್ಯೋಗ, ಗೃಹ ನಿರ್ಮಾಣ, ವಾಣಿಜ್ಯ ಸಂಕೀರ್ಣ, ವಾಹನ ಖರೀದಿ, ಪಶುಸಂಗೋಪನೆ ಚಟುವಟಿಕೆಗೆ ಶೇ 3ರ ಬಡ್ಡಿದರದಲ್ಲಿ ಸಾಲ ಸೌಲಭ್ಯ ನೀಡಲಾಗುವುದು' ಎಂದರು.

ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರ ಸಹೋದರ ಅಶೋಕ್ ಅವರು ಎರಡನೇ ಬಾರಿಗೆ ಆಯ್ಕೆಯಾಗಿದ್ದಾರೆ. ನಿರ್ದೇಶಕರಾದ ಎಂ.ಡಿ.ವಿಜಯದೇವ್, ವೈ.ಎಚ್.ಮಂಜು, ಕೃಷ್ಣಮೂರ್ತಿ, ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಬಾಬು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನಿಸಿದ ಆಮ್ ಆದ್ಮಿ ಪಕ್ಷ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುವ ಆಕಾಂಕ್ಷಿಗಳಿಂದ ಆಮ್ ಆದ್ಮಿ ಪಕ್ಷ (ಎಎಪಿ) ಅರ್ಜಿಗಳನ್ನು ಆಹ್ವಾನಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ, 'ಐದು ನಗರ ಪಾಲಿಕೆಗಳ ಚುನಾವಣೆಯಲ್ಲಿ ಎಎಪಿಯಿಂದ ಸ್ಪರ್ಧಿಸಲು ಇಚ್ಛಿಸುವವರು ಅರ್ಜಿ ಸಲ್ಲಿಸಬಹುದು. ಎಲ್ಲರೂ ಒಂದಾಗಿ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಸುಂದರ ಬೆಂಗಳೂರನ್ನು ಕಟ್ಟೋಣ' ಎಂದರು.

304 ಸ್ಟೇನ್‌ಲೆಸ್ ಸ್ಟೀಲ್
ಫುಡ್ ಗ್ರೇಡ್ ಮತ್ತು ಆರೋಗ್ಯಕರ ಕುಕ್ಕಿಂಗ್
ಅಲ್ಯುಮಿನಿಯಂ ಕೋರ್
ಶೀಘ್ರ ಮತ್ತು ಒಂದೇ ಹದದ ಸತತ ಹೀಟಿಂಗ್
430 ಸ್ಟೇನ್‌ಲೆಸ್ ಸ್ಟೀಲ್
ದೀರ್ಘ ಬಾಳಿಕೆ ಮತ್ತು ಇಂಡಕ್ಷನ್ ಬಳಕೆಗೆ ಸುರಕ್ಷಿತ
ಒಂದೇ ಸಮನಾದ ಉಷ್ಣತೆಯ ಹಂಚಿಕೆಗೆ
ಟ್ರೈ-ಪ್ಲೈ ಬಾಡಿ ಮೆಟೀರಿಯಲ್
Prestige
*ಶರತ್ತುಗಳು ಅನ್ವಯಿಸುತ್ತವೆ.
Prestige Xclusive
Outer Ring Road: Hennur Ph: 7204250679, Tumkur Rd. 8th Mile T.dasarahalli: Ph: 9972541116; Ko

2025 ಹಿನ್ನೋಟ

ದ್ವಿತೀಯಾರ್ಧದಲ್ಲಿ ಪುಟಿದೆದ್ದ ಚಂದನವನ

ವರ್ಷದ ಮೊದಲಾರ್ಧದಲ್ಲಿ ಸ್ಟಾರ್‌ಗಳ ಸಿನಿಮಾಗಳಿಲ್ಲದೆ ಸೊರಗಿದ್ದ ಚಂದನವನದ ತೆರೆಗಳಲ್ಲಿ ನಂತರ ಸಾಲು ಸಾಲು ಬಿಗ್‌ಬಜೆಟ್ ಚಿತ್ರಗಳ ಮೆರವಣಿಗೆ ನಡೆಯಿತು...

2026ರ ಬಹುನಿರೀಕ್ಷಿತ ಸಿನಿಮಾಗಳು

- ಜ.23ಕ್ಕೆ 'ಲ್ಯಾಂಡ್‌ಲಾರ್ಡ್'
- ಮಾರ್ಚ್ 19ಕ್ಕೆ 'ಟಾಕ್ಸಿಕ್'
- ಧ್ರುವ ಸರ್ಜಾ ನಟನೆಯ 'KD'
- ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ'.
- ಸುದೀಪ್ ನಟನೆಯ 'ಬಿಲ್ಲ ರಂಗ ಬಾಷಾ'
- ಹೇಮಂತ್ ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್'

• ಅಭಿಲಾಷ್ ಪಿ.ಎಸ್.

ಈ ವರ್ಷದ ಚಂದನವನದ ಮೊದಲಾರ್ಧ ಕಳೆದ ವರ್ಷದಂತೆಯೇ ಇತ್ತು. 'ಎ' ಶ್ರೇಣಿಯ ಸ್ಟಾರ್‌ಗಳ ಸಿನಿಮಾವಿಲ್ಲದೆ ಸುಮಾರು ಐದಾರು ತಿಂಗಳು ಚಿತ್ರಮಂದಿರಗಳು ಬಿಕೋ ಎಂದವು. ದ್ವಿತೀಯಾರ್ಧ-ದಲ್ಲಿ ಟಾಪ್ ಹೀರೊಗಳ ಸಿನಿಮಾಗಳು ಸಾಲು ಸಾಲಾಗಿ ತೆರೆಕಂಡು ಚಿತ್ರಮಂದಿರಗಳು ತುಂಬಿದವು. ಭಾರತದಲ್ಲೇ ಅತಿ ಹೆಚ್ಚು ಗಳಿಕೆ ಮಾಡಿದ ಸಿನಿಮಾಗಳ ಪಟ್ಟಿಯಲ್ಲಿ ರಿಷಬ್ ಶೆಟ್ಟಿ ನಿರ್ದೇಶನದ ಪ್ಯಾನ್ ಇಂಡಿಯಾ ಸಿನಿಮಾ 'ಕಾಂತಾರ-ಚಾಪ್ಟರ್ 1' ಎರಡನೇ ಸ್ಥಾನ ಪಡೆಯಿತು. ಈ ವರ್ಷ 226 ಕನ್ನಡ ಸಿನಿಮಾಗಳು ತೆರೆಕಂಡರೂ ಈ ಪೈಕಿ ಸದ್ದು ದುಡ್ಡು ಮಾಡಿದ್ದು ಬೆರಳೆಣಿಕೆಯಷ್ಟೇ ಸಿನಿಮಾಗಳು.

2024ರ ಡಿಸೆಂಬರ್ ಕೊನೆ ವಾರದಲ್ಲಿ ತೆರೆಕಂಡ ಉಪೇಂದ್ರ ನಟನೆಯ 'ಯುಐ' ಮತ್ತು ಸುದೀಪ್ ನಟನೆಯ 'ಮ್ಯಾಕ್ಸ್'ನ ಓಟದೊಂದಿಗೆ 2025 ಆರಂಭವಾಗಿತ್ತು. ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಸುಮಾರು 90 ಸಿನಿಮಾಗಳು ತೆರೆಗೆ ಬಂದಿದ್ದವು. ಈ ಪೈಕಿ 28 ದಿನಗಳನ್ನಷ್ಟೇ ಹೊಂದಿದ್ದ ಫೆಬ್ರುವರಿಯಲ್ಲಿ 36 ಸಿನಿಮಾಗಳು ತೆರೆಕಂಡವು. ಫೆಬ್ರುವರಿ 21ರ ಶುಕ್ರವಾರದ 11 ಸಿನಿಮಾಗಳು ತೆರೆಕಂಡಿದ್ದೂ ಇದೆ! ಇವುಗಳಲ್ಲಿ ಗಳಿಕೆಯಲ್ಲಿ ಕೊಂಚ ಸದ್ದು ಮಾಡಿದ್ದು ಶರಣ್ ನಟನೆಯ 'ಛೂ ಮಂತರ್' ಹಾಗೂ ಅಜಯ್ ರಾವ್ ನಿರ್ದೇಶಿಸಿ ನಟಿಸಿದ್ದ 'ಯುದ್ಧಕಾಂಡ' ಮಾತ್ರ. ಯೋಗರಾಜ್ ಭಟ್ ನಿರ್ದೇಶನದ 'ಮನದ ಕಡಲು' ವ್ಯಾಪಕ ಪ್ರಚಾರ ಪಡೆಯಿತಾದರೂ ಗಳಿಕೆಯಲ್ಲಿ ಸದ್ದು ಮಾಡಲಿಲ್ಲ. ಮಾರ್ಚ್ ಮಾಸಾಂತ್ಯದಿಂದ ಸಿನಿಮಾ ಬಿಡುಗಡೆ ಪ್ರಮಾಣ ಇಳಿಕೆಯಾಯಿತು. ವಾರಕ್ಕೆ ಮೂರ್ನಾಲ್ಕು ಸಿನಿಮಾಗಳು ತೆರೆಕಂಡರೂ ಜನರು ಚಿತ್ರಮಂದಿರದತ್ತ ಸುಳಿಯದ ಸ್ಥಿತಿ ನಿರ್ಮಾಣವಾಗಿತ್ತು. ಭಿನ್ನ ನಿರೂಪಣೆಯಿಂದಾಗಿ 'ಫೈರ್‌ಫ್ಲೈ' ಕೊಂಚ ಗಮನ ಸೆಳೆಯಿತು.

ಜೂನ್ ಮೊದಲ ವಾರದಲ್ಲಿ ತೆರೆಕಂಡ ವಿನೋದ್ ಪ್ರಭಾಕರ್ ನಟನೆಯ 'ಮಾದೇವ' ಒಳ್ಳೆಯ ಅಭಿಪ್ರಾಯ ಹೊಂದುವ ಮೂಲಕ ಚಂದನವನದ ದ್ವಿತೀಯಾರ್ಧ ಆರಂಭವಾಯಿತು. ಭಿನ್ನ ಪಾತ್ರದಲ್ಲಿ ತೆರೆ ಮೇಲೆ ವಿನೋದ್, ಶ್ರುತಿ ಮಿಂಚಿದರು. 'ಬ್ಯಾಂಗಲ್ ಬಂಗಾರಿ' ಹಾಡಿನಿಂದಲೇ ಗೆದ್ದು ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಸೆಳೆದ ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಪ್ರೇಕ್ಷಕರಿಗೆ ಮನರಂಜನೆ ನೀಡಿತು. ಭರ್ಜರಿ ಪ್ರಚಾರ ನಡೆಸಿದ ರಾಧಾಕೃಷ್ಣ ರೆಡ್ಡಿ ನಿರ್ದೇಶನದ, ಕಿರೀಟಿ ನಟನೆಯ ಚೊಚ್ಚಲ ಸಿನಿಮಾ 'ಜೂನಿಯರ್' ಯುವಜನತೆಯನ್ನು ಸೆಳೆಯಿತು.

ಮರುಬಿಡುಗಡೆ ಸಂಭ್ರಮ

ಈ ವರ್ಷ ಪುನೀತ್ ರಾಜ್‌ಕುಮಾರ್ ನಟನೆಯ 'ಅಪ್ಪು' ಸೇರಿದಂತೆ ಆರು ಚಿತ್ರಗಳು ಮರುಬಿಡುಗಡೆ ಆದವು. ಈ ಪೈಕಿ 'ಅಪ್ಪು' ಕರ್ನಾಟಕದಾದ್ಯಂತ ನೂರಕ್ಕೂ ಅಧಿಕ ಏಕಪರದೆ ಚಿತ್ರಮಂದಿರಗಳು ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಮರು ಬಿಡುಗಡೆಯಾಗಿ ಒಳ್ಳೆಯ ಗಳಿಕೆಯನ್ನೂ ಮಾಡಿತು.

ಪ್ರೇಕ್ಷಕರ ಸುವೃಷ್ಟಿ-ಸೃಷ್ಟಿಯಾದ ಸೋಜಿಗ

ಜುಲೈ 25ರಂದು ತೆರೆಕಂಡ ಜೆ.ಪಿ. ತೂಮಿನಾಡು ನಿರ್ದೇಶನದ 'ಸು ಫ್ರಮ್ ಸೋ' ಇಡೀ ಭಾರತೀಯ ಚಿತ್ರರಂಗ ಕರ್ನಾಟಕದತ್ತ ತಿರುಗುವಂತೆ ಮಾಡಿತು. ಶಶಿಧರ್ ಶೆಟ್ಟಿ ಬರೋಡ, ರವಿ ರೈ ಕಳಸ, ರಾಜ್ ಬಿ.ಶೆಟ್ಟಿ ನಿರ್ಮಿಸಿದ್ದ ಈ ಸಿನಿಮಾ ಸದ್ದಿಲ್ಲದೆ ಮೊದಲ ಹೆಜ್ಜೆ ಇಟ್ಟಿತ್ತು. ಸೆಲಿಬ್ರಿಟಿ ಶೋಗಳನ್ನು ನಡೆಸದೆ ಸಿನಿಮಾ ಬಿಡುಗಡೆಗೂ ಮುನ್ನ 38 ಪೇಯ್ಡ್ ಪ್ರೀಮಿಯರ್ ಆಯೋಜಿಸಿ ಜನರ ಮಾತುಗಳಿಗೆ ವೇದಿಕೆ ಕಲ್ಪಿಸಿತು. ಸಿನಿಮಾ ಅದ್ಭೂರಿಯಾಗಿದ್ದರಷ್ಟೇ ಜನ ಚಿತ್ರಮಂದಿರಗಳಿಗೆ ಬರುತ್ತಾರೆ ಎನ್ನುವ ಮಾತನ್ನು ಈ ಸಿನಿಮಾ ಹುಸಿಯಾಗಿಸಿತು. ಹೆಚ್ಚಿನ ಸೆಟ್ ಬಳಸದೆ, ಮನರಂಜನೆಗೇ ಹೆಚ್ಚಿನ ಒತ್ತು ಕೊಟ್ಟು ₹5 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ 'ಸು ಫ್ರಮ್ ಸೋ' ಗಳಿಕೆಯಲ್ಲಿ ಹೊಸ ದಾಖಲೆ ನಿರ್ಮಿಸಿತು. (ಅಧಿಕೃತವಾಗಿ ಚಿತ್ರತಂಡ ಬಾಕ್ಸ್ ಆಫೀಸ್ ಲೆಕ್ಕ ನೀಡಿಲ್ಲ) ಇತರೆ ಭಾಷೆಗಳಿಗೂ ಡಬ್ ಆಗಿ ಸಿನಿಮಾ ಜನರನ್ನು ತಲುಪಿತು.

'ಕಾಟೇರ' ಚಿತ್ರದ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ 'ಏಳುಮಲೆ' 25 ದಿನಗಳನ್ನು ಪೂರೈಸಿತು. ಸಿನಿಮಾದ ಥ್ರಿಲ್ಲರ್ ಅಂಶ, ಪ್ರೇಮಕಥೆ ಪ್ರೇಕ್ಷಕರ ಮೆಚ್ಚುಗೆ ಪಡೆಯಿತು. ವಿನಯ್ ರಾಜ್‌ಕುಮಾರ್ ನಟನೆಯ 'ಅಂದೊಂದಿತ್ತು ಕಾಲ' ಕಥೆ ಹಲವರಿಗೆ ಹಿಡಿಸಿತು.

₹800 ಕೋಟಿ ದಾಟಿದ 'ಕಾಂತಾರ'

ಅಕ್ಟೋಬರ್‌ನಲ್ಲಿ ರಿಷಬ್ ಶೆಟ್ಟಿ ನಿರ್ದೇಶನದ 'ಕಾಂತಾರ-ಚಾಪ್ಟರ್ 1' ರಾಜ್ಯದ ಬಹುತೇಕ ಚಿತ್ರಮಂದಿರಗಳನ್ನು ಆವರಿಸಿಕೊಂಡಿತ್ತು. ಈ ಸಿನಿಮಾ ಚಿತ್ರಮಂದಿರ-ಗಳನ್ನು ಪ್ರೇಕ್ಷಕರಿಂದ ಭರ್ತಿಯಾಗಿಸಿತು. ಬಿಡುಗಡೆಯಾದ ಮೊದಲ ವಾರದಲ್ಲಿ ವಿಶ್ವದಾದ್ಯಂತ ₹509.25 ಕೋಟಿ ಗಳಿಸಿದ ಈ ಸಿನಿಮಾ, ₹818 ಕೋಟಿಗೂ ಅಧಿಕ ಕಲೆಕ್ಷನ್ ಮಾಡಿತು. ಕರ್ನಾಟಕವೊಂದರಲ್ಲೇ ಗಳಿಕೆ ₹250 ಕೋಟಿ ದಾಟಿತು. ರಾಜ್ಯದಲ್ಲಿ ಇಷ್ಟು ಹಣ ಗಳಿಸಿದ ಮೊದಲ ಕನ್ನಡ ಚಲನಚಿತ್ರ ಎಂಬ ದಾಖಲೆ ಈ ಸಿನಿಮಾ ಪಾಲಾಯಿತು.

ಡಿಸೆಂಬರ್‌ನಲ್ಲಿ ಬಿಡುಗಡೆಯಾಗಲಿರುವ ಬಿಗ್ ಬಜೆಟ್ ಸಿನಿಮಾಗಳಿಗೆ ಅಂಜಿನವೆಂಬರ್‌ನಲ್ಲೇ ಸುಮಾರು 27 ಕನ್ನಡ ಸಿನಿಮಾಗಳು ಬಿಡುಗಡೆಯಾದವು. ಸಿಂಪಲ್ ಸುನಿ ನಿರ್ದೇಶನದ 'ಗತವೈಭವ', ಚಂದನ್ ನಟಿಸಿ, ನಿರ್ದೇಶಿಸಿದ 'ಫ್ಲರ್ಟ್' ಪ್ರೇಕ್ಷಕರನ್ನು ಸೆಳೆದವು.

ಡಿಸೆಂಬರ್‌ನಲ್ಲಿ ಸ್ಟಾರ್ಸ್ ಮಿಂಚು

ಡಿ.11ರಂದು ಬಿಡುಗಡೆಗೊಂಡ ದರ್ಶನ್ ನಟನೆಯ, ಪ್ರಕಾಶ್ ವೀರ್ ನಿರ್ದೇಶನದ 'ಡೆವಿಲ್' ಮೊದಲ ದಿನ ಸುಮಾರು ₹13 ಕೋಟಿ ಕಲೆಕ್ಷನ್ ಮಾಡಿದರೂ ನಂತರ ಗಳಿಕೆ ಇಳಿಕೆಯಾಯಿತು. ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಹೀಗೆ ಮೂವರು ಸ್ಟಾರ್ ನಟರು ಇರುವ '45' ಹಾಗೂ ಸುದೀಪ್ ನಟನೆಯ, ವಿಜಯ್ ಕಾರ್ತಿಕೇಯ ನಿರ್ದೇಶನದ 'ಮಾರ್ಕ್' ತೆರೆಕಂಡಿದ್ದು ಇದರ ಭವಿಷ್ಯ ಮುಂದಿನ ದಿನಗಳಲ್ಲಿ ತಿಳಿಯಲಿದೆ. ಕಾಕತಾಳೀಯ ಎಂಬಂತೆ 2024ರಲ್ಲಿ 'ಮ್ಯಾಕ್ಸ್' ತೆರೆಕಂಡ ದಿನದಂದೇ (ಡಿ.25) 'ಮಾರ್ಕ್' ತೆರೆಕಂಡಿದೆ.

ಯಶ್, ರಕ್ಷಿತ್ ಶೆಟ್ಟಿ, ಗಣೇಶ್, ಧ್ರುವ ಸರ್ಜಾ, ಶ್ರೀಮುರಳಿ, ದುನಿಯಾ ವಿಜಯ್ ಈ ವರ್ಷ ತೆರೆಯಿಂದ ದೂರವಿದ್ದ ಸ್ಟಾರ್‌ಗಳು. ಚಂದನವನವು ಈ ವರ್ಷ ಅಭಿನೇತ್ರಿ ಬಿ.ಸರೋಜಾದೇವಿ, ನಟರಾದ ಎಂ.ಎಸ್. ಉಮೇಶ್, ಹರೀಶ್ ರಾಯ್, ರಾಜು ತಾಳಿಕೋಟೆ, ಯಶವಂತ ಸರದೇಶಪಾಂಡೆ, ಬ್ಯಾಂಕ್ ಜನಾರ್ದನ್, ರಾಕೇಶ್ ಪೂಜಾರಿ, ಗಡ್ಡಪ್ಪ, ಶ್ರೀಧರ್ ನಾಯಕ್, ಸರಿಗಮ ವಿಜಿ, ದಿನೇಶ್ ಮಂಗಳೂರು, ನಿರ್ದೇಶಕ, ನಟ ಎ.ಟಿ.ರಘು, ನಿರ್ದೇಶಕ ಎಸ್.ಉಮೇಶ್ ಇವರನ್ನು ಕಳೆದುಕೊಂಡಿತು.

ವಾಸ್ತವ ತೆರೆದಿಟ್ಟ ಸಿನಿಮಾಗಳು

ಭೀಮರಾವ್ ಪಿ. ನಿರ್ದೇಶನದ 'ಹೆಬ್ಬುಲಿ ಕಟ್' ಸಿನಿಮಾ ಸಮಾಜದಲ್ಲಿ ಇನ್ನೂ ಜೀವಂತವಿರುವ ಅಸ್ಪೃಶ್ಯತೆ, ಜಾತಿ ತಾರತಮ್ಯ, ದಬ್ಬಾಳಿಕೆಯ ಘಟನೆಗಳನ್ನು ಕಮರ್ಷಿಯಲ್ ಮಾದರಿಯಡಿ ಪ್ರೇಕ್ಷಕರಿಗೆ ಮುಟ್ಟಿಸಿತು. ಆಯುಷ್ ಮಲ್ಲಿ ನಿರ್ದೇಶನದ 'ಪಪ್ಪಿ' ಸಿನಿಮಾ ಹಳ್ಳಿಯ ಜನರ ಕಥೆಗಳನ್ನು ಮನರಂಜನಾತ್ಮಕವಾಗಿ, ಭಾವನಾತ್ಮಕ-ವಾಗಿ ತೆರೆ ಮೇಲೆ ತಂದಿತು.

ಗಮನ ಸೆಳೆದವರು

'ನಿಮ್ಮವಸ್ತುಗಳಿಗೆ ನೀವೇ ಜವಾಬ್ದಾರರು', 'ಅನಾಮಧೇಯ ಅಶೋಕ ಕುಮಾರ್', 'ಭಾವ ತೀರ ಯಾನ', 'ಅಪಾಯವಿದೆ ಎಚ್ಚರಿಕೆ', 'ಎಲ್ಲೋ ಜೋಗಪ್ಪ ನಿನ್ನರಮನೆ', 'ಅಜ್ಞಾತವಾಸಿ', 'ನೋಡಿದವರು ಏನಂತಾರೆ?', 'ಪಾರು ಪಾರ್ವತಿ'

ಪ್ರಯೋಗಮುಖಿ ಸಿನಿಮಾ

ರವಿ ಬಸ್ರೂರು ಮತ್ತು ತಂಡದ 'ವೀರ ಚಂದ್ರಹಾಸ' ಹೊಸ ಪ್ರಯತ್ನವಾಗಿ ಕಂಡಿತು. ಯಕ್ಷಗಾನದ ಕಥೆಗೆ ಸಿನಿಮಾ ರೂಪ ನೀಡಿದ ರವಿ ಬಸ್ರೂರು ಪ್ರಯತ್ನಕ್ಕೆ ನಟ ಶಿವರಾಜ್‌ಕುಮಾರ್ ಕೂಡಾ ಸಾಥ್ ನೀಡಿದ್ದರು.

ವಿವಾದಗಳು, ಸುದ್ದಿಯಾದ ಘಟನೆಗಳು

- ಕನ್ನಡ ಹಾಡಿಗಾಗಿ ಒತ್ತಾಯ ಮಾಡಿದಾಗ ಅದನ್ನು ಪಹಲ್ಗಾಮ್ ದಾಳಿಗೆ ತಳಕು ಹಾಕಿದ ಗಾಯಕ ಸೋನು ನಿಗಮ್ ಹೇಳಿಕೆ ಭಾರಿ ಚರ್ಚೆಗೆ ಒಳಗಾಯಿತು. ಸೋನು ನಿಗಮ್‌ಗೆ ಅಸಹಕಾರ ತೋರಲು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನಿರ್ಧರಿಸಿತು. ಸೋನು ನಿಗಮ್ ಕ್ಷಮೆ ಕೇಳಿದ ಬಳಿಕ ಇದು ತಣ್ಣಗಾಯಿತು.
- 'ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿದೆ' ಎನ್ನುವ ನಟ ಕಮಲ್ ಹಾಸನ್ ಹೇಳಿಕೆ ವಿವಾದಕ್ಕೆ ಕಾರಣವಾಯಿತು. ಕ್ಷಮೆ ಕೇಳದ ಕಾರಣಕ್ಕೆ ಅವರ 'ಥಗ್‌ಲೈಫ್' ಸಿನಿಮಾ ರಾಜ್ಯದಲ್ಲಿ ಬಿಡುಗಡೆಯಾಗಲೇ ಇಲ್ಲ.
- ನಟ ರಣ್‌ವೀರ್ ಸಿಂಗ್ 'ಕಾಂತಾರ' ಸಿನಿಮಾದಲ್ಲಿನ ದೈವವನ್ನು 'ದೆವ್ವ' ಎಂದಿದ್ದು, ಜೊತೆಗೆ ದೈವದ ಅನುಕರಣೆ ಮಾಡಿದ್ದೂ ವಿರೋಧ ಎದುರಿಸಿತು.
- ಜನವರಿಯಲ್ಲಿ ತೆರೆಕಂಡ ನಾಗಶೇಖರ್ ನಿರ್ದೇಶನದ 'ಸಂಜು ವೆಡ್ಸ್ ಗೀತಾ-2' ಸಿನಿಮಾ ಮೂರೇ ದಿನಗಳಲ್ಲಿ ಪ್ರದರ್ಶನ ನಿಲ್ಲಿಸಿತ್ತು. ಮತ್ತಷ್ಟು ದೃಶ್ಯಗಳನ್ನು ಸೇರಿಸಿ ಜೂನ್‌ನಲ್ಲಿ ಸಿನಿಮಾವನ್ನು ಮರು ಬಿಡುಗಡೆಗೊಳಿಸಲಾಗಿತ್ತು.

ಬಗೆಹರಿಯದ ಟಿಕೆಟ್ ದರ ನಿಗದಿ

ಮಲ್ಟಿಪ್ಲೆಕ್ಸ್‌ಸೇರಿದಂತೆ ಎಲ್ಲ ಚಿತ್ರಮಂದಿರಗಳಲ್ಲಿ ಟಿಕೆಟ್ ದರವನ್ನು (ತೆರಿಗೆ ಬಿಟ್ಟು) ಗರಿಷ್ಠ ₹200ಕ್ಕೆ ನಿಗದಿಪಡಿಸಿ ಗೃಹ ಇಲಾಖೆ ಅಧಿಸೂಚನೆ ಹೊರಡಿಸಿತ್ತು. 'ಕಾಂತಾರ ಚಾಪ್ಟರ್ 1' ಸಿನಿಮಾ ಬಿಡುಗಡೆ ಹೊಸ್ತಿಲಲ್ಲೇ ಈ ಆದೇಶ ಹೊರಬಿದ್ದಿತ್ತು. ಇದನ್ನು ಪ್ರಶ್ನಿಸಿ ಮಲ್ಟಿಪ್ಲೆಕ್ಸ್ ಮತ್ತು ಪಿವಿಆರ್ ಐನಾಕ್ಸ್ ಲಿಮಿಟೆಡ್ ಕಂಪನಿಯು ಕೋರ್ಟ್ ಮೆಟ್ಟಿಲೇರಿತ್ತು. ರಾಜ್ಯ ಸರ್ಕಾರದ ಈ ಆದೇಶಕ್ಕೆ ಏಕಸದಸ್ಯ ನ್ಯಾಯಪೀಠ ಮಧ್ಯಂತರ ತಡೆ ನೀಡಿತು.

ಪರಭಾಷೆಗಳಲ್ಲಿ ಹಿಟ್ ಆದ ಚಿತ್ರಗಳು

ರಣ್‌ವೀರ್ ಸಿಂಗ್ ನಟನೆಯ 'ಧುರಂದರ್' ಈ ವರ್ಷ ಭಾರತದಲ್ಲೇ ಅತಿ ಹೆಚ್ಚು ಗಳಿಕೆ ಮಾಡಿದ ಸಿನಿಮಾ. ವಿಕ್ಕಿ ಕೌಶಲ್ ನಟನೆಯ 'ಛಾವಾ', ಹೊಸಬರ 'ಸೈಯಾರಾ', ರಜನಿಕಾಂತ್ ನಟನೆಯ 'ಕೂಲಿ', ಆಮಿನೇಟೆಡ್ ಸಿನಿಮಾ 'ಮಹಾವತಾರ್ ನರಸಿಂಹ', ಕಲ್ಯಾಣಿ ಪ್ರಿಯದರ್ಶನ್ ನಟನೆಯ 'ಲೋಕಾ: ಚಾಪ್ಟರ್ 1' ಪರಭಾಷೆಗಳಲ್ಲಿ ಹಿಟ್ ಆದ ಸಿನಿಮಾಗಳು.

ವಿಜಯ್, ಅಂಕಿತಾ ಮುಡಿಗೆ ಗರಿ

ಚಂದನವನದ ಚಂದದ ಘಮಲನ್ನು ಪಸರಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮೂರನೇ ಆವೃತ್ತಿ ಜೂನ್ 27ರಂದು ನಡೆಯಿತು. 'ಭೀಮ' ಸಿನಿಮಾಗಾಗಿ ದುನಿಯಾ ವಿಜಯ್ 'ಅತ್ಯುತ್ತಮ ನಟ' ಹಾಗೂ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾಗಾಗಿ ಅಂಕಿತಾ ಅಮರ್ 'ಅತ್ಯುತ್ತಮ ನಟ' ಪ್ರಶಸ್ತಿ ಪಡೆದರು. 'ಭೈರತಿ ರಣಗಲ್' ಸಿನಿಮಾಗಾಗಿ ನರ್ತನ್ 'ಅತ್ಯುತ್ತಮ ನಿರ್ದೇಶನ' ಪ್ರಶಸ್ತಿ ಪಡೆದರು.

ಕ್ರಿವೇಣಿ ಕೆಂಪೇಗೌಡ ಸರ್ಕಲ್ 7.1 DOLBY DIGITAL 4K DIGITAL SCRABBLE 4ಆಟ

ಕಾಮಾಕ್ಷಿಪಾಳ್ಯ: ಮಾಗಡಿರಸ್ತೆ: ಪ್ರಸನ್ನ
VICTORY CINEMA
ಮಾಗಡಿರಸ್ತೆ: ಅಂಜನ್
ಲಾಲ್‌ಬಾಗ್‌ರಸ್ತೆ: URVASHI
ಎಂ.ಜಿ.ರಸ್ತೆ: Swagath SHANKARNAG MG ROAD
ರಾಜಾಜಿನಗರ: ನವರಂಗ್
ಮಾರತಹಳ್ಳಿ: ವಿನಾಯಕ
ಜೆ.ಪಿ.ನಗರ: ಸಿದ್ಧಲಿಂಗೇಶ್ವರ
ಆವಲಹಳ್ಳಿ: ವೆಂಕಟೇಶ್ವರ
ಪೀಣ್ಯ: ಭಾರತಿ
ಕಮಲಾನಗರ: ವೀರಭದ್ರೇಶ್ವರ
ಸುಂಕದಕಟ್ಟೆ: ಮೋಹನ್
ಸೇವಾನಗರ: ಮುಕುಂದ
ತಾವರೆಕೆರೆ: ಬಾಲಾಜಿ
ಸಂಜಯನಗರ: ವೈಭವ್
ಬನಶಂಕರಿ: ಕಾಮಾಕ್ಯ
ಕೋಣನಕುಂಟೆ: ಮಾನಸ
ಹೊಂಗಸಂದ್ರ: ಬೃಂದಾ
ಉಲ್ಲಾಳ: ವಜ್ರೇಶ್ವರಿ
ಉತ್ತರಹಳ್ಳಿ: SRC ಕೃಷ್ಣವೇಣಿ ಚಿತ್ರಮಂದಿರ

ಗರುಡಾಚಾರ್‌ಪಾಳ್ಯ: ವಿಜಯಲಕ್ಷ್ಮೀ
ಜಿ.ಸಿ.ಪಾಳ್ಯ: ವಿಸಿನಿಮಾಸ್
ಜೆ.ಪಿ.ನಗರ: ರೇಣುಕಾಪ್ರಸನ್ನ
ಸರ್ಜಾಪುರ: RAVI
ಗೊಲ್ಲರಹಟ್ಟಿ: ವೆಂಕಟೇಶ್ವರ
ಮಲ್ಲೇಶ್ವರಂ: ಸವಿತಾ
ಅಗರ: ತಿರುಮಲ
ಕಾಡುಗೋಡಿ: ಶ್ರೀನಿವಾಸ
ಕದಿರೇನಹಳ್ಳಿ: ಮಹದೇಶ್ವರ
ಕೆ.ಆರ್.ಪುರಂ: ವೆಂಕಟೇಶ್ವರ
ಆರ್.ಟಿ.ನಗರ: ರಾಧಾಕೃಷ್ಣ
ಬೊಮ್ಮನಹಳ್ಳಿ: ಕೃಷ್ಣ
ಸುಲ್ತಾನ್‌ಪಾಳ್ಯ: ಪುಷ್ಪಾಂಜಲಿ
ಗೌಡನಪಾಳ್ಯ: ಶ್ರೀನಿವಾಸ
ಗೊಟ್ಟಿಗೆರೆ: ಲಕ್ಷ್ಮೀ
ದೊಮ್ಮಸಂದ್ರ: ಬಾಲಾಜಿ
ಲಗ್ಗೆರೆ: ಆಕಾಶ್
ಮಲ್ಲೇಶ್ವರಂ: ನಿವಿತ Navitha
ಕೋನಪ್ಪನಅಗ್ರಹಾರ: ವೆಂಕಟೇಶ್ವರ
ಯಶವಂತಪುರ: ಗೋವರ್ಧನ್

ವಿದ್ಯಾಪೀಠ: ಚಂದ್ರೋದಯ
ಹರಿನಗರ: ವಿನಾಯಕ
ಮಲ್ಲತ್ತಹಳ್ಳಿ: ವಿ.ಆರ್.ಸಿನಿಮಾಸ್
ಯಲಹಂಕ: ಪ್ರಕಾಶ್
ಚಿಕ್ಕಬಾಣಾವರ: ಅಶೋಕ
ಬಂಗಾರಪೇಟೆ: ಬಾಲಚಂದರ್
ಅತ್ತಿಬೆಲೆ: ಗೌರಿಶಂಕರ
ನೆಲಮಂಗಲ: ರೂಪ
PVR · INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REKI | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD | VEGACITY
cinépolis ETA | MEENAKSHI | ORION EAST | LULU | SHANTINIKETAN | SJR
GOPALAN ARCH | GSD | INNOVATION | INNOVATION BTM | SIGNATURE | LEGACY
ROCKLINE mall & cinemas
MIRAJ SUNKADAKATTE
CINEPHILE HSR LAYOUT
INNOVATIVE MARATHALLI
KIN CINEMAS SEEGEHALLI
MOVIETIME RR NAGAR
new famous MG ROAD
ತುಮಕೂರು: ಮಾರುತಿ
PVR · INOX
ಕುಣಿಗಲ್: ಆಕಾಶ್
ರಾಮನಗರ: ಶ್ರೀರಾಮ

ಜನ್ನಪಟ್ಟಣ: ಲಕ್ಷ್ಮೀ
ಕನಕಪುರ: ಅರ್ಕಾವತಿ
ತಿಪಟೂರು: ಗಣೇಶ್
ಮಾಗಡಿ: ಬಾಲಾಜಿ
ಹಾರೋಹಳ್ಳಿ: ವಿನಾಯಕ
ಆನೇಕಲ್: ಲಕ್ಷ್ಮೀನರಸಿಂಹ
ದೊಡ್ಡಬಳ್ಳಾಪುರ: ವೈಭವ್
ಚಿಕ್ಕಬಳ್ಳಾಪುರ: ಬಾಲಾಜಿ
ಮಾಲೂರು: ಬಾಲಾಜಿ
ವಿಜಯಪುರ: ಗೌರಿಶಂಕರ
ಸಿರಾ: ಭಾಗ್ಯಲಕ್ಷ್ಮೀ
ಗೌರಿಬಿದನೂರು: ಅಭಿಲಾಷ
ಶಿಡ್ಲಘಟ್ಟ: ವೆಂಕಟೇಶ್ವರ
ತುರುವೆಕೆರೆ: ಪೂರ್ಣಿಮಾ
ಮೈಸೂರು: ವುಡ್‌ಲ್ಯಾಂಡ್ಸ್
ರಾಜ್‌ಕಮಲ್ DRC CINEMAS
PVR · INOX GARUDAIFORUM SATYAMICENTRO
VISION CINEMAS
ಮಂಡ್ಯ: ಸಂಜಯ್
ಹಾಸನ: ಸಹ್ಯಾದ್ರಿ

ಚಾಮರಾಜನಗರ: ಭ್ರಮರಾಂಬ
ಕೊಳ್ಳೇಗಾಲ: ಶಾಂತಿ
ಮಳವಳ್ಳಿ: ರಾಜರಾಜೇಶ್ವರಿ
ಮದ್ದೂರು: ಸಂಜಯ್
ನಾಗಮಂಗಲ: ವೆಂಕಟೇಶ್ವರ
ಪಿರಿಯಾಪಟ್ಟಣ: ಶಾರದ
ಪಾಂಡವಪುರ: ಕೋಕಿಲ
ಹುಣಸೂರು: ಲೀಲಾ
ಶನಿವಾರಸಂತೆ: ಯಶಸ್ವಿನಿ
ಗೋಣಿಕೊಪ್ಪ: ಸಿನಿಫ್ಲೆಕ್ಸ್
ಬನ್ನೂರು: ರತ್ನಮಹಲ್
ಸಿದ್ದಾಪುರ: ವುಡ್‌

ಅಪಘಾತ ವಲಯವಾದ ದುರ್ಗದ ಹೆದ್ದಾರಿ

ಬೆಳ್ಳಂಬೆಳಿಗ್ಗೆ ಪದೇ ಪದೇ ಸಂಭವಿಸುತ್ತಿದೆ ಸಾವು-ನೋವು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನಿರ್ಲಕ್ಷ್ಯ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ರಾಜಧಾನಿ ಬೆಂಗಳೂರಿನತ್ತ ಅಥವಾ ಬೆಂಗಳೂರಿನಿಂದ ರಾಜ್ಯದ ಉತ್ತರ ಭಾಗದತ್ತ ಪ್ರಯಾಣ ಆರಂಭಿಸಿದರೂ ಆ ವಾಹನಗಳು ನಸುಕಿನ ವೇಳೆಗೇ ಚಿತ್ರದುರ್ಗ ವ್ಯಾಪ್ತಿ ತಲುಪುವುದು ಸಾಮಾನ್ಯ. ಈ ಸಮಯದಲ್ಲಿ ನಿದ್ದೆಯ ಮಂಪರಿಗೆ ಜಾರುವ ಚಾಲಕರಿಂದಾಗಿಯೇ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ.

ಜಿಲ್ಲೆಯ ಹಿರಿಯೂರು ಬಳಿ ಗುರುವಾರ ನಸುಕಿನಲ್ಲಿ ಸಂಭವಿಸಿದ ಅಪಘಾತಕ್ಕೂ ಚಾಲಕ ನಿದ್ದೆಯ ಮಂಪರು ಕಾರಣವಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ರಾಜ್ಯದ ಕೇಂದ್ರ ಸ್ಥಾನವಾಗಿರುವ ಕೋಟೆನಾಡು ಅಪಘಾತ ಪ್ರಕರಣಗಳಿಗೂ ಕೇಂದ್ರಸ್ಥಾನ ಎಂಬಂತಾಗಿದೆ. ಇಲ್ಲಿ ನಡೆಯುವ ಬಹುತೇಕ ಅಪಘಾತಗಳು ನಸುಕಿನಲ್ಲೇ ಸಂಭವಿಸುತ್ತಿವೆ. ಇಡೀ ರಾಜ್ಯದಲ್ಲೇ ಎರಡು ರಾಷ್ಟ್ರೀಯ ಹೆದ್ದಾರಿಗಳು 'ಪ್ಲಸ್' ಆಕಾರದಲ್ಲಿ ಒಂದೆಡೆ ಸೇರುವ ಅಪರೂಪದ ತಾಣವಾಗಿಯೂ ಚಿತ್ರದುರ್ಗ ಗುರುತಿಸಿಕೊಂಡಿದೆ.

ನಸುಕಿನ ಗುದ್ದಾಟ: ಪುಣೆ- ಬೆಂಗಳೂರು ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್ 48), ಶಿವಮೊಗ್ಗ- ಚಿತ್ರದುರ್ಗ- ಸೊಲ್ಲಾಪುರ (ಎನ್‌ಎಚ್- 369), ಶ್ರೀರಂಗಪಟ್ಟಣ- ಬೀದರ್ (ಎನ್‌ಎಚ್- 150 'ಎ') ರಾಷ್ಟ್ರೀಯ ಹೆದ್ದಾರಿಗಳು ಚಿತ್ರದುರ್ಗ ಮಾರ್ಗದಲ್ಲೇ ಸಾಗಿವೆ. ಎಲ್ಲೆಲ್ಲಿಂದಲೋ ರಾತ್ರಿ ಪ್ರಯಾಣ ಆರಂಭಿಸುವ ವಾಹನಗಳು ಇಲ್ಲಿಗೆ ತಲುಪುವಾಗ ನಸುಕಾಗಿರುತ್ತದೆ. ಅದೇ ಕಾರಣಕ್ಕೆ ಈ ಭಾಗದಲ್ಲಿ ಅಪಘಾತಗಳು ಹೆಚ್ಚಾಗಿ ಸಂಭವಿಸು ತ್ತಿವೆ. ಬೆಂಗಳೂರು, ಮೈಸೂರು ಸೇರಿದಂತೆ ಉತ್ತರ ಕರ್ನಾಟಕ ಭಾಗದಿಂದ ಹೊರಡುವ ವಾಹನಗಳು, ಮುಖ್ಯವಾಗಿ ಕಂಟೇನರ್‌ಗಳು ನಸುಕಿನಲ್ಲೇ ಅಪಘಾತಕ್ಕೆ ಈಡಾಗುತ್ತಿರುವುದು ಕಂಡುಬರುತ್ತಿದೆ.

ಚಿತ್ರದುರ್ಗ ಹಾಗೂ ಹಿರಿಯೂರು ನಡುವಿನ ಹಾದಿಯಲ್ಲಿ ಕಳೆದೊಂದು ವರ್ಷದಿಂದ ಐದಕ್ಕೂ ಹೆಚ್ಚು ಭೀಕರ ಅಪಘಾತಗಳು ಸಂಭವಿವೆ. ಕಳೆದ ಮಾರ್ಚ್‌ನಲ್ಲಿ ಮದಕರಿಪುರ ಬಳಿ ಸಂಭವಿಸಿದ ಅಪಘಾತದಲ್ಲಿ ಐವರು ಸಾವಿಗೀಡಾಗಿದ್ದರು. 2021ರಲ್ಲಿ ಕಸ್ತೂರಿ ರಂಗಪ್ಪನಹಳ್ಳಿ ಸಮೀಪ ಖಾಸಗಿ ಬಸ್ ಬೆಂಕಿಗಾಹುತಿ ಯಾಗಿ ಐವರು ಸಜೀವವಾಗಿ ದಹನವಾಗಿದ್ದರು. 2014ರಲ್ಲಿ ಮೇಟಿಕುರ್ಕೆ ಸಮೀಪ ಖಾಸಗಿ ಬಸ್ಸಿಗೆ ಬೆಂಕಿ ತಗುಲಿ 20 ಪ್ರಯಾಣಿಕರು ಸುಟ್ಟು ಕರಕಲಾಗಿದ್ದರು. 2020ರಿಂದ 300ಕ್ಕೂ ಹೆಚ್ಚು ಜನರು ಹೆದ್ದಾರಿ ಅಪಘಾತದಿಂದ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ನಸುಕಿನ ವೇಳೆಗೆ ಚಿತ್ರದುರ್ಗ ಪ್ರವೇಶಿಸುವ ಬಸ್‌ಗಳು
- ನಿದ್ದೆಯ ಮಂಪರಿನಿಂದ ಅಪಘಾತಗಳ ಸಂಖ್ಯೆ ಹೆಚ್ಚಳ



ಚಿತ್ರದುರ್ಗದ ಬಳಿ ಹಾದುಹೋಗಿರುವ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿ ಕಾರು ಜಖಂಗೊಂಡಿರುವುದು (ಸಂಗ್ರಹ ಚಿತ್ರ)

ಹೆದ್ದಾರಿಯಲ್ಲೇ ನಿಲುಗಡೆ: ಈ ಹೆದ್ದಾರಿಯಲ್ಲಿ ಸಂಚರಿಸುವ ಲಾರಿಗಳು, ಕಂಟೇನರ್‌ಗಳು ಚಿತ್ರದುರ್ಗ, ಹಿರಿಯೂರು ವ್ಯಾಪ್ತಿಯಲ್ಲಿ ಹೆದ್ದಾರಿ ಬದಿಯಲ್ಲೇ ನಿಲ್ಲುತ್ತವೆ. ಬೆಳಿಗ್ಗೆ ರಸ್ತೆಯಲ್ಲಿ ಗಾಡಿ ನಿಲ್ಲಿಸಿ ಚಾಲಕರು ನಿತ್ಯಕರ್ಮಗಳಿಗೆ ತೆರಳುತ್ತಾರೆ. ರಸ್ತೆ ಬದಿ ಕ್ಯಾಂಟೀನ್‌ಗಳಲ್ಲಿ ತಿಂಡಿ, ಕಾಫಿ, ಟೀ ಸೇವನೆಗೆ ತೆರಳುತ್ತಾರೆ. ನಿದ್ದೆ ಮಂಪರಿನಲ್ಲಿ ಚಾಲಕರು ವಾಹನ ಚಲಾಯಿಸಿಕೊಂಡು ಬಂದು ರಸ್ತೆ ಬದಿಯಲ್ಲಿ ನಿಂತಿರುವ ಇಂಥ ವಾಹನಗಳಿಗೆ ಡಿಕ್ಕಿ ಹೊಡೆಯುವುದು ಸಾಮಾನ್ಯ ಎಂಬಂತಾಗಿದೆ.

'ಹೆದ್ದಾರಿಯಲ್ಲಿ ಬೆಳ್ಳಂಬೆಳಿಗ್ಗೆ ನಿತ್ಯ ಒಂದಲ್ಲಾ ಒಂದು ಅಪಘಾತ ಆಗುತ್ತಲೇ ಇರುತ್ತದೆ. ಇದನ್ನು ತಪ್ಪಿಸಲು, ರಾತ್ರಿಯಿಡೀ ವಾಹನ ಓಡಿಸಿಕೊಂಡು ಬರುವ ಚಾಲಕರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿದ್ದೆಯ ಅವಧಿಯನ್ನು ನಿಗದಿ ಮಾಡಬೇಕು' ಎಂದು ಹಿರಿಯೂರಿನ ಟಿ.ಮಂಜುನಾಥ್ ಒತ್ತಾಯಿಸಿದರು.

ವೈದ್ಯಕೀಯ ಸೌಲಭ್ಯ ಕೊರತೆ: ಚಿತ್ರದುರ್ಗ, ಹಿರಿಯೂರು ವ್ಯಾಪ್ತಿಯ ಹೆದ್ದಾರಿ ಬದಿಯಲ್ಲಿ ಅಪಘಾತಕ್ಕೀಡಾದ ವಾಹನಗಳಲ್ಲಿ ಗಾಯಗೊಂಡವರಿಗೆ ಯಾವುದೇ ವೈದ್ಯಕೀಯ ಸೌಲಭ್ಯ ದೊರೆಯುವುದಿಲ್ಲ. ಹೆದ್ದಾರಿ ಪ್ರಾಧಿಕಾರದ ಅಂಬುಲೆನ್ಸ್ ಸೇವೆಯೂ ಸಿಗುವುದಿಲ್ಲ. ಹೆದ್ದಾರಿಯಲ್ಲಿ ಅಪಘಾತವಾದರೆ ಸ್ಥಳೀಯ ಆಸ್ಪತ್ರೆಗಳ ಆಂಬುಲೆನ್ಸ್ ಬರುವವರೆಗೂ ಕಾಯುವ ಪರಿಸ್ಥಿತಿ ಇದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

'ಹೆದ್ದಾರಿ ಬದಿಯಲ್ಲಿ ಹಾಕಿರುವ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದರೂ ಸ್ಪಂದಿಸುವುದಿಲ್ಲ. ಈ ಬಗ್ಗೆ ರಸ್ತೆ ಪೊಲೀಸರಿಗೆ ದೂರು ನೀಡಿದರೂ ಅವರು ಯಾವುದೇ ಕ್ರಮ ಕೈಗೊಳ್ಳು-ವುದಿಲ್ಲ' ಎಂದು ಸಾರಿಗೆ ಸಂಸ್ಥೆ ಬಸ್‌ನ ಚಾಲಕರೊಬ್ಬರು ಆರೋಪಿಸಿದರು.

ರೋಡ್ ಕಾಂಗ್ರೆಸ್ ನಿಯಮ ಪಾಲನೆ ಇಲ್ಲ

ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಿವಿಧ ಲೇನ್‌ಗಳಿದ್ದು ಆಯಾ ವಾಹನಗಳಿಗೆ ಭಿನ್ನಭಿನ್ನ ಲೇನ್ ನಿಗದಿಯಾಗಿರುತ್ತದೆ. 'ರೋಡ್ ಕಾಂಗ್ರೆಸ್ ನಿಯಮ'ದ ಅನ್ವಯ ಬಸ್, ಕಂಟೇನರ್, ಕಾರುಗಳ ಸಂಚಾರಕ್ಕೆ ಪ್ರತ್ಯೇಕ ಲೇನ್ ನಿಗದಿ ಮಾಡಲಾಗಿದೆ. ಆದರೆ ವಾಹನ ಚಾಲಕರು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಸಿಕ್ಕಸಿಕ್ಕ ಲೇನ್‌ಗಳಲ್ಲಿ ವಾಹನ ಓಡಿಸುವ ಕಾರಣ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದೆ.

'ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ವಾಹನ ಅಪಘಾತಗಳ ಸಂಖ್ಯೆ ನಿಯಂತ್ರಿಸಲು ಕಾರ್ಯಸೂಚಿ ರೂಪಿಸಲಾಗಿದೆ. ಸಮರ್ಪಕವಾಗಿ ನಿಯಮ ಪಾಲನೆ ಮಾಡುವ ಜಾಗೃತಿ ಮೂಡಿಸುವಂತೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು.

ಅಪಾಯ ಜಯಿಸಿದ 'ವಿಜಯ'

ಪ್ರಜಾವಾಣಿ ವಾರ್ತೆ

ಪ್ರಾಣಾಪಾಯದಿಂದ ಪಾರಾಗಿ ಬಂದಿರುವ ವಿಜಯ ದೇಶಭಂಡಾರಿ (ಎಡಬದಿ) ಜೊತೆಗೆ ಆತನ ಸಹೋದರ ಮಾವ ಮಹೇಶ ದೇಶಭಂಡಾರಿ

ಕುಮಟಾ (ಉತ್ತರ ಕನ್ನಡ): 'ಸ್ಲೀಪರ್ ಬಸ್‌ನ ಮೇಲಿನ ಸೀಟಿನಲ್ಲಿ ಮಲಗಿದ್ದ ನನಗೆ ಬಸ್‌ಗೆ ರಭಸದಿಂದ ಏನೋ ಡಿಕ್ಕಿಯಾಗಿದ್ದು ಅರಿವಿಗೆ ಬಂತು. ನೋಡ ನೋಡುತ್ತಲೆ ಬೆಂಕಿ ಜ್ವಾಲೆ ಕಾಣಿಸಿ ಕೊಳ್ಳತೊಡಗಿತು. ಜೀವ ಉಳಿಸಿಕೊಳ್ಳಲು ಕಿಟಕಿಯಿಂದ ಜಿಗಿದು ದೂರ ಓಡಿದೆ. ಲ್ಯಾಪ್‌ಟಾಪ್, ಮೊಬೈಲ್ ಸೇರಿದಂತೆ ಎಲ್ಲ ಪರಿಕರಗಳು ಬಸ್‌ನಲ್ಲೇ ಸುಟ್ಟು ಬೂದಿಯಾಗಿವೆ'

ಇದು ಚಿತ್ರದುರ್ಗದ ಜವನ-ಗೊಂಡನಹಳ್ಳಿ ಬಳಿ ನಡೆದ ಭೀಕರ ಅಪಘಾತದಲ್ಲಿ ಜೀವ ಉಳಿಸಿಕೊಂಡು ಬಂದಿರುವ ತಾಲ್ಲೂಕಿನ ಚಿತ್ರಗಿ ಗ್ರಾಮದ ವಿಜಯ ದೇಶಭಂಡಾರಿ ಹೇಳಿದ ಮಾತಿದು. ಅಪಘಾತದ ಭೀಕರತೆ ಕಣ್ಣಾರೆ ಕಂಡಿರುವ ಅವರು ಮೌನಕ್ಕೆ ಜಾರಿದ್ದಾರೆ. ಅಪಘಾತದ ಚಿತ್ರಣ ಕಣ್ಣೆದುರು ತಂದುಕೊಳ್ಳಲೂ ಹಿಂದೇಟು ಹಾಕುತ್ತಿದ್ದಾರೆ.

ಬಸ್ ಚಾಲಕನ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹಿರಿಯೂರು ತಾಲ್ಲೂಕು ಜವನಗೊಂಡನಹಳ್ಳಿ ಬಳಿ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡಿರುವ ಬಸ್ ಚಾಲಕ ಹಾಗೂ ಕ್ಲೀನರ್ ಅವರನ್ನು ಚಿಕಿತ್ಸೆಗಾಗಿ ಇಲ್ಲಿನ ಕೆಎಂಸಿ-ಆರ್‌ಐ ಆಸ್ಪತ್ರೆಗೆ ಗುರುವಾರ ದಾಖಲಿಸಲಾಗಿದೆ.

ಚಾಲಕ ಮೊಹಮ್ಮದ್ ರಫೀಕ್ ಹುಲಗೂರ (35) ತೀವ್ರವಾಗಿ ಗಾಯಗೊಂಡಿದ್ದು, ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹುಬ್ಬಳ್ಳಿಯ ಬಿಡ್ನಾಳದ ನಿವಾಸಿ, ಕ್ಲೀನರ್ ಮೊಹಮ್ಮದ್ ಸಾದಿಕ್ ಧಾರವಾಡ (19) ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

'ಅಪಘಾತದಲ್ಲಿ ಮೊಹಮ್ಮದ್ ರಫೀಕ್ ಕಾಲಿಗೆ ಬಲವಾದ ಪೆಟ್ಟು ಬಿದ್ದಿದ್ದು, ಬಹು ಅಂಗಾಂಗಗಳಿಗೆ ತೀವ್ರ ಗಾಯಗಳಾಗಿವೆ. ಇದರಿಂದ ಎದೆನೋವು, ಉಸಿರಾಟ ತೊಂದರೆ ಅನುಭವಿಸುತ್ತಿದ್ದಾರೆ. ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಕೆಎಂಸಿಆರ್‌ಐ ವೈದ್ಯಕೀಯ ಅಧೀಕ್ಷಕ ಡಾ.ಈಶ್ವರ ಹಸಬಿ ತಿಳಿಸಿದರು.

'ಶಾಶ್ವತ ಪುನರ್ವಸತಿಗೆ ಯತ್ನ'

ಸಂತ್ರಸ್ತರಿಗೆ ಸೌಲಭ್ಯ: ಡಾ. ಎಲ್. ಮೂರ್ತಿ ಭರವಸೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತ ಕುಟುಂಬದವರನ್ನು ರಾಜ್ಯ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳು ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಅವರು ನಗರದ ವಿವೇಕಾನಂದ ಆಸ್ಪತ್ರೆಯಲ್ಲಿ ಗುರುವಾರ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು

ಹುಬ್ಬಳ್ಳಿ: 'ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಪ್ರಕರಣದಲ್ಲಿ ಸಂತ್ರಸ್ತರಾದವರಿಗೆ ಶಾಶ್ವತ ಪುನರ್ವಸತಿ ಕಲ್ಪಿಸಬೇಕಾಗಿದೆ. ಇದಕ್ಕಾಗಿ ಖುದ್ದಾಗಿ ಮುಖ್ಯಮಂತ್ರಿ ಅವರಿಗೆ ಮನವಿ ಪತ್ರ ಸಲ್ಲಿಸುವೆ' ಎಂದು ರಾಜ್ಯ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳು ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಹೇಳಿದರು.

ನಗರದ ವಿವೇಕಾನಂದ ಆಸ್ಪತ್ರೆಯಲ್ಲಿ ಗುರುವಾರ ಸಂತ್ರಸ್ತ ಕುಟುಂಬದವರ ಆರೋಗ್ಯ ವಿಚಾರಿಸಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಅಧಿಕಾರಿಗಳ ನಿರ್ಲಕ್ಷ್ಯದ ಕುರಿತು ಇಂದು ನಡೆಯುವ ಸಭೆಯಲ್ಲಿ ಚರ್ಚಿಸಲಾಗುತ್ತದೆ. ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರಕ್ಕಾಗಿ ಸಿಎಂಗೆ ಒತ್ತಾಯಿಸಲಾಗುವುದು
ರಮೇಶ ಜಾರಕಿಹೊಳಿ, ಸದಸ್ಯ ರಾಜ್ಯ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳು ಆಯೋಗ

'ಇಂತಹ ಅಮಾನವೀಯ ಘಟನೆ ಮರುಕಳಿಸದಂತೆ ಕ್ರಮ ವಹಿಸಲು ಸರ್ಕಾರದ ಗಮನ ಸೆಳೆಯುವೆ. ಸಂತ್ರಸ್ತ ಕುಟುಂಬಕ್ಕೆ ಸರ್ಕಾರದಿಂದ ಸಿಗುವ ಪರಿಹಾರ ಕೊಡಿಸಲಾಗುವುದು. ಅವರು ಭಯಭೀತರಾಗಿದ್ದು, ಹೆಚ್ಚುವರಿ ಭದ್ರತೆ ಹಾಗೂ ಆರ್ಥಿಕ ನೆರವಿಗೆ ಯತ್ನಿಸಲಾಗು-ವುದು' ಎಂದರು.

'ಈ ಪ್ರಕರಣದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವ ಕುರಿತು ಆರೋಪ ವಿದೆ. ದೂರುಗಳೂ ಸಹ ಸಲ್ಲಿಕೆಯಾಗಿವೆ. ಈ ಬಗ್ಗೆ ಚರ್ಚಿಸಿ, ಲೋಪ ಪತ್ತೆ ಮಾಡಿ, ಕ್ರಮ ಕೈಗೊಳ್ಳಲಾಗುವುದು' ಎಂದರು.

ಅಪಘಾತ: 6 ಮಂದಿ ಸಜೀವ ದಹನ

ಒಂದನೇ ಪುಟದಿಂದ...

ಕಂಟೇನರ್ ನೇರವಾಗಿ ಬಸ್‌ನ ಡೀಸೆಲ್ ಟ್ಯಾಂಕ್‌ಗೆ ಗುದ್ದಿದ ಕಾರಣ ಕೆಲವೇ ಕ್ಷಣಗಳಲ್ಲಿ ಬೆಂಕಿ ಹೊತ್ತಿಕೊಂಡಿತು. ಧಗಧಗನೆ ಹೊತ್ತಿ ಉರಿದ ಬಸ್ ಕೆಲವೇ ನಿಮಿಷಗಳಲ್ಲಿ ಕರಕಲಾಯಿತು. ಬಸ್‌ನ ಮುಂಭಾಗದ-ಲ್ಲಿದ್ದ ಯುವತಿಯರು ತಪ್ಪಿಸಿಕೊಳ್ಳಲು ಸಾಧ್ಯವಾಗದೇ ಜೀವತೆತ್ತರು. ಚಾಲಕ, ನಿರ್ವಾಹಕ ಹಾಗೂ ಹಿಂಬದಿಯಲ್ಲಿದ್ದ 24 ಪ್ರಯಾಣಿಕರು ಕಿಟಕಿ ಗಾಜುಗಳನ್ನು ಒಡೆದು ಜಿಗಿದು ತಪ್ಪಿಸಿಕೊಂಡರು.

ಗೆಳತಿಯರಿಲ್ಲದ ಗೋಳು: ಒಂದೇ ಕಾಲೇಜಿನಲ್ಲಿ ಎಂ.ಟೆಕ್ ಪದವಿ ಪೂರೈಸಿದ ಮಾನಸ, ನವ್ಯಾ ಹಾಗೂ ಮಿಲನಾ ಅವರು ಬೆಂಗಳೂರಿನ ಮಾನ್ಯತಾ ಟೆಕ್ ಪಾರ್ಕ್‌ನ ವಿವಿಧ ಕಂಪನಿಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಗುರುವಾರ ರಾತ್ರಿ 9 ಗಂಟೆಗೆ ಬಸ್ ಹತ್ತಿದ್ದರು. ಇಬ್ಬರೂ ಗೆಳತಿಯರನ್ನು ಕಳೆದುಕೊಂಡ ಮಿಲನಾ ಹಿರಿಯೂರು ತಾಲ್ಲೂಕು ಆಸ್ಪತ್ರೆಯಲ್ಲಿ ಮೌನಕ್ಕೆ ಶರಣಾಗಿದ್ದರು.

ಭಟ್ಕಳದ ರಶ್ಮಿ ಅವರು ತಮ್ಮಿಬ್ಬರು ಟೆಕ್ಕಿ ಗೆಳತಿಯರಾದ ಗಗನಾ, ರಕ್ಷಿತಾ ಅವರಿಗೆ ಗೋಕರ್ಣ, ಸಿಗಂದೂರು ಪ್ರವಾಸ ಮಾಡಿಸಿ ತಮ್ಮೂರಿಗೆ ಕರೆದೊಯ್ಯಲು ಸಿದ್ಧತೆ ಮಾಡಿಕೊಂಡಿದ್ದರು. ಗುರುವಾರ ರಾತ್ರಿ ತಾಯಿಗೆ ಕರೆ ಮಾಡಿ ತನ್ನ ಗೆಳತಿಯರೊಂದಿಗೆ ಊರಿಗೆ ಬರುವುದಾಗಿ ತಿಳಿಸಿದ್ದರು. ಬೆಂಗಳೂರಿನ ಗಾಂಧಿನಗರದಲ್ಲಿ ಪ್ರಯಾಣ ಆರಂಭಿಸುವ ಮುನ್ನ ಬಸ್ ಮುಂದೆ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಂಡಿದ್ದರು. ಈ ಚಿತ್ರ ಈಗ ಸಾಮಾಜಿಕ ಜಾಲತಾಣಗ ಳಲ್ಲಿ ಹರಿದಾಡುತ್ತಿದೆ. ರಶ್ಮಿ ಇನ್ನಿಲ್ಲ ಎಂಬ ಸುದ್ದಿ ತಿಳಿದ ಗಗನಾ, ರಕ್ಷಿತಾ ಆಸ್ಪತ್ರೆಯ ಹಾಸಿಗೆಯಲ್ಲಿ ಕಣ್ಣೀರು ಸುರಿಸುತ್ತಿದ್ದರು.

ರಶ್ಮಿ

ನವ್ಯಾ

ಮಾನಸಾ

ಬಿಂದು

10 ಗಂಟೆ ಟ್ರಾಫಿಕ್ ಜಾಮ್

ಅಪಘಾತ ಸಂಭವಿಸಿದ ನಂತರ 10 ಗಂಟೆಗೂ ಹೆಚ್ಚು ಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಗುರುವಾರ ಮಧ್ಯಾಹ್ನ 12 ಗಂಟೆಯಾದರೂ ದಾವಣಗೆರೆ, ಧಾರವಾಡ ಕಡೆ ತೆರಳುವ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಪೊಲೀಸರು ಟ್ರಾಫಿಕ್ ನಿರ್ವಹಣೆ ಮಾಡಲು ಪರದಾಡಿದರು.

ಅವರನ್ನು ಸಂಭ್ರಮ, ಸಡಗರದಿಂದ ಬಸ್ ಹತ್ತಿಸಿದ್ದ ಬೆಂಗಳೂರಿನ ದರ್ಶನ್ ಅವರು ನಗರದ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಗಡಗಡನೆ ನಡುಗುತ್ತಿ-ದ್ದರು. ಮೃತದೇಹಗಳನ್ನು ಗುರುತಿಸಲು ಕಾರಿಳಿದು ಬರುವಂತೆ ಪೊಲೀಸರು ಒತ್ತಾಯಿಸುತ್ತಿದ್ದಾಗ ಅವರ ಕೈಕಾಲುಗಳು ಚಲನೆಯನ್ನೇ ಕಳೆದುಕೊಂಡಿದ್ದವು. ಪತ್ನಿ, ಮಗಳು ಬದುಕಿದ್ದಾರೆ ಎಂಬ ಭರವಸೆಯಲ್ಲೇ ಅವರಿದ್ದರು. ಆದರೆ ಕಪ್ಪು ಉಂಡೆಯಾಗಿದ್ದ ಮೃತದೇಹಗ ಳನ್ನು ಕಂಡು ದರ್ಶನ್ ನೆಲಕ್ಕುರುಳಿದರು.

'ಬಸ್‌ಗಳಿಗೆ ಸುರಕ್ಷತಾ ಮಾರ್ಗಸೂಚಿ ಅಗತ್ಯ'

ದಾವಣಗೆರೆ: ಸ್ಲೀಪರ್ ಕೋಚ್ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯ ಸರ್ಕಾರ ಮಾರ್ಗಸೂ-ಚಿಗಳನ್ನು ರೂಪಿಸುವ ಅಗತ್ಯವಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಲಹೆ ನೀಡಿದರು.

'ರಾತ್ರಿ ಸಂದರ್ಭದ ಪ್ರಯಾಣ ಅಸುರಕ್ಷಿತ ಎಂಬ ಭಾವನೆ ಮೂಡಿದೆ. ಹೆಚ್ಚು ಅಪಘಾತಗಳು ಸಂಭವಿಸುತ್ತಿದೆ. ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಅವಘಡ ಸಂಭವಿಸಿದಾಗ ತುರ್ತಾಗಿ ಪಾರಾಗುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಿದೆ. ಬಸ್ ಮಾಲೀಕರೊಂದಿಗೆ ಚರ್ಚಿಸಿ ಮಾರ್ಗಸೂಚಿ ರೂಪಿಸಬೇಕು' ಎಂದು ಸುದ್ದಿಗಾರರಿಗೆ ತಿಳಿಸಿದರು.

ಬಸ್ ಅಪಘಾತಗಳು ಪದೇ ಪದೇ ಸಂಭವಿಸುತ್ತಿವೆ. ಬಸ್‌ಗಳಿಗೆ ಅನುಮತಿ, ಸುರಕ್ಷತೆ, ವಾಹನ ಚಾಲನಾ ಪರವಾನಗಿ ನವೀಕರಣದ ವಿಚಾರದಲ್ಲಿ ರಾಜ್ಯ ಸರ್ಕಾರ ಎಚ್ಚರ ವಹಿಸಬೇಕು.
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

'ಚಿತ್ರದುರ್ಗದ ಹಿರಿಯೂರು ತಾಲ್ಲೂಕಿನಲ್ಲಿ ಸಂಭವಿಸಿದ ಬಸ್ ದುರಂತ ಅತ್ಯಂತ ದುಃಖದ ಸಂಗತಿ. ಸಾವಿನಲ್ಲಿರುವ ಕುಟುಂಬಗಳ ನೋವು ಅರ್ಥವಾಗಿದೆ. ನೋವಿನಿಂದ ಹೊರಬರುವ ಶಕ್ತಿಯನ್ನು ಸಂತ್ರಸ್ತ ಕುಟುಂಬಗಳಿಗೆ ದೇವರು ಕರುಣಿಸಲಿ' ಎಂದರು.

ಚಾಲಕನಿಂದ 43 ವಿದ್ಯಾರ್ಥಿಗಳು ಪಾರು

ಒಂದನೇ ಪುಟದಿಂದ...

'ಕಂಟೇನರ್', ಡಿವೈಡರ್ ಹತ್ತಿ ಬರುತ್ತಿದ್ದುದನ್ನು ಗಮನಿಸಿ ನಾನು ಎಡಕ್ಕೆ ಸ್ಟೇರಿಂಗ್ ತಿರುಗಿಸಿದೆ. ಹೀಗಾಗಿ ರಸ್ತೆ ಬದಿಯ ಕಂದಕ ದಾಟಿ ಬಸ್ ನೇರವಾಗಿ ಸರ್ವೀಸ್ ರಸ್ತೆಗೆ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ತಾಳಿ ತಾಳಿ ಎನ್ನುವುದೇ ಮಂತ್ರ; ತಾಳ್ಮೆ ಇಲ್ಲದಿರೆ ಬಾಳೇ ಅತಂತ್ರ.

-ಪು.ತಿ.ನ

ಸಂಪಾದಕೀಯ

ಅತ್ಯಾಚಾರ: ಶಿಕ್ಷೆಯ ಅಮಾನತು ಆದೇಶ ನ್ಯಾಯದ ಮರುವ್ಯಾಖ್ಯಾನದ ಸಮಯ

ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿ ಕುಲದೀಪ್ ಸಿಂಗ್ ಸೆಂಗರ್ ಅನುಭವಿಸುತ್ತಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿ, ಷರತ್ತುಬದ್ಧ ಜಾಮೀನು ನೀಡಿರುವ ದೆಹಲಿ ಹೈಕೋರ್ಟ್ ನಿರ್ದೇಶನ ಸಾಮಾಜಿಕ ಕಳವಳಕ್ಕೆ ಕಾರಣ ಆಗಬಹುದಾದ ವಿದ್ಯಮಾನ. 2019ರಲ್ಲಿ ದೆಹಲಿಯ ವಿಚಾರಣಾ ನ್ಯಾಯಾಲಯ ಸೆಂಗರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಅದನ್ನು ಪ್ರಶ್ನಿಸಿ ಸೆಂಗರ್ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಇತ್ಯರ್ಥ ಆಗುವವರೆಗೂ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಹೈಕೋರ್ಟ್ ಅಮಾನತ್ತಿನಲ್ಲಿರಿಸಿದೆ. ಈ ನಿರ್ದೇಶನ ನ್ಯಾಯಸಮ್ಮತವಲ್ಲ ಎಂದು ಹೇಳಿರುವ ಸಂತ್ರಸ್ತೆ, ಸೆಂಗರ್‌ಗೆ ವಿಧಿಸಲಾದ ಶಿಕ್ಷೆಯನ್ನು ಅಮಾನತುಗೊಳಿಸುವ ಮೂಲಕ ತನ್ನ ಕುಟುಂಬಕ್ಕೆ ಸಾವಿಗೆ ಕಡಿಮೆ ಇಲ್ಲದ ಶಿಕ್ಷೆ ವಿಧಿಸಲಾಗಿದೆ ಎಂದಿದ್ದಾರೆ. ಅಂಥ ವ್ಯಕ್ತಿಗಳು ಹೊರಗೆ ಬಂದರೆ ನಾವು ಸುರಕ್ಷಿತವಾಗಿರುವುದು ಹೇಗೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಸಂತ್ರಸ್ತೆಯ ಆತಂಕ ನಿರಾಧಾರವಾದುದೇನೂ ಅಲ್ಲ. ಅತ್ಯಾಚಾರ ಪ್ರಕರಣದ ದೂರು ದಾಖಲು ಮಾಡಲು ಹೊರಟ ಕ್ಷಣದಿಂದಲೂ ಸಂತ್ರಸ್ತೆ ದುರಂತಗಳ ಸರಮಾಲೆಯನ್ನೇ ಎದುರಿಸಿದ್ದಾರೆ. ಆಕೆಯ ತಂದೆ ಹಲ್ಲೆಗೊಳಗಾಗಿ ಪೊಲೀಸ್ ಕಸ್ಟಡಿಯಲ್ಲಿಯೇ ಕೊನೆಯುಸಿರೆಳೆದಿದ್ದಾರೆ. ಕುಟುಂಬದ ಇಬ್ಬರು ಮಹಿಳೆಯರು ಹಾಗೂ ಸಂತ್ರಸ್ತೆಯ ಬೆಂಬಲಕ್ಕೆ ನಿಂತಿದ್ದ ವಕೀಲರೊಬ್ಬರು ವಾಹನ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.

ಅತ್ಯಾಚಾರ ಅಪರಾಧಿಯ ಶಿಕ್ಷೆಯನ್ನು ಅಮಾನತುಗೊಳಿಸಿ, ಷರತ್ತುಬದ್ಧ ಜಾಮೀನು ನೀಡಿರುವ ಆದೇಶ ಸಂತ್ರಸ್ತರ ಸುರಕ್ಷತೆ ಮತ್ತು ಅಪರಾಧಿಯ ಹಕ್ಕುಗಳ ಕುರಿತ ಚರ್ಚೆಗೆ ಆಸ್ಪದ ಕಲ್ಪಿಸಿದೆ.

ಈ ಎಲ್ಲ ಘಟನೆಗಳಲ್ಲೂ ಸೆಂಗರ್ ಪಾತ್ರವಿದೆ ಎಂದು ಹೇಳಲಾಗಿದೆ. ಅತ್ಯಾಚಾರಿಯನ್ನು ರಕ್ಷಿಸಲು ಇಡೀ ರಾಜಕೀಯ ವ್ಯವಸ್ಥೆ ನೀಡಿದ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲ ಹಾಗೂ ಸಾಕ್ಷ್ಯನಾಶ ಪ್ರಯತ್ನಗಳ ವಿರುದ್ಧ ಸಾರ್ವಜನಿಕ ಆಕ್ರೋಶ ವ್ಯಕ್ತವಾದ ನಂತರವಷ್ಟೇ ಸೆಂಗರ್ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸಲಾಯಿತು. ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡದಿದ್ದರೆ, ಸಂತ್ರಸ್ತೆ ಮತ್ತಷ್ಟು ಸಂಕಟಗಳನ್ನು ಎದುರಿಸಬೇಕಾಗುತ್ತಿತ್ತು ಎನ್ನುವುದರಲ್ಲಿ ಅನುಮಾನವೇನೂ ಇಲ್ಲ. ಅಪರಾಧ ಕೃತ್ಯಗಳ ಸರಮಾಲೆಯ ಕೇಂದ್ರದಲ್ಲಿರುವ ವ್ಯಕ್ತಿಗೆ ವಿಧಿಸಲಾದ ಶಿಕ್ಷೆಯನ್ನು ಅಮಾನತುಗೊಳಿಸಿರುವುದು ಸಹಜವಾಗಿಯೇ ಸಂತ್ರಸ್ತೆ ಮತ್ತು ಸಮಾಜದ ಆತಂಕಕ್ಕೆ ಕಾರಣವಾಗಿದೆ.

ನ್ಯಾಯ ವ್ಯವಸ್ಥೆಯಲ್ಲಿ ಮಹಿಳಾ ಸುರಕ್ಷತೆ ಮತ್ತು ಅತ್ಯಾಚಾರ ಪ್ರಕರಣಗಳು ಅತ್ಯಂತ ಸೂಕ್ಷ್ಮ ಸಂಗತಿಗಳು. ಅತ್ಯಾಚಾರ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ನೀಡುವ ಸಂದರ್ಭದಲ್ಲಿ ಬಾಧಿತರ ಸುರಕ್ಷತೆಗೆ ಧಕ್ಕೆ ಆಗಬಹುದಾದ ಸಾಧ್ಯತೆಗಳನ್ನು ನ್ಯಾಯಾಲಯಗಳು ಎಚ್ಚರದಿಂದ ಪರಿಶೀಲಿಸುತ್ತವೆ. ಅಪರಾಧಿಗಳಿಗೆ ನ್ಯಾಯದ ಪ್ರಕ್ರಿಯೆಯ ಹಕ್ಕನ್ನು ನಿರಾಕರಿಸುವುದು ಸಾಧ್ಯವಿಲ್ಲವಾದರೂ, ಅತ್ಯಾಚಾರದಂತಹ ಅಪರಾಧಗಳಲ್ಲಿ ಸಂತ್ರಸ್ತರ ಸುರಕ್ಷತೆಗೆ ಆದ್ಯತೆ ನೀಡಬೇಕಾಗುತ್ತದೆ. ಪ್ರಸಕ್ತ ಪ್ರಕರಣದಲ್ಲಿ ಅಪರಾಧಿಯ ಕುಖ್ಯಾತಿಯನ್ನು ಯಾರೂ ನಿರ್ಲಕ್ಷಿಸಲು ಸಾಧ್ಯವಾಗದಂತಹದ್ದು. ಸೆಂಗರ್ ಜೈಲಿನಿಂದ ಹೊರಗೆ ಬಂದರೆ, ಆತನಿಗಿರುವ ರಾಜಕೀಯ ಹಾಗೂ ಜಾತಿ ಪ್ರಭಾವ ಸಂತ್ರಸ್ತೆಯ ಮೇಲೆ ಒತ್ತಡ ಹೇರುವ ಸಾಧ್ಯತೆ ಇದ್ದೇ ಇದೆ. ಸಿಬಿಐ ಮತ್ತು ಸಂತ್ರಸ್ತೆಯ ವಿರೋಧದ ನಡುವೆಯೂ ಹೈಕೋರ್ಟ್ ನಿರ್ದೇಶನ ನೀಡಿರುವುದು, ಅಪರಾಧಿಯ ಶಿಕ್ಷೆಯನ್ನು ಅಮಾನತ್ತಿನಲ್ಲಿ ಇರಿಸಿರುವುದು ಸಾರ್ವಜನಿಕರ ಅಚ್ಚರಿ ಮತ್ತು ಆತಂಕಕ್ಕೆ ಕಾರಣವಾಗಿದೆ. ರಾಜಕೀಯ, ಹಣ ಹಾಗೂ ಜಾತಿ ಬೆಂಬಲ ಹೊಂದಿರುವ ವ್ಯಕ್ತಿ, ಯಾವ ಬೆಂಬಲವೂ ಇಲ್ಲದ ಸಂತ್ರಸ್ತೆಯನ್ನು ಹಣಿಯಲಿಕ್ಕೆ ಯಾವ ಕೆಲಸವನ್ನಾದರೂ ಮಾಡಲಿಕ್ಕೆ ಹೇಸಲಾರ ಎನ್ನುವುದಕ್ಕೆ ಆತನ ಹಿನ್ನೆಲೆಯೇ ನಿದರ್ಶನದಂತಿದೆ.

ಅತ್ಯಾಚಾರ ಕೃತ್ಯಗಳು ಸಾಮಾನ್ಯ ಎನ್ನುವಂತಾಗಿರುವ ಸಂದರ್ಭದಲ್ಲಿ, ಅತ್ಯಾಚಾರಿಗಳಿಗೆ ಗರಿಷ್ಠ ಕಠಿಣ ಶಿಕ್ಷೆ ವಿಧಿಸುವ ಮೂಲಕ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳಿಗೆ ಕಡಿವಾಣ ಹಾಕಬೇಕು ಎನ್ನುವ ಸಾರ್ವಜನಿಕ ಅಭಿಪ್ರಾಯ ಬಲವಾಗುತ್ತಿದೆ. ಅತ್ಯಾಚಾರ ಪ್ರಕರಣಗಳನ್ನು ನ್ಯಾಯಾಲಯಗಳೂ ಗಂಭೀರವಾಗಿ ಪರಿಗಣಿಸುತ್ತಿದ್ದು, ವಿಚಾರಣೆಗಳನ್ನು ತ್ವರಿತವಾಗಿ ನಡೆಸುತ್ತಿವೆ ಹಾಗೂ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುತ್ತಿವೆ. ಇಂಥ ಸಂದರ್ಭದಲ್ಲಿ, ಉನ್ನಾವೊ ಪ್ರಕರಣದಲ್ಲಿ ಅಪರಾಧಿಗೆ ದೊರಕಿರುವ ತಾತ್ಕಾಲಿಕ ಪರಿಹಾರ ಸಾರ್ವಜನಿಕರ ದೃಷ್ಟಿಯಲ್ಲಿ ಕಾನೂನು ಪ್ರಕ್ರಿಯೆಯ ಹಿಮ್ಮುಖ ಚಲನೆಯಂತೆ ಕಾಣಿಸುತ್ತದೆ. ಉನ್ನಾವೊದಂಥ ಪ್ರಕರಣಗಳು ವೈಯಕ್ತಿಕ ಘಟನೆಗಳಾಗಿರದೆ, ನ್ಯಾಯಕ್ಕಾಗಿ ಜನಸಾಮಾನ್ಯರು ನಡೆಸುವ ಹೋರಾಟ ಹಾಗೂ ಮಹಿಳಾ ದೌರ್ಜನ್ಯ ವಿರೋಧಿ ಆಂದೋಲನದ ಸಂಕೇತಗಳಾಗಿವೆ. ಇಂಥ ಹೋರಾಟಗಳಿಗೆ ಆಗುವ ಹಿನ್ನಡೆ ಸಮಾಜ ಹಾಗೂ ಮೌಲ್ಯಾಧಾರಿತ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವಂತಹದ್ದು: ನ್ಯಾಯವ್ಯವಸ್ಥೆಯ ಬಗೆಗಿನ ಸಾರ್ವಜನಿಕ ವಿಶ್ವಾಸಾರ್ಹತೆಯಲ್ಲಿ ಕಂಪನಗಳನ್ನು ಉಂಟುಮಾಡುವಂತಹದ್ದು. ಹೈಕೋರ್ಟ್ ನಿರ್ದೇಶನವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಸಂತ್ರಸ್ತೆ ಹೇಳಿದ್ದಾರೆ. ಇದರೊಂದಿಗೆ, ಸಂತ್ರಸ್ತರ ಸುರಕ್ಷತೆ ಹಾಗೂ ಅಪರಾಧಿಯ ಹಕ್ಕುಗಳ ನಿರ್ಣಾಯಕ ಪರಾಮರ್ಶೆ ಸಾಧ್ಯವಾಗಬಹುದು. ನ್ಯಾಯದ ಹಾದಿ ದೀರ್ಘವಾದುದು ಹಾಗೂ ಆ ಹಾದಿಯಲ್ಲಿ ಸಂತ್ರಸ್ತರೊಂದಿಗೆ ನ್ಯಾಯವೂ ಅಗ್ನಿಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ ಎನ್ನುವುದಕ್ಕೆ ಉನ್ನಾವೊ ಪ್ರಕರಣ ನಿದರ್ಶನದಂತಿದೆ.

ಕ್ರೌರ್ಯ ಕೊನೆಯಾಗಲಿ...

ಒಡಲಾಳ

ಅಲ್ಲಲ್ಲಿ ಕ್ರಿಶ್ಚಿಯನ್ನರ ಮೇಲೆ ಹಲ್ಲೆಯಾಗುತ್ತಿರುವ ಘಟನೆಗಳು ವರದಿಯಾಗುತ್ತಿವೆ. ಭಾರತ ದೇಶವನ್ನು ಹಿಂದೂ ರಾಷ್ಟ್ರ ಮಾಡಲು ಭಾಗವತರಿಗೆ ಸಂವಿಧಾನದ ಒಪ್ಪಿಗೆ ಬೇಕಾಗಿಲ್ಲ. ಆರ್‌ಎಸ್‌ಎಸ್‌ನಂಥ ಬೃಹತ್ ಸಂಸ್ಥೆಗೆ ನೋಂದಣಿಯ ಅವಶ್ಯಕತೆ ಇಲ್ಲ. ಹಾಗೆಯೇ, ಅನ್ಯಮತೀಯರ ಮೇಲಿನ ಹಲ್ಲೆಗಳಿಗೆ ಯಾರ ಒಪ್ಪಿಗೆಯೂ ಬೇಕಾಗಿಲ್ಲ. ಸಾರ್ವಜನಿಕ ಕ್ರೌರ್ಯ ಕೊನೆಯಾಗಲಿ, ಪ್ರೀತಿ, ವಿಶ್ವಾಸ ಬೆಳೆಯಲಿ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಿಡಿನುಡಿ

ರಾಜ್ಯದ ಜನರು ಕಾಂಗ್ರೆಸ್‌ಗೆ ಅಧಿಕಾರ ನೀಡಿದ್ದಾರೆ. ಸರ್ಕಾರ ರಚನೆಯಾದ ದಿನದಿಂದಲೂ ಅಧಿಕಾರ ಹಂಚಿಕೆಯ ಕಿತ್ತಾಟ ನಡೆಯುತ್ತಿದೆ. ಇನ್ನೆಷ್ಟು ದಿನ ಹೀಗೆ ಕಾಲ ಕಳೆಯಲು ಸಾಧ್ಯ?

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 26-12-2000

- **ಚಿತ್ರನಟ ಧೀರೇಂದ್ರ ಗೋಪಾಲ್ ನಿಧನ**

ಹರಿಹರ, ಡಿ. 25- ಕನ್ನಡ ಚಿತ್ರರಂಗದ ಖಳನಟ ಹಾಗೂ ಹಾಸ್ಯನಟ ಆಗಿ ಹೆಸರು ಗಳಿಸಿದ್ದ ಧೀರೇಂದ್ರ ಗೋಪಾಲ್ (59) ಇಂದು ಬೆಳಿಗ್ಗೆ 11.45ಕ್ಕೆ ಹರಿಹರದಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಕುಂದಾಪುರದಲ್ಲಿ 'ಅಂಜಲಿ ಗೀತಾಂಜಲಿ' ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದ ಧೀರೇಂದ್ರ ಕೆಲಕಾಲ ದಿಂದ ಅಸ್ವಸ್ಥರಾಗಿದ್ದರೂ ಚೇತರಿಸಿ ಕೊಂಡು ಮತ್ತೆ ಚಿತ್ರರಂಗದತ್ತ ಮರಳಿ ದ್ದರು. ಇತ್ತೀಚೆಗೆ ಬಿಡುಗಡೆಯಾಗಿದ್ದ 'ನನ್ನವಳು ನನ್ನವಳು' ಚಿತ್ರದಲ್ಲಿ ತಮ್ಮ ಎಂದಿನ ಹಾಸ್ಯ, ರಂಜನೆ ಮಾತುಗಾರಿಕೆ ಮೂಲಕ ಮನಸೆಳೆದಿದ್ದರು.

75 ವರ್ಷಗಳ ಹಿಂದೆ

ಮಂಗಳವಾರ, 26-12-1950

- **ಕಾರ್ಪೊರೇಷನ್ ಚುನಾವಣೆ: ಕಾಂಗ್ರೆಸ್ಸಿಗೆ ಸಂಪೂರ್ಣ ಬಹುಮತ**

ಬೆಂಗಳೂರು, ಡಿ. 25- ಮೊನ್ನೆ ನಡೆದ ಕಾರ್ಪೊರೇಷನ್ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರು ಬಹುಮತದಿಂದ ಆರಿಸಿ ಬಂದಿದ್ದಾರೆ. ಕಾಂಗ್ರೆಸ್-45, ಸ್ವತಂತ್ರರು-20, ಸೋಷಲಿಸ್ಟ್-5 ಸ್ಥಾನಗಳಲ್ಲಿ ಗೆದ್ದಿದ್ದಾರೆ. ಕಾರ್ಪೊರೇಷನ್ನಿನಲ್ಲಿ ಒಟ್ಟು 75 ಮಂದಿ ಸದಸ್ಯರಿರುವರು. 70 ಸ್ಥಾನಗಳ ಚುನಾವಣೆ ನಡೆದಿದೆ. ಕಾರ್ಪೊರೇಷನ್ 5 ಮಂದಿ 'ನಗರದ ಹಿರಿಯ' ರನ್ನು ಚುನಾಯಿಸಿಕೊಳ್ಳಬೇಕಾದುದು ಮಾತ್ರ ಉಳಿದಿದೆ.

23ರಂದು ನಡೆದ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳಿಗೂ ಕಾಂಗ್ರೆಸ್ ಸ್ಪರ್ಧಿಸಿತ್ತು. ಸೋಷಲಿಸ್ಟ್ ಪಕ್ಷ 25 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು.

ಉನ್ನಾವೊ: ನ್ಯಾಯಕ್ಕೇ ಅಗ್ನಿಪರೀಕ್ಷೆ!

ವಿಶ್ಲೇಷಣೆ

ನೇಮಿಚಂದ್ರ

ರಾಜಕೀಯ ಅಧಿಕಾರ, ಹಣಬಲ ಹಾಗೂ ನ್ಯಾಯದ ನಡುವೆ ನಡೆಯುತ್ತಿರುವ ಸಂಘರ್ಷದ ರೂಪಕದಂತೆ ಉತ್ತರ ಪ್ರದೇಶದ ಉನ್ನಾವೊ ಕಾಣಿಸುತ್ತಿದೆ. ಅತ್ಯಾಚಾರದ ಅಪರಾಧಿಗೆ ಶಿಕ್ಷೆ ಅಮಾನತುಗೊಂಡು ಜಾಮೀನು ದೊರೆತಿರುವುದು, ಸಂತ್ರಸ್ತೆಯನ್ನು ಮತ್ತೊಮ್ಮೆ ಆತಂಕದ ಮಡುವಿಗೆ ದೂಡಿದೆ ಹಾಗೂ ನ್ಯಾಯದ ಹಾದಿಯ ಸಂಕೀರ್ಣತೆಯನ್ನು ಸೂಚಿಸುವಂತಿದೆ.

ಉತ್ತರ ಪ್ರದೇಶದ ಉನ್ನಾವೊದಲ್ಲಿ ಅಪ್ರಾಪ್ತ ವಯಸ್ಸಿನ ಬಾಲೆಯ ಮೇಲೆ ಅತ್ಯಾಚಾರ ಎಸಗಿದ್ದ ಶಾಸಕ ಕುಲದೀಪ್ ಸಿಂಗ್ ಸೆಂಗರ್‌ನ ಜೀವಾವಧಿ ಶಿಕ್ಷೆಯನ್ನು, ದೆಹಲಿಯ ಹೈಕೋರ್ಟ್ ಅಮಾನತುಗೊಳಿಸಿದೆ; ಜಾಮೀನನ್ನೂ ಕರುಣಿಸಿದೆ. ಈ ವಿದ್ಯಮಾನ ನ್ಯಾಯದ ಹಾದಿ ಎಷ್ಟು ಕಠಿಣ ಎನ್ನುವುದನ್ನು ದೇಶಕ್ಕೆ ಮತ್ತೊಮ್ಮೆ ಮನವರಿಕೆ ಮಾಡಿಕೊಡುವಂತಿದೆ. ಕ್ರಿಸ್‌ಮಸ್ ಮತ್ತು ಹೊಸವರ್ಷದ ಅಂಗವಾಗಿ ಸುಪ್ರೀಂ ಕೋರ್ಟ್‌ಗೆ ರಜೆ ಇರುವ ಸಮಯದಲ್ಲಿ ದೆಹಲಿ ಹೈಕೋರ್ಟ್ ನಿರ್ದೇಶನ ಬಂದಿದೆ.

ಜಾಮೀನು ಪಡೆದಿರುವ ವ್ಯಕ್ತಿ ಸಾಮಾನ್ಯ ಅತ್ಯಾಚಾರಿ ಅಲ್ಲ ಎಂಬುದನ್ನು ನಾವು ನೆನಪಿಡಬೇಕು. ಸಂತ್ರಸ್ತೆಯ ಮೇಲೆ, ಆಕೆಯ ಕುಟುಂಬದ ಮೇಲೆ ಸಾವಿನ ಸುರಿಮಳೆಗರೆದ ವ್ಯಕ್ತಿ ಈತ. ತಂದೆಯನ್ನು, ಕುಟುಂಬದ ಇಬ್ಬರು ಮಹಿಳೆಯರನ್ನು ಕಳೆದುಕೊಂಡಿರುವ ಸಂತ್ರಸ್ತೆ, ತನ್ನೆಲ್ಲ ಸಂಕಟಕ್ಕೆ ಕಾರಣವಾಗಿರುವ ವ್ಯಕ್ತಿಗೆ ಜಾಮೀನು ದೊರೆತಿರುವುದು ತನ್ನ ಕುಟುಂಬಕ್ಕೆ ಮರಣ ಮೃದಂಗವಾಗಿದೆ ಎಂದಿರುವುದು ಉತ್ಪ್ರೇಕ್ಷೆ ಅಲ್ಲ. 'ಕುಲದೀಪ್ ಸಿಂಗ್ ಅತ್ಯಂತ ಪ್ರಭಾವಿ ವ್ಯಕ್ತಿ; ಪಕ್ಷ ಆತನನ್ನು ಹೊರಹಾಕಿರಬಹುದು. ಆದರೆ, ಆತನ ಬೆಂಬಲಿಗರು ಈಗಲೂ ಪಕ್ಷದಲ್ಲಿದ್ದಾರೆ' ಎಂಬ ಸಂತ್ರಸ್ತೆಯ ಆರೋಪ ಗಂಭೀರವಾದುದು, ಆದರೆ ಬುನಾದಿರಹಿತವಲ್ಲ.

2017ರ ಜೂನ್ 4ರಂದು ಕೆಲಸ ಹುಡುಕಿಕೊಂಡು ಬಂದ ಹದಿನೇಳು ವರ್ಷದ ಯುವತಿಯ ಮೇಲೆ ಸೆಂಗರ್ ಅತ್ಯಾಚಾರ ಎಸಗಿದ್ದ. ಅದಾದ ಒಂದು ವಾರದ ನಂತರ ಆತನ ಸಹವರ್ತಿಗಳು ಆಕೆಯನ್ನು ಹೊತ್ತೊಯ್ದು ಬಂಧನದಲ್ಲಿಟ್ಟು, ಸಾಮೂಹಿಕ ಅತ್ಯಾಚಾರ ಮಾಡಿದ್ದನ್ನು ಆಕೆ ಅರುಹಿದ್ದಳು. ನ್ಯಾಯದ ಹಂಬಲದಿಂದ ಸಂತ್ರಸ್ತೆ ಮತ್ತು ಆಕೆಯ ಕುಟುಂಬ ದೂರು ನೀಡಲು ಮುಂದಾದಾಗ ಆಘಾತ ಎದುರಾಗಿತ್ತು. ಪೊಲೀಸರು ಆರೋಪಿಯ ಹೆಸರನ್ನು ದಾಖಲಿಸಲು ಸಿದ್ಧವಿರಲಿಲ್ಲ. 2018ರ ಏಪ್ರಿಲ್ 3ರಂದು, ಸಂತ್ರಸ್ತೆಯ ತಂದೆ ಮೇಲೆ ಆರೋಪಿಯ ಬೆಂಬಲಿಗರು ಹಲ್ಲೆ ನಡೆಸಿದರು. ಆಗಲೂ ಆರೋಪಿಯನ್ನು ವಶಕ್ಕೆ ಪಡೆಯುವ ಬದಲು, ಸಂತ್ರಸ್ತೆಯ ತಂದೆಯನ್ನೇ ಪೊಲೀಸರು ಬಂಧಿಸಿದರು. ತೀವ್ರವಾಗಿ ಗಾಯಗೊಂಡಿದ್ದ ನತದೃಷ್ಟ ಹೆಣ್ಣುಮಗಳ ತಂದೆ, 'ಸೆಂಗರ್‌ನ ಸೋದರ ಅತುಲ್ ಸೆಂಗರ್ ತನ್ನ ಮೇಲೆ ಆಕ್ರಮಣ ಮಾಡಿದ್ದು' ಎಂದು ಹೇಳಿದರೂ, ಆರೋಪಿಗಳ ಮೇಲೆ ಪೊಲೀಸರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ತಂದೆಯ ಗಾಯಗೊಂಡ ಸ್ಥಿತಿ ಹಾಗೂ ಬಂಧನ, ಆರೋಪಿಗಳ ಬೆದರಿಕೆ ಎಲ್ಲವನ್ನೂ ಸಹಿಸಲಾರದೆ, ನ್ಯಾಯದ ಯಾವ ಮಾರ್ಗವೂ ಕಾಣದೆ ಹತಾಶಳಾದ ಈ ಎಳೆಯ ಹುಡುಗಿ, ಏಪ್ರಿಲ್ 8ರಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಮನೆಯ ಮುಂದೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು. ಮರುದಿನ, ಏಪ್ರಿಲ್ 9ರಂದು ಬಂಧನದಲ್ಲಿದ್ದ ತಂದೆ ತೀರಿಕೊಂಡರು. ತಂದೆಯ ಸಾವು, ಸಂತ್ರಸ್ತೆ ಬೆಂಕಿ ಹಚ್ಚಿಕೊಳ್ಳಲು ಪ್ರಯತ್ನಿಸಿದ್ದು ಜನತೆಯ ಆಕ್ರೋಶವನ್ನು ಬಡಿದೆಚ್ಚರಿಸಿದ ಮೇಲೆಯೇ ಸೆಂಗರ್ ಮೇಲೆ ಎಫ್‌ಐಆರ್ ದಾಖಲಾಯಿತು ಹಾಗೂ ಆತನ ಸೋದರ ಅತುಲ್‌ನ ಬಂಧನವಾಯಿತು. ಇಷ್ಟಾದರೂ, ಅತ್ಯಾಚಾರದ ಆರೋಪಿಯನ್ನು ತಕ್ಷಣ ಪಕ್ಷದಿಂದ ಹೊರಹಾಕಿರಲಿಲ್ಲ. ಜನತೆಯ ಆಕ್ರೋಶ ತಾರಕಸ್ಥಿತಿ ಮುಟ್ಟಿದಾಗ ಹಾಗೂ ವಿಪಕ್ಷಗಳು ಹುಯಿಲೆಬ್ಬಿಸಿದಾಗ ಬಿಜೆಪಿ ಸೆಂಗರ್‌ನನ್ನು ಹೊರಹಾಕಿತು.

ಉನ್ನಾವೊದ ಪ್ರಕರಣವನ್ನು ರಾಜ್ಯ ಸರ್ಕಾರ ಸಿಬಿಐಗೆ ರವಾನಿಸಿದ್ದರಿಂದಾಗಿ, ಕೇಸು ಅಲಹಾಬಾದ್ ಹೈಕೋರ್ಟ್‌ಗೆ ಹೋಯಿತು. ಸಂತ್ರಸ್ತೆಯ ಚಿಕ್ಕಪ್ಪ ಆ ಕೇಸಿನಲ್ಲಿ ಮುಖ್ಯ ಸಾಕ್ಷಿಯಾಗಿದ್ದರು. ಅಣ್ಣನ ಸಾವಿನಿಂದ ನೊಂದಿದ್ದ ಆತ, ಸಂತ್ರಸ್ತೆಯಾದ ತನ್ನ ಅಣ್ಣನ ಮಗಳ ಜೊತೆ ನಿಂತು ಆರೋಪಿಯ ವಿರುದ್ಧ ದನಿ ಎತ್ತಿದ್ದೇ ತಪ್ಪಾಯಿತು. ಆತನನ್ನು 18 ವರ್ಷಗಳ ಹಿಂದಿನ ಯಾವುದೋ ಪ್ರಕರಣ ಕೆದಕಿ ಬಂಧಿಸಲಾಯಿತು. ಮತ್ತೆ ದೇಶದುದ್ದಕ್ಕೂ ಜನತೆಯ ಪ್ರತಿಭಟನೆ, ನ್ಯಾಯಕ್ಕಾಗಿ ಹಕ್ಕೊತ್ತಾಯ ವ್ಯಕ್ತವಾಯಿತು. ಆದರೂ ಆರೋಪಿಯ ದೌರ್ಜನ್ಯ ಕೊನೆಗೊಂಡಿರಲಿಲ್ಲ. ಆತ ಎಷ್ಟು ಪ್ರಭಾವಿ ಮನುಷ್ಯನೆಂದರೆ, ಸಂತ್ರಸ್ತೆಯ ಉಳಿದ ಕುಟುಂಬದ ಮೇಲೂ ಜೀವ ಬೆದರಿಕೆ ಹಾಕಿದ್ದ. ಪ್ರಾಣಭೀತಿಯಲ್ಲಿ ಸಂತ್ರಸ್ತೆ 2019ರ ಜುಲೈ 12ರಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದಳು. ಆಕೆಯ ಭೀತಿ ನೈಜವಾಗಿತ್ತು. ಜುಲೈ 28ರಂದು ಸಂತ್ರಸ್ತೆ ಕುಳಿತಿದ್ದ ಕಾರನ್ನು ಒಂದು ಟ್ರಕ್ ಬಂದು ಗುದ್ದಿತು. ಆಕೆಯ ಕುಟುಂಬದ ಇಬ್ಬರು ಮಹಿಳೆಯರು ಸತ್ತರು. ಸಂತ್ರಸ್ತೆ ಮತ್ತು ಆಕೆಯ ವಕೀಲ ತೀವ್ರ ರೂಪದಲ್ಲಿ ಗಾಯಗೊಂಡರು. ಸಂತ್ರಸ್ತೆಗೆ ಭದ್ರತೆ ನೀಡಲು ನೇಮಿಸಿದ್ದ ಪೊಲೀಸ್ ಅಧಿಕಾರಿ ಜೊತೆಯಲ್ಲಿ ಇರಲಿಲ್ಲ ಎನ್ನುವುದು, ಸಂತ್ರಸ್ತೆಯನ್ನು, ಸಾಕ್ಷಿಗಳನ್ನು, ಕುಟುಂಬವನ್ನು ಹಾಗೂ ವಕೀಲರನ್ನು ಮುಗಿಸಿಬಿಡುವ ಪಿತೂರಿ ನಡೆದಿತ್ತೆಂಬ ಅನುಮಾನಕ್ಕೆ ಪುಷ್ಟಿ ಒದಗಿಸಿತ್ತು. ಕೆಲದಿನಗಳ ನಂತರ ಆಕೆಯ ವಕೀಲರೂ ಮೃತಪಟ್ಟರು.

ಸಾಧನೆಯ ಶಿಖರ ಏರಿದವರು

• ಬಾಲಚಂದ್ರ, ಸಿಂಧು ಕೆ.ಟಿ.

ಸಾಹಿತ್ಯ, ಕಲೆ, ವಿಜ್ಞಾನ, ಸಂಶೋಧನೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ, ಕಠಿಣ ಪರಿಶ್ರಮ, ನಿಸ್ವಾರ್ಥ ಸೇವೆ ಮತ್ತು ಸಾಮರ್ಥ್ಯದಿಂದ ಈ ವರ್ಷದ ಸಾಧನೆಯ ಶಿಖರವನ್ನೇರಿದ ಪ್ರಮುಖರು ಇವರು



ಶುಭಾಂಶು ಶುಕ್ಲಾ

ಶುಭಾಂಶು ಶುಕ್ಲಾ: ಜೂನ್ 25ರಿಂದ ಜುಲೈ 15ರವರೆಗೆ 'ಆಕ್ಸಿಯಂ-4'ರ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) ಕಳೆದಿದ್ದ ಶುಭಾಂಶು ಅವರು, ಬಾಹ್ಯಾಕಾಶಕ್ಕೆ ತೆರಳಿದ ಎರಡನೇ, ಐಎಸ್‌ಎಸ್‌ಗೆ ತೆರಳಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು

ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ: ಹಿರಿಯ ಕಥೆಗಾರ್ತಿ ಬಾನು ಮುಷ್ತಾಕ್ ಅವರ ಆಯ್ದ ಸಣ್ಣ ಕಥೆಗಳ ಅನುವಾದಿತ ಕೃತಿ 'ಹಾರ್ಟ್ ಲ್ಯಾಂಪ್'ಗೆ 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಒಲಿದು ಬಂತು. ಕನ್ನಡಕ್ಕೆ ಬಂದ ಮೊದಲ 'ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ' ಇದು. ಕಥಾ ಸಂಕಲನವೊಂದಕ್ಕೆ ಈ ಗೌರವ ಲಭಿಸುತ್ತಿರುವುದು ಕೂಡ ಇದೇ ಮೊದಲು. ಈ ಪ್ರಶಸ್ತಿಗೆ ಭಾಜನರಾದ ಮೊದಲ ಭಾರತೀಯ ಅನುವಾದಕಿ ಎಂಬ ಹಿರಿಮೆಗೆ ಕನ್ನಡದವರೇ ಆದ ದೀಪಾ ಭಾಸ್ತಿ ಪಾತ್ರರಾದರು

ಬಾನು ಮುಷ್ತಾಕ್ ದೀಪಾ ಭಾಸ್ತಿ

ಡಾ. ಜಯಶ್ರೀ ವೆಂಕಟೇಶನ್: ಭಾರತೀಯ ಪರಿಸರ ಕಾರ್ಯಕರ್ತೆಯಾದ ಅವರು 'ವೆಟ್‌ಲ್ಯಾಂಡ್ ವೈಸ್ ಯೂಸ್' ವಿಭಾಗದಲ್ಲಿ 2025ರ ವಾರ್ಷಿಕ (ಆರ್ದ್ರಭೂಮಿಗಳ ಸಂರಕ್ಷಣೆಗಾಗಿ) ರಾಮ್ಸರ್ ಪ್ರಶಸ್ತಿಯನ್ನು



ಮೋಹನ್‌ಲಾಲ್

ಪಡೆದ ಮೊದಲ ಭಾರತೀಯ ಎಂಬ ಮನ್ನಣೆ ಗಳಿಸಿದರು

ಮೋಹನ್‌ಲಾಲ್: ಮಲಯಾಳ ಚಿತ್ರರಂಗದ ಹಿರಿಯ ನಟ, 400ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಮೋಹನ್‌ಲಾಲ್ ಅವರು ಭಾರತೀಯ ಸಿನಿಮಾ ಕ್ಷೇತ್ರದ ಅತ್ಯುನ್ನತ ಗೌರವ ಎನಿಸಿರುವ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ'ಗೆ ಆಯ್ಕೆಯಾದರು

ವರ್ಷಾ ದೇಶಪಾಂಡೆ: 2025ರ ವಿಶ್ವಸಂಸ್ಥೆಯ ಜನಸಂಖ್ಯಾ ಪ್ರಶಸ್ತಿಯನ್ನು ಭಾರತದ ಮಹಿಳಾ ಹಕ್ಕುಗಳ ಕಾರ್ಯಕರ್ತೆ ಮತ್ತು ವಕೀಲೆ ವರ್ಷಾ ದೇಶಪಾಂಡೆ ಅವರು ಪಡೆದರು. ಲಿಂಗ ಸಮಾನತೆ, ಸಂತಾನೋತ್ಪತ್ತಿ ಹಕ್ಕುಗಳು ಮತ್ತು ಲಿಂಗ ಆಧಾರಿತ ಗರ್ಭಪಾತಗಳನ್ನು ತಡೆಗಟ್ಟುವಲ್ಲಿ ಅವರು ನಡೆಸಿದ ಹೋರಾಟಕ್ಕಾಗಿ ಈ ಪ್ರಶಸ್ತಿ ಒಲಿಯಿತು. ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನದಂದು ನ್ಯೂಯಾರ್ಕ್‌ನಲ್ಲಿ ಪ್ರಶಸ್ತಿ ಪ್ರದಾನ ನಡೆಯಿತು

ಶೀಲಾ ಗೌಡ

ಶೀಲಾ ಗೌಡ: ಅಂತರರಾಷ್ಟ್ರೀಯ ಮಟ್ಟದ ಕಲಾಸಾಧಕರಿಗೆ ಕೊಡಮಾಡುವ ಪ್ರತಿಷ್ಠಿತ 'ಸ್ಯಾಮ್ ಗಿಲ್ಲಿಯಾಮ್ ಪ್ರಶಸ್ತಿ'ಗೆ ಈ ವರ್ಷ ಕನ್ನಡತಿ ಕಲಾವಿದೆ ಶೀಲಾ ಗೌಡ ಅವರು ಭಾಜನರಾದರು. ದಿಯಾ ಆರ್ಟ್ ಫೌಂಡೇಷನ್ ಮತ್ತು ಸ್ಯಾಮ್ ಗಿಲ್ಲಿಯಾಮ್ ಫೌಂಡೇಷನ್ ಜಂಟಿಯಾಗಿ ಏಪ್ರಿಲ್‌ನಲ್ಲಿ ಈ ಪ್ರಶಸ್ತಿಯ ಘೋಷಣೆ ಮಾಡಿತು. ಪ್ರಶಸ್ತಿಯ ಮೊತ್ತ 75 ಸಾವಿರ ಡಾಲರ್ (ಆಗಿನ ಮೌಲ್ಯ ₹63.49 ಲಕ್ಷ)

ಸಿಹಿ ಅಧ್ಯಾಯದಲ್ಲಿ ಕೆಲ ಕಹಿ ಪುಟಗಳು

• ವಿಜಯ್ ಜೋಷಿ

ವರ್ಷದ ಎರಡನೆಯ ತಿಂಗಳ ಮೊದಲ ದಿನ ಮಂಡನೆಯಾದ ಕೇಂದ್ರ ಬಜೆಟ್ ಮಹತ್ವದ ಬದಲಾವಣೆಯೊಂದನ್ನು ಹೊತ್ತು ತಂದಿತು. ₹12 ಲಕ್ಷದವರೆಗಿನ ವೈಯಕ್ತಿಕ ಆದಾಯಕ್ಕೆ ತೆರಿಗೆ ಇಲ್ಲ, ವೇತನದಾರರಿಗೆ ₹12.75 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದರು.

ಕೋವಿಡ್-19 ಸಾಂಕ್ರಾಮಿಕವು ಅಪ್ಪಳಿಸಿದ ದಿನದಿಂದಲೂ ಆದಾಯ ತೆರಿಗೆ ವಿನಾಯಿತಿ ಮಿತಿಯಲ್ಲಿ ಹೆಚ್ಚಳ ಆಗಬಹುದು ಎಂಬ ನಿರೀಕ್ಷೆಯಲ್ಲಿ ಇದ್ದ ದೇಶದ ಮಧ್ಯಮ ವರ್ಗಕ್ಕೆ ಇದು ಸಿಹಿ ನೀಡಿತು. 'ವಿವಿಧ ರಾಜ್ಯ ಸರ್ಕಾರಗಳು ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆಯು ಹೆಚ್ಚಳ ಕಾಣುತ್ತಿದೆ. ಕೇಂದ್ರದ ಕ್ರಮವು ನಗರ ಪ್ರದೇಶಗಳಲ್ಲಿ ಬೇಡಿಕೆಯನ್ನು ಜಾಸ್ತಿ ಮಾಡಲಿದೆ' ಎಂದು ಆಗ ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದರು.

ಜಿಎಸ್‌ಟಿ ದರ ಪರಿಷ್ಕರಣೆ

ಜಿಡಿಪಿ ಬೆಳವಣಿಗೆ ಪ್ರಮಾಣಕ್ಕೆ ಸಂಬಂಧಿಸಿದ ಅಂಕಿ-ಅಂಶಗಳು ಈ ಅಂದಾಜು ಸರಿ ಎಂದು ಹೇಳುತ್ತಿರಬಹುದು. ಏಪ್ರಿಲ್ 1ರಿಂದ ಶುರುವಾದ ಹೊಸ ಆರ್ಥಿಕ ವರ್ಷದ ಎರಡು ತ್ರೈಮಾಸಿಕಗಳಲ್ಲಿ ಜಿಡಿಪಿ ಬೆಳವಣಿಗೆ ದರವು ಹೆಚ್ಚುತ್ತಾ ಸಾಗಿದೆ. ಆದರೆ ಆದಾಯ ತೆರಿಗೆ ವಿನಾಯಿತಿಯ ಮಟ್ಟವನ್ನು ಹೆಚ್ಚಿಸಿದ್ದಕ್ಕಿಂತ ಹೆಚ್ಚು ಸಿಹಿಯಾದ, ಹೆಚ್ಚು ವ್ಯಾಪಕ ಪರಿಣಾಮ ಉಂಟುಮಾಡುವ ತೀರ್ಮಾನವೊಂದು ನಂತರದಲ್ಲಿ ಜಾರಿಗೆ ಬಂತು.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ದೇಶದ ಜನರಿಗೆ ಸಿಹಿ ಸುದ್ದಿಯೊಂದು ಸಿಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ದಿನ ಪ್ರಕಟಿಸಿದರು. ಆ ಸಿಹಿ ಸುದ್ದಿಯು ಜಿಎಸ್‌ಟಿ ದರ ಪರಿಷ್ಕರಣೆಗೆ ಸಂಬಂಧಿಸಿದ್ದಾಗಿರಲಿದೆ ಎಂದು ಅಧಿಕೃತ ಮೂಲಗಳು ಆಗಲೇ ಮಾಹಿತಿ ನೀಡಿದ್ದವು.

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳನ್ನು ಒಳಗೊಂಡಿರುವ ಜಿಎಸ್‌ಟಿ ಮಂಡಳಿಯು ಪರೋಕ್ಷ ತೆರಿಗೆ ಹಂತಗಳಲ್ಲಿ ದೊಡ್ಡ ಬದಲಾವಣೆ ತರುವ ತೀರ್ಮಾನ ತೆಗೆದುಕೊಂಡಿತು. ಆ ತೀರ್ಮಾನಗಳು ಸೆಪ್ಟೆಂಬರ್ 22ರಿಂದ ಜಾರಿಗೆ ಬಂದವು. ಜಿಎಸ್‌ಟಿ ವ್ಯವಸ್ಥೆಯನ್ನು ರೂಪಿಸಿದ್ದು ಪರೋಕ್ಷ ತೆರಿಗೆ ವ್ಯವಸ್ಥೆಯಲ್ಲಿನ ಅತಿದೊಡ್ಡ ಸುಧಾರಣೆಯಾದರೆ, ಸೆಪ್ಟೆಂಬರ್ 22ರಂದು ಜಾರಿಗೆ ಬಂದ ದರ ಪರಿಷ್ಕರಣೆಯು ಜಿಎಸ್‌ಟಿ ವ್ಯವಸ್ಥೆಯಲ್ಲಿನ ಅತಿದೊಡ್ಡ ಸುಧಾರಣೆ.

ದಿನಸಿ ಉತ್ಪನ್ನಗಳು, ಕೃಷಿ ಉಪಕರಣಗಳು, ಬಟ್ಟೆ, ಔಷಧಗಳು ಮತ್ತು ವಾಹನಗಳು ಸೇರಿದಂತೆ ಒಟ್ಟು 375 ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರ ಪರಿಷ್ಕರಣೆ ಕಂಡಿತು. ಜಿಎಸ್‌ಟಿ ಸುಧಾರಣೆಯನ್ನು ಪ್ರಧಾನಿ ಮೋದಿ ಅವರು 'ಜಿಎಸ್‌ಟಿ ಉಳಿತಾಯ ಉತ್ಸವ' ಎಂದು ಬಣ್ಣಿಸಿದರು. ಜಿಎಸ್‌ಟಿ ದರ ಇಳಿಕೆಯಿಂದ ಅರ್ಥ ವ್ಯವಸ್ಥೆಗೆ ಆದ ಅನುಕೂಲವನ್ನು ಎಸ್‌ಬಿಐ ರಿಸರ್ಚ್ ಸಂಸ್ಥೆಯು ಬಹಳ ಚೆನ್ನಾಗಿ ಹೇಳಿದೆ. ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ ಆದಾಯ ತೆರಿಗೆ ಮಿತಿ ಸಡಿಲಿಕೆ ಕ್ರಮ ಹಾಗೂ ಜಿಎಸ್‌ಟಿ ಸುಧಾರಣೆಯ ಒಟ್ಟು ಪರಿಣಾಮವಾಗಿ, ಅರ್ಥ ವ್ಯವಸ್ಥೆಯಲ್ಲಿ ₹5.31 ಲಕ್ಷ ಕೋಟಿ ಮೌಲ್ಯದ ಬೇಡಿಕೆ ಸೃಷ್ಟಿಯಾಗಲಿದೆ ಎಂದು ಎಸ್‌ಬಿಐ ಅಂದಾಜು ಮಾಡಿದೆ.

ವರ್ಷದ ಕೊನೆಯಲ್ಲಿ ನಿಂತು, ಇಡೀ ವರ್ಷದಲ್ಲಿ ದೇಶದ ಹಣಕಾಸಿನ ಲೋಕದಲ್ಲಿ ಆಗಿಹೋದ ಪ್ರಮುಖ ವಿದ್ಯಮಾನಗಳ ಅವಲೋಕನ ನಡೆಸಲು ಯತ್ನಿಸಿದರೆ ಬೇವು-ಬೆಲ್ಲಗಳೆರಡರ ಅನುಭವ ದಕ್ಕುತ್ತದೆ. ವರ್ಷದ ಆರಂಭದಲ್ಲಿ ಬೇವು-ಬೆಲ್ಲ ನೀಡುವುದರ ಹಿಂದಿನ ಆಶಯವು ಆಧ್ಯಾತ್ಮಿಕ ಮಹತ್ವವನ್ನಷ್ಟೇ ಅಲ್ಲದೆ, ಆರ್ಥಿಕ ಜಗತ್ತಿನಲ್ಲಿಯೂ ಎಷ್ಟೊಂದು ಅರ್ಥವನ್ನು ಹೊಂದಿದೆಯಲ್ಲ ಎಂಬ ಸೋಜಿಗ ಉಂಟಾಗುತ್ತದೆ

- ಜಾಗತಿಕ ರೇಟಿಂಗ್ ಸಂಸ್ಥೆ ಎಸ್‌ಆ್ಯಂಡ್‌ಪಿ ಆಗಸ್ಟ್‌ನಲ್ಲಿ ಭಾರತದ ರೇಟಿಂಗ್ ಮಟ್ಟವನ್ನು 18 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಮೇಲ್ದರ್ಜೆಗೆ ಏರಿಸಿತು
- ವಿಮಾ ಕ್ಷೇತ್ರದಲ್ಲಿ ಶೇಕಡ 100ರಷ್ಟು ಎಫ್‌ಡಿಐಗೆ ಅವಕಾಶ ನೀಡುವ ಮಸೂದೆಗೆ ಸಂಸತ್ತು ಒಪ್ಪಿಗೆ ನೀಡಿತು
- ದೇಶದ ಅತ್ಯಂತ ಪ್ರಮುಖ ಉದ್ಯಮ ಸಮೂಹಗಳಲ್ಲಿ ಒಂದಾದ ಟಾಟಾ ಸಮೂಹದ ಮಾಲೀಕತ್ವದ ಹೊಂದಿರುವ ಟಾಟಾ ಟ್ರಸ್ಟ್ಸ್‌ನಲ್ಲಿನ ಆಂತರಿಕ ಕಲಹ ಬಯಲಾಯಿತು

ಕುಸಿದ ರೂಪಾಯಿ

ಇದುವರೆಗೆ ಉಲ್ಲೇಖಿಸಿದ ಎರಡು ಪ್ರಮುಖ ವಿದ್ಯಮಾನಗಳು 'ಬೆಲ್ಲ'ವನ್ನು ಪ್ರತಿನಿಧಿಸುವಂಥವು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 90ಕ್ಕಿಂತ ಕೆಳಮಟ್ಟಕ್ಕೆ ಕುಸಿದು ಸಾರ್ವಕಾಲಿಕ ಕನಿಷ್ಠ ಮಟ್ಟವನ್ನು ತಲುಪಿದ್ದು 2025ರ ಕಹಿ ಸಂಗತಿಗಳಲ್ಲೊಂದು. ವಿದೇಶಿ ಹೂಡಿಕೆದಾರರು ಭಾರತದ ಷೇರುಪೇಟೆಗಳಿಂದ ಹಣವನ್ನು ನಿರಂತರವಾಗಿ ಹಿಂಪಡೆದಿದ್ದು, ಜಾಗತಿಕ ಅನಿಶ್ಚಿತತೆಗಳ ಕಾರಣದಿಂದಾಗಿ ಹೂಡಿಕೆದಾರರು ಅಮೆರಿಕದ ಡಾಲರ್‌ನಲ್ಲಿ ಹೆಚ್ಚು ಹಣ ತೊಡಗಿಸಿದ್ದು, ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದ ಸುತ್ತಲಿನ ಅನಿಶ್ಚಿತತೆ ಕೊನೆಗೊಂಡಿಲ್ಲದಿರುವುದು ಸೇರಿದಂತೆ ರೂಪಾಯಿ ಕುಸಿತಕ್ಕೆ ಹಲವು ಕಾರಣಗಳನ್ನು ಆರ್ಥಿಕ ತಜ್ಞರು ನೀಡಿದ್ದಾರೆ. ಮೌಲ್ಯ ಕುಸಿತದಿಂದಾಗಿ ರಫ್ತು ಆಧಾರಿತ ಉದ್ದಿಮೆಗಳು ಖುಷಿ ಅನುಭವಿಸುವಂತೆ ಆಯಿತಾದರೂ, ಕಚ್ಚಾ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಕೈಗಾರಿಕೆಗಳಿಗೆ ಇದು ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ರೂಪಾಯಿ ಮೌಲ್ಯ ಇಳಿಕೆಯ ವಿದ್ಯಮಾನದಲ್ಲಿ ಕುತೂಹಲಕರ ಸಂಗತಿಯೊಂದಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ರೂಪಾಯಿ ಮೌಲ್ಯ ಕುಸಿದಿದ್ದಾಗ, ಅದು ಅರ್ಥ ವ್ಯವಸ್ಥೆಗೆ ಬಹಳ ದೊಡ್ಡ ಕೇಡು ಎಂಬಂತೆ ಮಾತನಾಡಿದ್ದ ರಾಜಕೀಯ ವರ್ಗವು ಈಗಿನ ಕುಸಿತವು ಅರ್ಥ ವ್ಯವಸ್ಥೆಗೆ ಒಂದು ಬಗೆಯಲ್ಲಿ ಒಳ್ಳೆಯದು ಎಂಬ ಸಂಕಥನವನ್ನು ಕಟ್ಟಲು ಯತ್ನಿಸಿದೆ!

ಇಳಿದ ಹಣದುಬ್ಬರ

2025ರಲ್ಲಿ ಭಾರತವು ದಶಕದ ಅತ್ಯಂತ ಕನಿಷ್ಠ ಮಟ್ಟದ ಹಣದುಬ್ಬರ ಪ್ರಮಾಣವನ್ನು ದಾಖಲಿಸಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ರ ಮಟ್ಟದಲ್ಲಿ ಕಾಯ್ದುಕೊಳ್ಳಬೇಕು ಎಂಬುದು ಕೇಂದ್ರ ಸರ್ಕಾರವು ಆರ್‌ಬಿಐಗೆ ನೀಡಿರುವ ಗುರಿ. ಆದರೆ ಈ ವರ್ಷದ ಅಕ್ಟೋಬರ್‌ನಲ್ಲಿ ಹಣದುಬ್ಬರವು ಶೇ 0.25ರ ಮಟ್ಟಕ್ಕೆ ಕುಸಿದಿತ್ತು. ಹಣದುಬ್ಬರದ ಇಳಿಕೆಯು ಖರೀದಿದಾರರಿಗೆ ಖುಷಿ ನೀಡಬಹುದಾದರೂ ಒಟ್ಟಾರೆ ಅರ್ಥವ್ಯವಸ್ಥೆಗೆ ಅದು ಒಳ್ಳೆಯದನ್ನೇ ಮಾಡುತ್ತದೆ ಎನ್ನಲಾಗದು.

ಅಗಲಿದವರು...

• ಜಗದೀಶ, ಅಶ್ವಿನಿ ಸಿ.

ಸಾಹಿತ್ಯ, ರಾಜಕೀಯ, ಸಾಮಾಜಿಕ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಹಲವು ಗಣ್ಯರು ಈ ವರ್ಷ ನಮ್ಮನ್ನಗಲಿದ್ದಾರೆ. ಪ್ರಮುಖರ ವಿವರ ಇಲ್ಲಿದೆ

ಪ್ರೀತಿಶ್ ನಂದಿ: ಪತ್ರಕರ್ತ, ಕವಿ, ಚಿತ್ರ ನಿರ್ಮಾಪಕರಾಗಿದ್ದ ಪ್ರೀತಿಶ್ ನಂದಿ (73) ಅವರು ಜನವರಿ 8ರಂದು ನಿಧನರಾದರು. ರಾಜ್ಯಸಭಾ ಸದಸ್ಯರಾಗಿದ್ದ ಪ್ರೀತೀಶ್ ಪ್ರಾಣಿ ಹಕ್ಕುಗಳ ಪರ ವಕೀಲರಾಗಿದ್ದರು

ಮನೋಜ್ ಕುಮಾರ್: ಬಾಲಿವುಡ್‌ನ ಖ್ಯಾತ ನಟ, ನಿರ್ಮಾಪಕರಾಗಿದ್ದ ಮನೋಜ್ ಕುಮಾರ್ (87) ಅವರು ಹೃದಯಸಂಬಂಧಿ ಕಾಯಿಲೆಯಿಂದಾಗಿ ಏಪ್ರಿಲ್ 4 ರಂದು ಮುಂಬೈನಲ್ಲಿ ನಿಧನರಾದರು. ದೇಶಭಕ್ತಿ ಕಥಾ ಹಂದರದ ಸಿನಿಮಾಗಳಲ್ಲಿ ತಮ್ಮ ಪಾತ್ರದಿಂದಲೇ ಚಿರಪರಿಚಿತರಾಗಿದ್ದ ಇವರು 'ಭಾರತ ಕುಮಾರ' ಎಂದೇ ಪ್ರಸಿದ್ಧಿ ಹೊಂದಿದ್ದರು

ಪೋಪ್ ಫ್ರಾನ್ಸಿಸ್: ಪೋಪ್ ಹುದ್ದೆಗೇರಿದ ಲ್ಯಾಟಿನ್ ಅಮೆರಿಕದ ಮೊದಲ ಧರ್ಮಗುರು ಎಂಬ ಖ್ಯಾತಿಗೆ ಪಾತ್ರರಾಗಿದ್ದ ಪೋಪ್ ಫ್ರಾನ್ಸಿಸ್ (88) ಅವರು ಏಪ್ರಿಲ್ 21ರಂದು ಕೊನೆಯುಸಿರೆಳೆದರು. ವಿನಮ್ರ ವ್ಯಕ್ತಿತ್ವ, ಬಡವರ ಬಗ್ಗೆ ಹೊಂದಿದ್ದ ಅಪಾರ ಕಾಳಜಿಯಿಂದ ಜಗತ್ತಿನಾದ್ಯಂತ ಅವರು ಮನ್ನಣೆಗಳಿಸಿದ್ದರು

ಪೋಪ್ ಫ್ರಾನ್ಸಿಸ್

ಕೆ.ಕಸ್ತೂರಿ ರಂಗನ್: ಇಸ್ರೊ ಮಾಜಿ ಅಧ್ಯಕ್ಷ , ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ(ಎನ್‌ಇಪಿ) ಕರಡು ಸಮಿತಿ ಅಧ್ಯಕ್ಷರಾಗಿದ್ದ ಕೃಷ್ಣಸ್ವಾಮಿ ಕಸ್ತೂರಿರಂಗನ್ (84) ಅವರು ಏಪ್ರಿಲ್ 25ರಂದು ಕೊನೆಯುಸಿರೆಳೆದರು. ಒಂದು ದಶಕದವರೆಗೆ ಭಾರತೀಯ ಅಂತರಿಕ್ಷ ಕಾರ್ಯಕ್ರಮದ ನೇತೃತ್ವ ವಹಿಸಿ, ಮುನ್ನಡೆಸಿದ್ದ ಅವರು ಅಂತರಿಕ್ಷ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲದೇ ಶಿಕ್ಷಣ, ಸಂಶೋಧನೆ, ಪರಿಸರ, ಸಂಸದೀಯ ಪ್ರಜಾಪ್ರಭುತ್ವ, ಆಡಳಿತ, ಆರ್ಥಿಕತೆ, ಸಂವಹನ ಸೇರಿ ವೈವಿಧ್ಯಮಯ ಕ್ಷೇತ್ರಗಳಿಗೆ ಕೊಡುಗೆ ನೀಡಿದ್ದರು. ರಾಜ್ಯಸಭೆಯ ಸದಸ್ಯರಾಗಿ, ಯೋಜನಾ ಆಯೋಗದ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದರು

ಫ್ರಾಂಕ್ ಕೆಪ್ಪಿಯೋ

ಎಂ.ಆರ್ ಶ್ರೀನಿವಾಸನ್: ದೇಶದ ಅಣು ಶಕ್ತಿ ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಎಂ.ಆರ್ ಶ್ರೀನಿವಾಸನ್ (95) ಅವರು ಮೇ 20ರಂದು ನಿಧನರಾದರು. ಅಣುಶಕ್ತಿ ಆಯೋಗದ (ಎಆರ್‌ಸಿ) ಅಧ್ಯಕ್ಷರಾಗಿ, ಅಣುಶಕ್ತಿ ಶಕ್ತಿ ವಿಭಾಗದ ಕಾರ್ಯದರ್ಶಿಯಾಗಿ ಕೊಡುಗೆ ನೀಡಿದ್ದ ಇವರಿಗೆ ಭಾರತೀಯ ಅಣು ಶಕ್ತಿ ನಿಗಮವನ್ನು (ಎನ್‌ಪಿಸಿಐಎಲ್) ಹುಟ್ಟುಹಾಕಿದ ಶ್ರೇಯ ಕೂಡ ಸಂದಿತ್ತು

ಎಂ.ಆರ್ ಶ್ರೀನಿವಾಸನ್

ವಾಲ್ಮೀಕ್ ಥಾಪರ್: ದೇಶದ ವನ್ಯಜೀವಿ ಸಂರಕ್ಷಕರಲ್ಲಿ ಪ್ರಮುಖರಾಗಿದ್ದ ವಾಲ್ಮೀಕ್ ಥಾಪರ್(73) ಅವರು ಮೇ 31ರಂದು ಕೊನೆ ಉಸಿರೆಳೆದರು. ಅವರು ಲೇಖಕರಾಗಿಯೂ ಚಿರಪರಿಚಿತರಾಗಿದ್ದರು

ವಿಜಯ್ ರೂಪಾನಿ: ಬಿಜೆಪಿ ಮುಖಂಡ, ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ(68) ಅವರು ಜೂನ್ 12ರಂದು ಏರ್ ಇಂಡಿಯಾ ವಿಮಾನ ದುರಂತದಲ್ಲಿ ಕೊನೆ ಉಸಿರೆಳೆದರು

ವಿ.ಎಸ್.ಅಚ್ಯುತಾನಂದನ್: ಕೇರಳದ ಮಾಜಿ ಮುಖ್ಯಮಂತ್ರಿ, ಸಿಪಿಎಂನ ಹಿರಿಯ ನಾಯಕ ವಿ.ಎಸ್. ಅಚ್ಯುತಾನಂದನ್ (101 ವರ್ಷ) ಅವರು ಜುಲೈ 21ರಂದು ನಿಧನರಾದರು

ಶಿಬು ಸೊರೇನ್: ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ, ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ರಾಜಕೀಯ ಪಕ್ಷದ ಸಂಸ್ಥಾಪಕ ಶಿಬು ಸೊರೇನ್ (81) ಅವರು ಆಗಸ್ಟ್ 4ರಂದು ನಿಧನ ಹೊಂದಿದರು

ಸತ್ಯಪಾಲ್ ಮಲಿಕ್: ಜಮ್ಮು ಮತ್ತು ಕಾಶ್ಮೀರ, ಗೋವಾ ಮತ್ತು ಮೇಘಾಲಯದ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲಿಕ್(79) ಆಗಸ್ಟ್ 5ರಂದು ನಿಧನ ಹೊಂದಿದರು.

ಫ್ರಾಂಕ್ ಕೆಪ್ಪಿಯೋ: ಮಾನವೀಯತೆ ಆಧಾರದಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡುವ ಮೂಲಕ ಜಗತ್ತಿನ ಅತ್ಯಂತ ಸಹೃದಯಿ ನ್ಯಾಯಾಧೀಶ ಎಂದೇ ಖ್ಯಾತರಾಗಿದ್ದ ಅಮೆರಿಕದ ರೋಡ್ ಐಲೆಂಡ್‌ನ ಮುನ್ಸಿಪಲ್ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಫ್ರಾಂಕ್ ಕ್ಯಾಪ್ರಿಯೊ (80) ಅವರು ಆಗಸ್ಟ್ 20ರಂದು ನಿಧನರಾದರು.

ಕೆ.ಕಸ್ತೂರಿ ರಂಗನ್

ಜುಬೀನ್ ಗರ್ಗ್: ಅಸ್ಸಾಮಿ ಖ್ಯಾತ ಗಾಯಕ ಜುಬೀನ್ ಗರ್ಗ್(52) ಸೆಪ್ಟೆಂಬರ್ 19ರಂದು ಮೃತಪಟ್ಟರು. ಕಾರ್ಯಕ್ರಮವೊಂದರ ನಿಮಿತ್ತ ಸಿಂಗಪುರಕ್ಕೆ ತೆರಳಿದ್ದ ಅವರು ಈಜಲು ತೆರಳಿದ್ದ ವೇಳೆ ಅನುಮಾನಾಸ್ಪದವಾಗಿ ಸಾವಿಗೀಡಾದರು. ಅಸ್ಸಾಮಿ, ಹಿಂದಿ, ಬಂಗಾಳಿ ಸೇರಿದಂತೆ ವಿವಿಧ ಭಾಷೆಗಳಲ್ಲಿ 38 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದ್ದ ಅವರು ಭಾ

ಭಾರ್ತಿ, ವಾರ್‌ಬರ್ಗ್‌ನಿಂದ ಹಾಯರ್ ಷೇರು ಖರೀದಿ

ನವದೆಹಲಿ (ಪಿಟಿಐ): ವಾಷಿಂಗ್ ಮಷಿನ್, ರೆಫ್ರಿಜರೇಟರ್ ಹಾಗೂ ಇತರ ಹಲವು ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುವ ಹಾಯರ್ ಇಂಡಿಯಾ ಕಂಪನಿಯ ಶೇಕಡ 49ರಷ್ಟು ಷೇರುಗಳನ್ನು ಖರೀದಿಸಲು ಭಾರ್ತಿ ಎಂಟರ್‌ಪ್ರೈಸಸ್ ಮತ್ತು ವಾರ್‌ಬರ್ಗ್ ಪಿಂಕಸ್ ಒಪ್ಪಿವೆ.

ಖರೀದಿಯ ನಂತರವೂ ಕಂಪನಿಯ ಆಡಳಿತದ ನಿಯಂತ್ರಣವು ಈಗಿನ ಚೀನಿ ಮಾಲೀಕರ ಕೈಯಲ್ಲೇ ಮುಂದುವರಿಯಲಿದೆ. ಅಂದಾಜು ₹17,955 ಕೋಟಿ ಮೊತ್ತಕ್ಕೆ ಈ ಖರೀದಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಈ ಖರೀದಿಯ ನಂತರದಲ್ಲಿ ಭಾರ್ತಿ ಮತ್ತು ವಾರ್‌ಬರ್ಗ್ ಪಿಂಕಸ್ ಜಂಟಿಯಾಗಿ ಹಾಯರ್ ಅಪ್ಲಯೆನ್ಸಸ್ ಇಂಡಿಯಾ ಲಿ. ಕಂಪನಿಯಲ್ಲಿ ಶೇಕಡ 49ರಷ್ಟು ಷೇರು ಹೊಂದಲಿವೆ. ಚೀನಾ ಮೂಲದ ಹಾಯರ್ ಸಮೂಹವು ಶೇ 49ರಷ್ಟು ಷೇರು ಹೊಂದಿರಲಿದೆ. ಇನ್ನುಳಿದ ಶೇ 2ರಷ್ಟು ಷೇರುಗಳು ಹಾಯರ್ ಇಂಡಿಯಾದ ಆಡಳಿತದ ಚುಕ್ಕಾಣಿ ಹಿಡಿದಿರುವ ತಂಡದ ಬಳಿ ಇರಲಿವೆ.

ಸಜ್ಜನ್ ಜಿಂದಾಲ್ ನೇತೃತ್ವದ ಜೆಎಸ್‌ಡಬ್ಲ್ಯೂ ಸಮೂಹ, ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕೂಡ ಈ ಖರೀದಿಗೆ ಆಸಕ್ತಿ ತೋರಿದ್ದವು.

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹1280 (1275)
ಸೂರ್ಯಕಾಂತಿ (ರಿಫೈನ್ಡ್)	₹1490 (1485)
ಪಾಮೋಲಿನ್	₹1250 (1245)

ಮೊಟ್ಟೆ ದರ
(ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹705	100 ಕ್ಕೆ	₹706
12 ಕ್ಕೆ	₹96		

ಎನ್.ಆರ್.ಪುರ ರಬ್ಬರ್
(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹179.50
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹162.50

ಮುಂಬೈ ಧಾರಣೆ (ಶೇ೦ಗಾ)
25-12-2025

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಪಾಮ್ ವಾರದ ಡೆಲಿವರಿ	1248 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,36,500 (1,35,500)
ಬೆಳ್ಳಿ ಕೆ.ಜಿಗೆ	2,21,300 (2,18,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

mathru devo bhava
8ನೇ ವರ್ಷದ ಪುಣ್ಯಸ್ಮರಣೆ

ಪೂಜ್ಯ ಮಾತೃಶ್ರೀ ಆರ್.ಕೆ. ಕೃಷ್ಣಮ್ಮ ನವರು
(ದಿ|| ಎಸ್.ಎ. ಲಕ್ಷ್ಮಣ್ ರವರ ಧರ್ಮಪತ್ನಿ)
ದಿನಾಂಕ: 26-12-2017
ನಿಮ್ಮ ನೆನಪಲಿ ದಿನವ ಕಳೆಯುತಾ
ನಿಮ್ಮ ಆದರ್ಶಗಳನ್ನು ಸ್ಮರಿಸುತಾ
ನಿಮ್ಮ ಶ್ರೀರಕ್ಷೆಯ ಬಲದಿಂದ
ಬೆಳೆಯುತಿಹೆವು ನಾವು
ನಿಮ್ಮ ನಾಮ ಸ್ಮರಣೆಯಿಂದ

ಚಿರಸ್ಮರಣೆ

ಎಮ್. ನಾಗಪ್ಪ
ಕ್ಲಾಸ್ 1, ಪಿ.ಡಬ್ಲ್ಯ್ಯೂ.ಡಿ. ಕಂಟ್ರಾಕ್ಟರ್
337, ಸದಾಶಿವನಗರ,
ಮರಣ: 26-12-1991
ಗೌರವಾದಾರಗಳೊಂದಿಗೆ
ಸ್ಮರಿಸುವ
ಕುಟುಂಬ ವರ್ಗದವರು.

ಓಲಾಗೆ ₹366 ಕೋಟಿ ಪಿಎಲ್‌ಐ

ನವದೆಹಲಿ (ಪಿಟಿಐ): ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಅಡಿ ಕೇಂದ್ರ ಬೃಹತ್ ಕೈಗಾರಿಕಾ ಸಚಿವಾಲಯವು ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಕಂಪನಿ ಓಲಾ ಎಲೆಕ್ಟ್ರಿಕ್‌ಗೆ ₹366.78 ಕೋಟಿ ಮಂಜೂರು ಮಾಡಿದೆ.

2024-25ರ ಆರ್ಥಿಕ ವರ್ಷದಲ್ಲಿ ಮಾರಾಟವಾದ ವಾಹನಗಳ ಮೌಲ್ಯವನ್ನು ನಿರ್ಧರಿಸಿ ಈ ಉತ್ತೇಜನ ನೀಡಲಾಗಿದೆ ಎಂದು ಓಲಾ ಎಲೆಕ್ಟ್ರಿಕ್ ಗುರುವಾರ ತಿಳಿಸಿದೆ.

ಪಿಎಲ್‌ಐ ಆಟೊ ಯೋಜನೆಯು ಕೇಂದ್ರ ಸರ್ಕಾರದ್ದು. ಇದು ದೇಶದಲ್ಲಿ ವಾಹನಗಳನ್ನು ತಯಾರಿಸುವ ಕಂಪನಿಗಳನ್ನು ಸದೃಢಗೊಳಿಸುವ ಗುರಿ ಹೊಂದಿದೆ. ಅಲ್ಲದೆ, ಸುಧಾರಿತ ವಾಹನೋದ್ಯಮ ತಂತ್ರಜ್ಞಾನಗಳನ್ನು ಪ್ರೋತ್ಸಾಹಿಸುವುದು, ವಾಹನ ಮತ್ತು ವಾಹನದ ಬಿಡಿಭಾಗಗಳ ತಯಾರಿಕೆಯಲ್ಲಿ ಭಾರತದ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

‘ಐಪಿಓ ಆಲೋಚನೆ ಸದ್ಯಕ್ಕಿಲ್ಲ’

ಟಿ.ವಿ, ವಾಶಿಂಗ್‌ಮಷಿನ್‌ಗೆ ಬಡ್ಡಿರಹಿತ ಮಾಸಿಕ ಇಎಂಐ ಸೌಲಭ್ಯ: ಸ್ಯಾಮ್‌ಸಂಗ್

ನವದೆಹಲಿ (ಪಿಟಿಐ): ‘ಭಾರತದಲ್ಲಿ ಸಾರ್ವಜನಿಕರಿಗೆ ಷೇರು ಮಾರಾಟ (ಐಪಿಒ) ಮಾಡುವ ಮೂಲಕ ಬಂಡವಾಳ ಸಂಗ್ರಹಿಸುವ ಆಲೋಚನೆ ಸದ್ಯಕ್ಕೆ ಇಲ್ಲ’ ಎಂದು ದಕ್ಷಿಣ ಕೊರಿಯಾ ಮೂಲದ ಎಲೆಕ್ಟ್ರಾನಿಕ್ಸ್ ಉಪಕರಣ ತಯಾರಿಕಾ ಕಂಪನಿ ಸ್ಯಾಮ್‌ಸಂಗ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಂಪನಿಯು ತನ್ನ ಉತ್ಪನ್ನಗಳಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆಯನ್ನು ವೇಗಗೊಳಿಸುವತ್ತ ಗಮನ ನೀಡುತ್ತಿದೆ. ಮಾರಾಟವನ್ನು ಹೆಚ್ಚಿಸಲು ಈಗ ಸ್ಮಾರ್ಟ್‌ಫೋನ್ ಖರೀದಿಸುವ ಗ್ರಾಹಕರಿಗೆ ಬಡ್ಡಿರಹಿತ ಮಾಸಿಕ ಇಎಂಐ ಸೌಲಭ್ಯ ನೀಡಲಾಗುತ್ತಿದೆ. ಇದನ್ನು ಟೆಲಿವಿಷನ್, ವಾಶಿಂಗ್ ಮಷಿನ್‌ನಂತಹ ಗೃಹೋಪಯೋಗಿ ಉಪಕರಣಗಳಿಗೂ ವಿಸ್ತರಿಸಲಾಗುತ್ತಿದೆ ಎಂದು ಕಂಪನಿಯ ನೈಋತ್ಯ ಏಷ್ಯಾದ ಅಧ್ಯಕ್ಷ ಮತ್ತು ಸಿಇಒ ಜೆ.ಬಿ.ಪಾರ್ಕ್ ಹೇಳಿದ್ದಾರೆ.

ಸ್ಯಾಮ್‌ಸಂಗ್‌ನ ಇಎಂಐ ಯೋಜನೆಯಿಂದ ಸ್ಮಾರ್ಟ್‌ಫೋನ್‌ಗಳ ಮಾರಾಟದಲ್ಲಿ ಶೇ 40ರಷ್ಟು ಹೆಚ್ಚಳವಾಗಿದ್ದು, ಉತ್ತರ ಭಾರತ ಮತ್ತು ಈಶಾನ್ಯ ಭಾರತದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಫೋನ್‌ಗಳು ಮಾರಾಟವಾಗಿವೆ.

ಭಾರತದಲ್ಲಿ ಕಂಪನಿಯು ತನ್ನ ಉತ್ಪನ್ನಗಳ ತಯಾರಿಕೆಯನ್ನು ಇನ್ನಷ್ಟು ವಿಸ್ತರಿಸಲು ಕಾರ್ಯಕ್ರಮ ರೂಪಿಸುತ್ತಿದೆ.

ಮುಖ್ಯಾಂಶಗಳು

- ನೊಯ್ಡಾದಲ್ಲಿದೆ ಸ್ಯಾಮ್‌ಸಂಗ್‌ನ ಅತಿದೊಡ್ಡ ಸ್ಮಾರ್ಟ್‌ಫೋನ್ ಘಟಕ
- ಎ.ಐ ಆಧಾರಿತ ರೆಫ್ರಿಜರೇಟರ್‌ನಲ್ಲಿ ಗೂಗಲ್ ಜೆಮಿನಿ
- ಉತ್ಪನ್ನಗಳಲ್ಲಿ ಎ.ಐ ಅಳವಡಿಕೆಗೆ ವೇಗ

ಜೊತೆಗೆ ಭಾರತದಲ್ಲಿ ಮೊಬೈಲ್ ಫೋನ್‌ಗಳ ತಯಾರಿಕೆಗೆ ನೀಡುವ ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಗೆ ಅರ್ಜಿ ಸಲ್ಲಿಸಲಾಗಿದೆ ಎಂದಿದ್ದಾರೆ.

ಸ್ಯಾಮ್‌ಸಂಗ್ ಕಂಪನಿಯು ಉತ್ತರ ಪ್ರದೇಶದ ನೊಯ್ಡಾದಲ್ಲಿ ಜಗತ್ತಿನಲ್ಲಿ ಅತಿದೊಡ್ಡ ಸ್ಮಾರ್ಟ್‌ಫೋನ್ ತಯಾರಿಕಾ ಘಟಕವನ್ನು ಹೊಂದಿದೆ.

ಮೇಲ್ದರ್ಜೆಗೇರಿಸಿದ ಎ.ಐ ಆಧಾರಿತ ರೆಫ್ರಿಜರೇಟರ್‌ನಲ್ಲಿ ಗೂಗಲ್ ಜೆಮಿನಿಯನ್ನು ಇದೇ ಮೊದಲ ಬಾರಿಗೆ ಅಳವಡಿಸಲಾಗಿದೆ.

ದಕ್ಷಿಣ ಕೊರಿಯಾದ ಪ್ರಮುಖ ಕಂಪನಿಗಳಾದ ಹುಂಡೈ ಮೋಟರ್ ಇಂಡಿಯಾ ಮತ್ತು ಎಲ್‌ಜಿ ಎಲೆಕ್ಟ್ರಾನಿಕ್ಸ್, ಸ್ಥಳೀಯ ಮಾರುಕಟ್ಟೆಯಲ್ಲಿ ತಮ್ಮ ಮಾರಾಟವನ್ನು ಸದೃಢಗೊಳಿಸಲು ಬಂಡವಾಳ ಸಂಗ್ರಹ ಮಾಡಿವೆ. ಆದರೆ ಸ್ಯಾಮ್‌ಸಂಗ್ ಬಂಡವಾಳ ಸಂಗ್ರಹಕ್ಕಿಂತ ಆಂತರಿಕ ಬೆಳವಣಿಗೆಗೆ ಆದ್ಯತೆ ನೀಡುತ್ತಿದೆ.

ಜನವರಿ 4ರಂದು ಲಾಸ್ ವೇಗಾಸ್‌ನಲ್ಲಿ ನಡೆಯಲಿರುವ ವಿಶ್ವದ ಅತಿದೊಡ್ಡ ಗ್ರಾಹಕ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಪ್ರದರ್ಶನವಾದ ಸಿಇಎಸ್ 2026ರಲ್ಲಿನ ‘ದಿ ಫಸ್ಟ್ ಲುಕ್’ ಕಾರ್ಯಕ್ರಮದಲ್ಲಿ ಸ್ಯಾಮ್‌ಸಂಗ್ ಟಿವಿ ತಂತ್ರಜ್ಞಾನದಲ್ಲಿನ ನಾವೀನ್ಯಗಳನ್ನು ಪ್ರದರ್ಶನ ಮಾಡಲಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ 1 ಲಕ್ಷ ಪೆಟ್ರೋಲ್ ಬಂಕ್

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ನಿಯಂತ್ರಣದಲ್ಲಿ ಶೇ 90ರಷ್ಟು ಬಂಕ್‌ಗಳು

ನವದೆಹಲಿ (ಪಿಟಿಐ): ದೇಶದಲ್ಲಿ ಪೆಟ್ರೋಲ್ ಬಂಕ್‌ಗಳ ಸಂಖ್ಯೆ 1 ಲಕ್ಷ ದಾಟಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಅಂಕಿ-ಅಂಶಗಳು ಹೇಳುತ್ತಿವೆ.

2015ರಲ್ಲಿ ದೇಶದಲ್ಲಿ 50,451 ಪೆಟ್ರೋಲ್ ಬಂಕ್‌ಗಳು ಇದ್ದವು. ಅದು ಈ ನವೆಂಬರ್ ವೇಳೆಗೆ 1,00,266ಕ್ಕೆ ಹೆಚ್ಚಳವಾಗಿದೆ. ಅಮೆರಿಕ ಮತ್ತು ಚೀನಾ ಬಳಿಕ ಭಾರತದಲ್ಲಿ ಅತಿ ಹೆಚ್ಚು ಪೆಟ್ರೋಲ್ ಬಂಕ್‌ಗಳು ಇವೆ.

ಪೆಟ್ರೋಲ್ ಬಂಕ್‌ಗಳ ಪೈಕಿ ಶೇ 90ರಷ್ಟನ್ನು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನಿರ್ವಹಿಸುತ್ತಿವೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) 41,664 ಬಂಕ್‌ಗಳನ್ನು ಹೊಂದಿದೆ. ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) 24,605 ಮತ್ತು ಎಚ್‌ಪಿಸಿಎಲ್ 24,418 ಬಂಕ್‌ಗಳನ್ನು ಹೊಂದಿದೆ.

2003-04ರಲ್ಲಿ ಖಾಸಗಿ ವಲಯವು 27 ಬಂಕ್‌ಗಳೊಂದಿಗೆ ಪೆಟ್ರೋಲ್ ಬಂಕ್ ವ್ಯವಹಾರವನ್ನು ಆರಂಭಿಸಿತ್ತು. 2015ರಲ್ಲಿ ಖಾಸಗಿ ವಲಯದ ಪೆಟ್ರೋಲ್ ಬಂಕ್‌ಗಳ ಪ್ರಮಾಣ ಶೇ 5.9ರಷ್ಟಿತ್ತು. ಅದು ಪ್ರಸ್ತುತ ಶೇ 9.3ಕ್ಕೇರಿದೆ. ಖಾಸಗಿ ವಲಯದ ನಯಾರಾ ಎನರ್ಜಿ ಲಿಮಿಟೆಡ್ 6,921, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ 2,114 ಮತ್ತು ಬಿ.ಪಿ ಶೆಲ್ 346 ಬಂಕ್‌ಗಳನ್ನು ಹೊಂದಿದೆ.

2024ರ ವರದಿ ಪ್ರಕಾರ, ಅಮೆರಿಕದಲ್ಲಿ 1,96,643 ಮತ್ತು ಚೀನಾದಲ್ಲಿ 1,15,228 ಪೆಟ್ರೋಲ್ ಬಂಕ್‌ಗಳಿವೆ.

ಗ್ರಾಮೀಣ ಪ್ರದೇಶಗಳಲ್ಲಿನ ಪೆಟ್ರೋಲ್ ಬಂಕ್‌ಗಳ ಪ್ರಮಾಣ 2015ರಲ್ಲಿ ಶೇ 22ರಷ್ಟಿತ್ತು. ಅದು ಈಗ ಶೇ 29ಕ್ಕೇರಿದೆ. ಪೆಟ್ರೋಲ್ ಬಂಕ್‌ಗಳು ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಜೊತೆಗೆ ಇದೀಗ ಸಿಎನ್‌ಜಿಯಂತಹ ಪರ್ಯಾಯ ಇಂಧನವನ್ನು ಕೂಡ ಮಾರಾಟ ಮಾಡುತ್ತಿವೆ. ಅಲ್ಲದೆ ಇ.ವಿ ಚಾರ್ಜಿಂಗ್ ಕೇಂದ್ರಗಳನ್ನೂ ಹೊಂದಿವೆ.

ಇಂಧನ ಬೆಲೆಯ ಮೇಲೆ ಸರ್ಕಾರದ ಪರೋಕ್ಷ ನಿಯಂತ್ರಣದಿಂದ ಇಂಧನ ವಹಿವಾಟಿನಲ್ಲಿ ಖಾಸಗಿ ಪಾಲುದಾರಿಕೆ ಕಡಿಮೆ ಇದೆ ಎಂದು ಕೈಗಾರಿಕಾ ವಲಯದ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ನವಿ ಮುಂಬೈಗೆ ಬೆಂಗಳೂರಿನಿಂದ ವಿಮಾನ

ಬೆಂಗಳೂರು: ದೇಶದ ವಿಮಾನಯಾನ ಕಂಪನಿ ಏರ್ ಇಂಡಿಯಾ ಎಕ್ಸ್‌ಪ್ರೆಸ್, ಬೆಂಗಳೂರಿನಿಂದ ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಎನ್‌ಎಂಐಎ) ಗುರುವಾರದಿಂದ ಪ್ರತಿನಿತ್ಯ ನೇರ ವಿಮಾನ ಹಾರಾಟ ಆರಂಭಿಸಿದೆ. ಜೊತೆಗೆ ಜನವರಿ 1ರಿಂದ ಹೆಚ್ಚುವರಿ ವಿಮಾನ ಹಾರಾಟ ಇರಲಿದೆ.

ಪ್ರತಿನಿತ್ಯ ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಡುವ ವಿಮಾನವು ನವಿ ಮುಂಬೈಗೆ 8.10ಕ್ಕೆ ತಲುಪಲಿದೆ. ನವಿ ಮುಂಬೈನಿಂದ 8.55ಕ್ಕೆ ಹೊರಟು, ಬೆಂಗಳೂರಿಗೆ 11.05ಕ್ಕೆ ತಲುಪಲಿದೆ.

ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಗೆ ವಾರದ ಐದು ದಿನ ವಿಮಾನ ಸೇವೆ ಕಲ್ಪಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಜನವರಿ 1ರಿಂದ ಹೆಚ್ಚುವರಿ ವಿಮಾನವೊಂದು ಬೆಂಗಳೂರಿನಿಂದ ಸಂಜೆ 4.55ಕ್ಕೆ ಹೊರಟು ನವಿ ಮುಂಬೈಗೆ 6.55ಕ್ಕೆ ತಲುಪಲಿದೆ. ನವಿ ಮುಂಬೈನಿಂದ 7.35ಕ್ಕೆ ಹೊರಟು 9.35ಕ್ಕೆ ಬೆಂಗಳೂರಿಗೆ ತಲುಪಲಿದೆ.

ಸೆಮಿಕಂಡಕ್ಟರ್ ರಫ್ತು: ಶಾ

ಭೋಪಾಲ್ (ಪಿಟಿಐ): ಭಾರತವು ಸೆಮಿಕಂಡಕ್ಟರ್ ಉತ್ಪಾದನಾ ವಲಯವನ್ನು ಪ್ರವೇಶಿಸಿದ್ದುತಡವಾಗಿದೆಯಾದರೂ, ಅದು ಗಟ್ಟಿಯಾಗಿ ಅಲ್ಲಿ ಪಾದ ಊರಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ದೇಶವು ಸೆಮಿಕಂಡಕ್ಟರ್ ಉತ್ಪಾದನೆಯಲ್ಲಿ ಸ್ವಾವಲಂಬಿ ಆಗಲಿದೆ, ಮುಂದೆ ಅದನ್ನು ರಫ್ತು ಮಾಡುವ ಹಂತವನ್ನೂ ತಲುಪಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ನಡೆದ ಅಭ್ಯುದಯ ಮಧ್ಯಪ್ರದೇಶ ಅಭಿವೃದ್ಧಿ ಶೃಂಗದಲ್ಲಿ ಮಾತನಾಡಿದ ಅವರು ಈ ಮಾತು ಹೇಳಿದ್ದಾರೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನದ ಸ್ಮರಣಾರ್ಥ ₹2 ಲಕ್ಷ ಕೋಟಿ ಮೊತ್ತದ ಕೈಗಾರಿಕಾ ಯೋಜನೆಗಳಿಗೆ ಶಂಕುಸ್ಥಾಪನೆ ನಡೆಸಿದ್ದಾರೆ.

‘ಡಿಜಿಟಲ್ ವಹಿವಾಟು ಹಾಗೂ ಫಿನ್‌ಟೆಕ್ ವಲಯಗಳಲ್ಲಿಯೂ ಭಾರತವು ಭಾರಿ ಮುನ್ನಡೆ ಸಾಧಿಸಿದೆ. 2024-25ರಲ್ಲಿ ಜಗತ್ತಿನ ಶೇಕಡ 46ರಷ್ಟು ಡಿಜಿಟಲ್ ವಹಿವಾಟುಗಳು ಭಾರತದಲ್ಲಿ ನಡೆದಿವೆ’ ಎಂದು ಶಾ ಮೆಚ್ಚುಗೆ ವ್ಯಕ್ತಪಡಿಸಿದರು.

‘ಚೀನಾದಿಂದ ಪಾಕ್‌ಗೆ 20 ಯುದ್ಧ ವಿಮಾನ’

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾ ಕಳೆದ ಐದು ವರ್ಷಗಳಲ್ಲಿ ಪಾಕಿಸ್ತಾನಕ್ಕೆ ನಾಲ್ಕನೇ ತಲೆಮಾರಿನ 20 ‘ಜೆ-10ಸಿ’ ಯುದ್ಧ ವಿಮಾನಗಳನ್ನು ಪೂರೈಸಿದೆ. ಉಭಯ ದೇಶಗಳ ನಡುವಿನ ಒಪ್ಪಂದದ ಪ್ರಕಾರ ಮುಂದಿನ ದಿನಗಳಲ್ಲಿ ಇದೇ ರೀತಿಯ ಇನ್ನೂ 16 ಯುದ್ಧ ವಿಮಾನಗಳನ್ನು ಪೂರೈಸಲಿದೆ ಎಂದು ಪೆಂಟಗನ್ ವರದಿ ತಿಳಿಸಿದೆ.

‘ಚೀನಾ ಒಳಗೊಂಡ ವಿವಿಧ ದೇಶಗಳ ಮಿಲಿಟರಿ ಮತ್ತು ಭದ್ರತಾ ಬೆಳವಣಿಗೆಗಳ’ ಕುರಿತ ವರದಿಯನ್ನು ಪೆಂಟಗನ್ ಈಚೆಗೆ ಬಿಡುಗಡೆ ಮಾಡಿದೆ. ಚೀನಾ ಕಳೆದ ಐದು ವರ್ಷಗಳಲ್ಲಿ ಈ ಯುದ್ಧ ವಿಮಾನಗಳನ್ನು ಪಾಕಿಸ್ತಾನಕ್ಕೆ ಮಾತ್ರ ರಫ್ತು ಮಾಡಿದೆ ಎಂದು ವರದಿ ಹೇಳಿದೆ.

ಚೀನಾದ ಸೇನೆ ಪಿಎಲ್‌ಎ (ಪೀಪಲ್ಸ್ ಲಿಬರೇಷನ್ ಆರ್ಮಿ) ತನ್ನ ವಾಯು ಮತ್ತು ನೌಕಾಪಡೆಗಳ ಬಲ ವೃದ್ಧಿಸಲು ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಸೇರಿದಂತೆ ಏಷ್ಯಾ ಹಾಗೂ ಆಫ್ರಿಕಾದ ಇನ್ನಷ್ಟು ದೇಶಗಳಲ್ಲಿ ತನ್ನ ನೆಲೆಗಳನ್ನು ಸ್ಥಾಪಿಸಲು ಚಿಂತನೆ ನಡೆಸುತ್ತಿದೆ ಎಂದಿದೆ.

‘ಅಂಗೋಲಾ, ಬರ್ಮಾ, ಕ್ಯೂಬಾ, ಈಕ್ವಟೋರಿಯಲ್ ಗಿನಿಯಾ, ಇಂಡೋನೇಷ್ಯಾ, ಕೆನ್ಯಾ, ಮೊಜಾಂಬಿಕ್, ನಮೀಬಿಯಾ, ನೈಜೀರಿಯಾ, ಪಪುವಾ ನ್ಯೂಗಿನಿ, ಸೀಷೆಲ್ಸ್, ಸೊಲೊಮನ್ ಐಲ್ಯಾಂಡ್ಸ್, ಶ್ರೀಲಂಕಾ, ತಜಿಕಿಸ್ತಾನ, ಥಾಯ್ಲೆಂಡ್, ತಾಂಜಾನಿಯಾ, ಯುಎಇ ಮತ್ತು ವನುವಾಟು ದೇಶಗಳಲ್ಲಿ ಸೇನಾ ನೆಲೆ ಸ್ಥಾಪಿಸಲು ಯೋಜನೆ ಹಾಕಿಕೊಂಡಿದೆ’ ಎಂಬ ಅಂಶ ವರದಿಯಲ್ಲಿದೆ.

ಚೀನಾದಿಂದ 25 ‘ಜೆ-10ಸಿ’ ಯುದ್ಧ ವಿಮಾನಗಳನ್ನು ಖರೀದಿಸಲಾಗುವುದು ಎಂದು ಪಾಕಿಸ್ತಾನವು 2021ರ ಡಿಸೆಂಬರ್‌ನಲ್ಲಿ ಹೇಳಿತ್ತು. ಭಾರತವು ಫ್ರಾನ್ಸ್‌ನಿಂದ 36 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸುವ ಒಪ್ಪಂದಕ್ಕೆ ಸಹಿ ಹಾಕಿದ ಐದು ವರ್ಷಗಳ ಬಳಿಕ ಪಾಕ್ ಈ ನಿರ್ಧಾರ ತೆಗೆದುಕೊಂಡಿತ್ತು. ಭಾರತದ ಜತೆ ಈಚೆಗೆ ನಡೆದ ಸಂಘರ್ಷದ ವೇಳೆ ಪಾಕಿಸ್ತಾನವು ‘ಜೆ-10ಸಿ’ ಯುದ್ಧವಿಮಾನಗಳನ್ನು ಬಳಸಿತ್ತು.

‘ಉಸ್ಮಾನ್ ಹಾದಿ ಹತ್ಯೆ: ಯೂನಸ್ ಸರ್ಕಾರದ ಕೆಲವರಿಂದ ಸಂಚು’

ಢಾಕಾ (ಪಿಟಿಐ): ‘ಬಾಂಗ್ಲಾದೇಶದ ಸಾರ್ವತ್ರಿಕ ಚುನಾವಣೆಯ ದಿಕ್ಕು ತಪ್ಪಿಸುವ ಉದ್ದೇಶದಿಂದ ‘ಇನ್‌ಕ್ವಿಲಾಬ್ ಮಂಚ್’ ಸಂಘಟನೆಯ ನಾಯಕ ಶರೀಫ್ ಉಸ್ಮಾನ್ ಹಾದಿ ಅವರ ಹತ್ಯೆಗೆ ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರದ ಒಂದು ಗುಂಪು ಸಂಚು ರೂಪಿಸಿದೆ’ ಎಂದು ಹಾದಿ ಸಹೋದರ ಒಮರ್ ಹಾದಿ ಆರೋಪಿಸಿದ್ದಾರೆ

ಚಿಟಿಕೆ ಸುದ್ದಿ

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಮತ್ತು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ —ಪಿಟಿಐ ಚಿತ್ರ

ಸಂತಾಲಿ ಭಾಷೆಯಲ್ಲಿ ಭಾರತ ಸಂವಿಧಾನ

ನವದೆಹಲಿ (ಪಿಟಿಐ): ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮ ವೊಂದರಲ್ಲಿ ರಾಷ್ಟ್ರ ಪತಿ ದ್ರೌಪದಿ ಮುರ್ಮು ಅವರು ಸಂತಾಲಿ ಭಾಷೆಯಲ್ಲಿ ಭಾರತ ಸಂವಿಧಾನವನ್ನು ಗುರುವಾರ ಬಿಡುಗಡೆ ಮಾಡಿದರು.

'ಭಾರತೀಯ ಸಂವಿಧಾನವು ಸಂತಾಲಿ ಭಾಷೆಯಲ್ಲಿ ಲಭ್ಯವಿರುವುದು ಸಂತಾಲಿ ಜನರಿಗೆ ಹೆಮ್ಮೆ ಮತ್ತು ಸಂತೋಷದ ವಿಷಯವಾಗಿದೆ. ಇದನ್ನು ಒಲ್ ಚಿಕಿ ಲಿಪಿಯಲ್ಲಿ ಬರೆಯಲಾಗಿದೆ. ಅವರ ಭಾಷೆಯಲ್ಲಿ ಸಂವಿಧಾನವನ್ನು ಓದಲು ಮತ್ತು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ' ಎಂದು ದ್ರೌಪದಿ ಮುರ್ಮು ಅವರು ಹೇಳಿದರು.

ಒಲ್ ಚಿಕಿ ಲಿಪಿಯ ಶತಮಾನೋತ್ಸವದ ಸಂದರ್ಭದಲ್ಲಿ ಸಂವಿಧಾನವನ್ನು ಈ ಲಿಪಿಯಲ್ಲಿ ಹೊರತಂದಿರುವುದಕ್ಕೆ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರನ್ನು ಮುರ್ಮು ಶ್ಲಾಘಿಸಿದರು.

ಮತ್ತೆ ಎಟಿಎಸ್ ವಶಕ್ಕೆ ಜುಬೇರ್

ಪುಣೆ (ಪಿಟಿಐ): ಅಲ್‌ಕೈದಾ ಜತೆ ಸಂಪರ್ಕ ಹೊಂದಿದ ಹಾಗೂ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಶಂಕೆಯ ಮೇಲೆ ಎರಡು ತಿಂಗಳ ಹಿಂದೆ ಬಂಧಿಸ ಲ್ಪಟ್ಟಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಜುಬೇರ್ ಹಂಗರ್ಗೇಕರ್ ಅವರನ್ನು ಮಹಾರಾಷ್ಟ್ರ ಎಟಿಎಸ್ ಮತ್ತೆ ತನ್ನ ವಶಕ್ಕೆ ಪಡೆದುಕೊಂಡಿದೆ.

ನ್ಯಾಯಾಂಗ ಬಂಧನಲ್ಲಿದ್ದ ಜುಬೇರ್ ಅವರನ್ನು ಯುಎಪಿಎ ಅಡಿ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಲಯವು ಎಟಿಎಸ್ ವಶಕ್ಕೆ ನೀಡಿದೆ.

ಕಚ್ಚಾ ಬಾಂಬ್ ಸ್ಫೋಟ ಬಾಲಕನಿಗೆ ಗಾಯ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಸಂತಿಯಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡವೊಂದರಲ್ಲಿ ಕಚ್ಚಾ ಬಾಂಬ್ ಸ್ಫೋಟಗೊಂಡಿದ್ದು, ಏಳು ವರ್ಷದ ಬಾಲಕನಿಗೆ ಗಂಭೀರ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಾಸಗಿ ಬಸ್‌ಗಳಿಗಿರುವ ಸುರಕ್ಷತಾ ಮಾರ್ಗಸೂಚಿ ಪಾಲನೆ ಆಗದ್ದಕ್ಕೆ ಹೊಣೆ ಯಾರು?

• ಸರ್ಕಾರ • ಅಧಿಕಾರಿಗಳು • ಬಸ್ ಮಾಲೀಕರು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'ದೇಶ ಒತ್ತೆ ಇರಿಸಿಕೊಂಡಿದ್ದ ಕುಟುಂಬ'

ನೆಹರೂ- ಗಾಂಧಿ ಪರಿವಾರದ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: 'ಒಂದು ಕುಟುಂಬವು ದೇಶವನ್ನು ಹಲವು ವರ್ಷಗಳ ಕಾಲ ಒತ್ತೆಯಾಗಿ ಇರಿಸಿಕೊಂಡಿತ್ತು' ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ನೆಹರೂ ಮತ್ತು ಗಾಂಧಿ ಕುಟುಂಬದ ವಿರುದ್ಧ ಗುರುವಾರ ತೀವ್ರ ವಾಗ್ದಾಳಿ ನಡೆಸಿದರು.

'ಬಿಜೆಪಿ ಸರ್ಕಾರವು ದೇಶವನ್ನು ಅದರಿಂದ ಮುಕ್ತಗೊಳಿಸಿತು' ಎಂದು ಅವರು ಹೇಳಿದರು.

ಮಾಜಿ ಪ್ರಧಾನಿ, ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ಜೀವನ ಮತ್ತು ಆದರ್ಶಗಳನ್ನು ಪ್ರಚುರಪಡಿಸಲು ಮೀಸಲಾಗಿರುವ 'ರಾಷ್ಟ್ರೀಯ ಪ್ರೇರಣಾ ಸ್ಥಳ' ಮತ್ತು ರಾಷ್ಟ್ರೀಯ ಸ್ಮಾರಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಂಶ ಪಾರಂಪರ್ಯ ರಾಜಕೀಯವು ವಿಶಿಷ್ಟ ಸ್ವರೂಪವನ್ನು ಹೊಂದಿದೆ. ಅದು ಅಭದ್ರತೆಯಿಂದ ಸುತ್ತುವರಿದಿರುವ ಕಾರಣಕ್ಕೆ ಇತರರನ್ನು ಕೀಳಾಗಿ ಕಾಣಲು ಪ್ರಯತ್ನಿಸುತ್ತದೆ. ಅದರ ಈ ಪ್ರವೃತ್ತಿಯು ದೇಶದಲ್ಲಿ ರಾಜಕೀಯ ಅಸ್ಪೃಶ್ಯತೆಗೆ ಕಾರಣವಾಯಿತು' ಎಂದು ಅವರು ವಿವರಿಸಿದರು.

'ಬಿಜೆಪಿಯನ್ನು ಅಸ್ಪೃಶ್ಯನಂತೆ ಕಂಡಿದೆ': 'ಕಾಂಗ್ರೆಸ್ ಮೊದಲಿನಿಂದಲೂ ಬಿಜೆಪಿಯನ್ನು ಅಸ್ಪೃಶ್ಯನಂತೆ ನೋಡುತ್ತಿದೆ. ಆದರೆ, ನಾವು ಎಲ್ಲರಿಗೂ ಸಮಾನ ಗೌರವ ನೀಡುತ್ತಿದ್ದೇವೆ' ಎಂದು ಮೋದಿ ತಿಳಿಸಿದರು.

'ದೇಶದಲ್ಲಿ ರಸ್ತೆಗಳಿರಲಿ, ಪ್ರತಿಮೆಗಳಿರಲಿ ಒಂದೇ ಕುಟುಂಬದ ಸದಸ್ಯರ ಹೆಸರುಗಳನ್ನು ಹೊಂದಿದ್ದವು. ಸ್ಥಳಗಳೂ ಒಂದೇ ಕುಟುಂಬದವರ ಹೆಸರಿನಿಂದ ಕರೆಯಲ್ಪಡುತ್ತಿದ್ದವು. ಆದರೆ, ಬಿಜೆಪಿಯು ದೇಶವನ್ನು ಒಂದು ಕುಟುಂಬ ಕೇಂದ್ರಿತ ರಾಜಕೀಯದಿಂದ ಹೊರತಂದಿತು' ಎಂದು ಅವರು ಹೇಳಿದರು.

'ಅಂಬೇಡ್ಕರ್‌ಗೆ ದೊರೆಯದ ಗೌರವ': ಗಾಂಧಿ ಕುಟುಂಬವನ್ನು 'ರಾಜಮನೆತನ' ಎಂದು ಕರೆದ ಮೋದಿ ಅವರು, ಈ ಪರಿವಾರದವರು ದಲಿತ ನಾಯಕ ಬಿ.ಆರ್.ಅಂಬೇಡ್ಕರ್ ಅವರ ಸಾಧನೆಗಳ ಬಗ್ಗೆ ಎಂದಿಗೂ ಪ್ರಸ್ತಾಪಿಸಿಲ್ಲ. ಅದರಿಂದ ಎಲ್ಲಿ ತಮ್ಮ ಪ್ರಾಮುಖ್ಯ ಕಡಿಮೆ ಆಗುತ್ತದೆಯೊ ಎಂಬುದು ಅವರ ಆತಂಕ. ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ಅಂಬೇಡ್ಕರ್ ಅವರಿಗೆ ಅರ್ಹವಾದ ಗೌರವವನ್ನು ಎಂದಿಗೂ ನೀಡಲಿಲ್ಲ ಎಂದು ಅವರು ಆರೋಪಿಸಿದರು.

'ನಮಗೆ ಹೆಮ್ಮೆಯಿದೆ': 'ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನ-ಮಾನದ ಹೆಸರಿನಲ್ಲಿ ಇದ್ದ ಗೋಡೆಯನ್ನು ಕೆಡವಲು ಅವಕಾಶ ಸಿಕ್ಕಿದ್ದಕ್ಕೆ ನಮಗೆ ಹೆಮ್ಮೆಯಿದೆ' ಎಂದು ಮೋದಿ ಇದೇ ವೇಳೆ ಹೇಳಿದರು.

'ಶ್ಯಾಮ ಪ್ರಸಾದ್ ಮುಖರ್ಜಿ ಅವರು ದೇಶವು ಎರಡು ಕಾನೂನುಗಳು ಮತ್ತು ಎರಡು ಸಂವಿಧಾನಗಳನ್ನು ಹೊಂದಲು ಸಾಧ್ಯವಿಲ್ಲ ಎಂದಿದ್ದರು' ಎಂದು ಅವರು ಸ್ಮರಿಸಿದರು.

ಲಖನೌದಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಪ್ರೇರಣಾ ಸ್ಥಳ ಉದ್ಘಾಟಿಸಿ, ಅಟಲ್ ಬಿಹಾರಿ ವಾಜಪೇಯಿ ಅವರ ಪ್ರತಿಮೆಗೆ ಪುಷ್ಪ ಅರ್ಪಿಸಿ ನಮಿಸಿದರು. ರಕ್ಷಣಾ ಸಚಿವ ರಾಜನಾಥ ಸಿಂಗ್, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಇತರರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಪ್ರೇರಣಾ ಸ್ಥಳದ ಕುರಿತು

ಪ್ರೇರಣಾ ಸ್ಥಳದ ಆವರಣ 65 ಎಕರೆ ಪ್ರದೇಶದ ವ್ಯಾಪ್ತಿಯಲ್ಲಿದ್ದು, ₹230 ಕೋಟಿ ವೆಚ್ಚದಲ್ಲಿ ಅದನ್ನು ಅಭಿವೃದ್ಧಿಪಡಿಸಲಾಗಿದೆ. ಇಲ್ಲಿ 98,000 ಚದರ ಅಡಿ ವಿಸ್ತೀರ್ಣದಲ್ಲಿ, ಕಮಲದ ಆಕಾರದ ವಿನ್ಯಾಸದಲ್ಲಿ ಅತ್ಯಾಧುನಿಕ ವಸ್ತು ಸಂಗ್ರಹಾಲಯ ನಿರ್ಮಿಸಲಾಗಿದೆ.

ವಾಜಪೇಯಿ ಅವರ ಜತೆಗೆ ಶ್ಯಾಮ ಪ್ರಸಾದ್ ಮುಖರ್ಜಿ, ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ 65 ಅಡಿ ಎತ್ತರದ ಕಂಚಿನ ಪ್ರತಿಮೆ ಗಳನ್ನು ನಿರ್ಮಿಸಲಾಗಿದೆ. ದೇಶಕ್ಕೆ ಕೊಡುಗೆ ನೀಡಿದ ನಾಯಕರ ಮಾಹಿತಿಯನ್ನು ಸ್ಮಾರಕದಲ್ಲಿ ಭಿತ್ತರಿಸಲಾಗಿದೆ.

ವಾಜಪೇಯಿ ಅವರ 101ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಈ ಸ್ಮಾರಕ ಸಂಕೀರ್ಣವನ್ನು ಉದ್ಘಾಟಿಸಲಾಯಿತು. ಮೋದಿ ಅವರ ಜತೆಗೆ ರಕ್ಷಣಾ ಸಚಿವ ರಾಜನಾಥ ಸಿಂಗ್, ರಾಜ್ಯಪಾಲರಾದ ಆನಂದಿಬೆನ್ ಪಟೇಲ್, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪಾಲ್ಗೊಂಡಿದ್ದರು.

ಅಟಲ್ ಕ್ಯಾಂಟೀನ್ ₹5ಕ್ಕೆ ಊಟ

ನವದೆಹಲಿ : ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ದೆಹಲಿ ಸರ್ಕಾರ ಗುರುವಾರ 45 'ಅಟಲ್ ಕ್ಯಾಂಟೀನ್'ಗಳಿಗೆ ಚಾಲನೆ ನೀಡಿದೆ. ಈ ಕ್ಯಾಂಟೀನ್‌ಗಳಲ್ಲಿ ನಿತ್ಯ ₹5ಕ್ಕೆ ಪೌಷ್ಟಿಕ ಆಹಾರ ದೊರೆಯಲಿದೆ ಎಂದು ಸರ್ಕಾರ ಹೇಳಿದೆ.

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಕೇಂದ್ರ ಇಂಧನ ಮತ್ತು ವಸತಿ ಸಚಿವ ಮನೋಹರ್ ಲಾಲ್ ಖಟ್ಟರ್ ಅವರು ನೆಹರೂ ನಗರದ 'ಅಪ್ನಾ ಬಜಾರ್' ಬಳಿ 'ಅಟಲ್ ಕ್ಯಾಂಟೀನ್'ಗೆ ಚಾಲನೆ ನೀಡಿದರು. ಇದೇ ವೇಳೆ ವರ್ಚುವಲ್ ಆಗಿ 44 ಕ್ಯಾಂಟೀನ್ ಗಳನ್ನು ಉದ್ಘಾಟಿಸಲಾಯಿತು.

'ಒಟ್ಟು 100 ಅಟಲ್ ಕ್ಯಾಂಟೀನ್‌ಗಳನ್ನು ಆರಂಭಿಸುವ ಯೋಜನೆಯನ್ನು ಸರ್ಕಾರ ಹೊಂದಿದೆ. ಅದರ ಭಾಗವಾಗಿ 45 ಕ್ಯಾಂಟೀನ್‌ಗಳಿಗೆ ಗುರುವಾರ ಚಾಲನೆ ನೀಡಲಾಗಿದೆ. ಉಳಿದ 55 ಕ್ಯಾಂಟೀನ್‌ಗಳು ಮುಂದಿನ 15ರಿಂದ 20 ದಿನಗಳಲ್ಲಿ ಆರಂಭ ವಾಗಲಿವೆ' ಎಂದು ರೇಖಾ ಗುಪ್ತಾ ಮಾಹಿತಿ ನೀಡಿದರು.

ಸೆಂಗರ್ ಶಿಕ್ಷೆ ಅಮಾನತು 'ಸುಪ್ರೀಂ'ನಲ್ಲಿ ಮೇಲ್ಮನವಿ

ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿ, ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್ ಅನುಭವಿಸುತ್ತಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿದ ದೆಹಲಿ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಹೈಕೋರ್ಟ್ ತೀರ್ಪಿಗೆ ತಡೆ ನೀಡುವಂತೆ ಕೋರಿ ವಕೀಲರಾದ ಅಂಜಲೆ ಪಟೇಲ್ ಮತ್ತು ಪೂಜಾ ಶಿಲ್ಪಕರ್ ಮೇಲ್ಮನವಿ ಸಲ್ಲಿಸಿದ್ದಾರೆ.

'ವಿಚಾರಣಾ ನ್ಯಾಯಾಲಯವು ಸೆಂಗರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಲ್ಲದೆ, ತಮ್ಮ ಸಹಜ ಜೀವನದ ಉಳಿದ ಅವಧಿಯವರೆಗೆ ಜೈಲಿನಲ್ಲಿಯೇ ಇರಬೇಕು ಎಂದು ಆದೇಶಿಸಿತ್ತು. ಆದರೆ ಈ ಪ್ರಕರಣದ ನೈಜ ಸತ್ಯವನ್ನು ಪರಿಗಣಿಸದೆ ಹೈಕೋರ್ಟ್ ತೀರ್ಪು ನೀಡಿದೆ' ಎಂದು ಅವರು ವಾದಿಸಿದ್ದಾರೆ.

'ಸೆಂಗರ್ ಗಂಭೀರ ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ. ಅತ್ಯಾಚಾರದಂತಹ ಘೋರ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ. ಅಂಥವರಿಗೆ ನೀಡಲಾದ ಶಿಕ್ಷೆಯನ್ನು ಅಮಾನತುಗೊಳಿಸಿ, ಜಾಮೀನು ನೀಡುವ ಮೂಲಕ ಹೈಕೋರ್ಟ್ ಗಂಭೀರ ತಪ್ಪುಗಳನ್ನು ಮಾಡಿದೆ' ಎಂದು ಅವರು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

'ಅಪರಾಧಿಯು ಆರ್ಥಿಕ ಮತ್ತು ರಾಜಕೀಯವಾಗಿ ಪ್ರಭಾವಿ ವ್ಯಕ್ತಿ. ತೋಳ್ಬಲದಿಂದ ಬೆದರಿಸುವ ಹಿನ್ನೆಲೆ ಹೊಂದಿದ್ದಾರೆ. ಸಂತ್ರಸ್ತೆಯ ತಂದೆಯ ಕಸ್ಟಡಿ ಸಾವು ಪ್ರಕರಣದಲ್ಲೂ ಆರೋಪಿಯಾಗಿದ್ದಾರೆ. ಇಷ್ಟೆಲ್ಲ ಕ್ರಿಮಿನಲ್ ಪ್ರವೃತ್ತಿ ಹೊಂದಿರುವ ವ್ಯಕ್ತಿಯ ಶಿಕ್ಷೆ ಅಮಾನತುಗೊಳಿಸಿರುವುದು ಸರಿಯಿಲ್ಲ' ಎಂದು ಉಲ್ಲೇಖಿಸಿದ್ದಾರೆ.

ಅಪರಾಧ ನಡೆಯುವ ಸಂದರ್ಭದಲ್ಲಿ ಸೆಂಗರ್ ಶಾಸಕರಾಗಿದ್ದರು. ಅಂದರೆ 'ಸಾರ್ವಜನಿಕ ಸೇವಕ' ರಾಗಿದ್ದರು. ಆದರೆ 1988ರ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 2(ಸಿ) ಮತ್ತು ಇತರ ನಿಬಂಧನೆಗಳ ಅಡಿಯಲ್ಲಿ ಪರಿಗಣಿಸಲಾಗಿರುವ 'ಸಾರ್ವಜನಿಕ ಸೇವಕ' ಪದದ ಶಾಸನಬದ್ಧ ವ್ಯಾಖ್ಯಾನವನ್ನು ಹೈಕೋರ್ಟ್ ತಪ್ಪಾಗಿ ಅರ್ಥೈಸಿಕೊಂಡು ತೀರ್ಪು ನೀಡಿದೆ. ಇದು ಶಾಸನದ ಉದ್ದೇಶವನ್ನೇ ದುರ್ಬಲಗೊಳಿಸುತ್ತದೆ ಎಂದು ವಾದಿಸಿದ್ದಾರೆ.

ಜೀವಾವಧಿ ಶಿಕ್ಷೆಯನ್ನು ಪ್ರಶ್ನಿಸಿ ಸೆಂಗರ್ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಇತ್ಯರ್ಥ ಆಗುವರೆಗೆ ಶಿಕ್ಷೆಯನ್ನು ಅಮಾನತಿನಲ್ಲಿರಿಸಿ ದೆಹಲಿ ಹೈಕೋರ್ಟ್ ಮಂಗಳವಾರ ತೀರ್ಪು ನೀಡಿತ್ತು. ಅಲ್ಲದೇ, ಪರಾರಿಯಾಗಿದ್ದ ಜಾಮೀನು ಮಂಜೂರು ಮಾಡಿತ್ತು. ಈ ಪ್ರಕರಣದ ಶಿಕ್ಷೆ ಅಮಾನತುಗೊಂಡಿದ್ದರೂ ಸಂತ್ರಸ್ತೆ ತಂದೆಯ ಕಸ್ಟಡಿ ಸಾವು ಪ್ರಕರಣದಲ್ಲಿ ಸೆಂಗರ್‌ಗೆ 10 ವರ್ಷಗಳ ಶಿಕ್ಷೆಯಾಗಿದೆ. ಹೀಗಾಗಿ ಅವರು ಜೈಲಿನಲ್ಲಿಯೇ ಇರುತ್ತಾರೆ.

ಗಂಗೂಬಾಯಿ ಹಾನಗಲ್ ಜತೆಗೂ ಒಡನಾಟ ಹೊಂದಿದ್ದ ಸಂಗೀತಗಾರ

ಶಿಷ್ಯವೃಂದ ಬೆಳೆಸಿದ 'ಸಂಗೀತದ ಮೇಷ್ಟ್ರು'

• ವೈಷ್ಣವಿ ಹಾನಗಲ್

ಪುಣೆಯಲ್ಲಿ ಈಚೆಗೆ ನಡೆದ ಸವಾಯಿ ಗಂಧರ್ವ ಸಂಗೀತ ಮಹೋತ್ಸವದಲ್ಲಿ ಗಾಯಕ ಅನಿರುದ್ಧ ಐತಾಳ ಅವರ ಗಾಯನಕ್ಕೆ ಎಲ್ಲರೂ ತಲೆದೂಗಿದರು. ಅವರಿಗೆ ಸಂಗೀತದ ಪಾಠ ಹೇಳಿಕೊಟ್ಟ ಗುರು ಅಶೋಕ ಹುಗ್ಗಣ್ಣವರ ಅವರನ್ನೂ ಕೊಂಡಾಡಿದರು.

ಅಶೋಕ ಹುಗ್ಗಣ್ಣವರ ಅವರ ನೇರ ಶಿಷ್ಯ ಅನಿರುದ್ಧ ಅವರು, ಹಿಂದೂಸ್ತಾನಿ ಸಂಗೀತದಲ್ಲಿ ಸದ್ಯ ಹೆಸರು ಮಾಡುತ್ತಿರುವ ಕಲಾವಿದ. ಇಂತಹ ಅನೇಕ ಶಿಷ್ಯರನ್ನು ಬೆಳೆಸಿದ ಕೀರ್ತಿ ಹುಗ್ಗಣ್ಣವರಿಗೆ ಸಲ್ಲುತ್ತದೆ.

ಅಶೋಕ ಹುಗ್ಗಣ್ಣವರ ಮತ್ತು ನಮ್ಮ ಕುಟುಂಬದ ಒಡನಾಟ ನಾಲ್ಕು ದಶಕಗಳಿಗೂ ಹೆಚ್ಚಿನದ್ದು. ನನ್ನ ಅಜ್ಜಿ ಗಂಗೂಬಾಯಿ ಹಾನಗಲ್ ಅವರ ಜತೆಗೂ ಅವರ ಒಡನಾಟವಿತ್ತು. ಎಂ.ಎ ಓದುವಾಗ ಅಜ್ಜಿ ಅವರಿಗೆ ಗುರುವಾಗಿದ್ದರು.

ಗಂಗೂಬಾಯಿ ಹಾನಗಲ್ ಅವರಿಗೆ ಬೆರಳೆಣಿಕೆಯಷ್ಟು ಮಾತ್ರ ಶಿಷ್ಯರಿದ್ದರು. ಆದರೆ, ಹುಗ್ಗಣ್ಣವರ ಐದುನೂರಕ್ಕೂ ಹೆಚ್ಚು ಶಿಷ್ಯರಿಗೆ ಹಿಂದೂಸ್ತಾನಿ ಸಂಗೀತವನ್ನು ಧಾರೆ ಎರೆದಿದ್ದಾರೆ. ಅವರು ಅಪರೂಪದ ಹಿಂದೂಸ್ತಾನಿ ಗಾಯಕ ಮತ್ತು ಅಪರೂಪದ ಗುರು.

ಹುಗ್ಗಣವರ ಬಳಿ ಸಂಗೀತಾಭ್ಯಾಸ ಮಾಡಿದವರು ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದಾರೆ. ಅವರ ಶಿಷ್ಯರಲ್ಲಿ ರೇಷ್ಮಾ ಭಟ್, ರಮ್ಯಾ ಭಟ್, ಶಶಿಕಲಾ ಭಟ್ ಅವರಂಥ ಸಾಧಕರಿದ್ದಾರೆ. ಅವರ ಶಿಷ್ಯರಲ್ಲಿ ಕೆಲವರು ಸಂಗೀತವನ್ನೇ ವೃತ್ತಿಯಾಗಿ ಸ್ವೀಕರಿಸಿದ್ದಾರೆ. ಇನ್ನು ಕೆಲವರು ಸಂಗೀತವನ್ನು ಹವ್ಯಾಸವಾಗಿ ಮುಂದುವರಿಸಿದ್ದಾರೆ. ಅವರು ಇನ್ನೂ ಶಿಷ್ಯ ಪರಂಪರೆ ಬೆಳೆಸಬೇಕಿತ್ತು. ಆದರೆ, ಅರ್ಧಕ್ಕೆ ಎದ್ದು ಹೋಗಿದ್ದಾರೆ. ಅವರ ನಿಧನ ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ಬಹುದೊಡ್ಡ ನಷ್ಟ. ಹಾಡುವವರು ಸಿಗುತ್ತಾರೆ. ಆದರೆ, ಕಲೆಯನ್ನು ಮುಂದಿನ ಪೀಳಿಗೆಗೆ ದಾಟಿಸುವವರು ವಿರಳ.

(ಲೇಖಕಿ: ಪ್ರಾಧ್ಯಾಪಕಿ, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಹುಬ್ಬಳ್ಳಿ ಪ್ರಾದೇಶಿಕ ಕೇಂದ್ರ, ಹುಬ್ಬಳ್ಳಿ)

ಅಶೋಕ ಹುಗ್ಗಣ್ಣವರ

ನುಡಿ ನಮನ

ಅಶೋಕ ಹುಗ್ಗಣ್ಣವರ ನಿಧನ

ಹುಬ್ಬಳ್ಳಿ: ಹಿಂದೂಸ್ತಾನಿ ಗಾಯಕ ಅಶೋಕ ಹುಗ್ಗಣ್ಣವರ (64) ಅನಾರೋಗ್ಯ ದಿಂದ ಬುಧವಾರ ರಾತ್ರಿ ದಾವಣಗೆರೆಯಲ್ಲಿ ನಿಧನರಾದರು.

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಯರಗುಪ್ಪಿ ಗ್ರಾಮದ ಹುಗ್ಗಣ್ಣವರ, ಹೊನ್ನಾವರದ ಎಂಪಿಇ ಸೊಸೈಟಿಯ ಎಸ್.ಡಿ.ಎಂ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ, 2021ರಲ್ಲಿ ನಿವೃತ್ತಿ ಹೊಂದಿದ್ದರು. ಬಳಿಕ ಹುಬ್ಬಳ್ಳಿಯ ಉಣಕಲ್‌ನ ಶಿವಗಿರಿ ಫ್ಲಾಟ್‌ನಲ್ಲಿ ವಾಸವಾಗಿದ್ದರು.

ಅವರಿಗೆ ಪತ್ನಿ, ಇಂಗ್ಲಿಷ್ ಪ್ರಾಧ್ಯಾಪಕಿ ವೀಣಾ ಮತ್ತು ಪುತ್ರ ವಿಜ್ಞಾನಿ, ಗಾಯಕ ವಿನಾಯಕ ಹುಗ್ಗಣ್ಣವರ ಇದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಬೆಳಿಗ್ಗೆ 11.30ಕ್ಕೆ ಹುಬ್ಬಳ್ಳಿಯ ವಿದ್ಯಾನಗರದ ರುದ್ರಭೂಮಿಯಲ್ಲಿ ನಡೆಯಲಿದೆ.

ಹುಗ್ಗಣ್ಣವರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಗೀತ ವಿಷಯದಲ್ಲಿ ಚಿನ್ನದ ಪದಕದೊಂದಿಗೆ ಎಂ.ಎ, 'ಸಂಗೀತ ರತ್ನ' ಡಿಪ್ಲೊಮಾ ಮತ್ತು ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ ಪದವಿ ಪಡೆದಿದ್ದರು.

'ಕುಂದಗೋಳ ಪರಿಸರದ ಹಿಂದೂಸ್ತಾನಿ ಸಂಗೀತಗಾರರು' ವಿಷಯ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿ ಪಡೆದಿದ್ದ ಅವರು, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಆಕಾಶವಾಣಿ, ದೂರದರ್ಶನದ 'ಬಿ' ಹೈಗ್ರೇಡ್ ಕಲಾವಿದರಾಗಿದ್ದ ಅವರು, ಜೈಪುರ, ಗ್ವಾಲಿಯರ್, ದೆಹಲಿ, ಕೋಲ್ಕತ್ತ, ಮುಂಬೈ ಮಾತ್ರವಲ್ಲದೆ, ಫ್ರಾನ್ಸ್ ಸೇರಿದಂತೆ ವಿದೇಶಗಳಲ್ಲೂ ಸಂಗೀತ ಕಛೇರಿ ನೀಡಿದ್ದಾರೆ.

ಕರ್ನಾಟಕ ಕಲಾಶ್ರೀ, ಅನನ್ಯ ಮನ್ನೂರ ಪ್ರಶಸ್ತಿ,

ಭಾರತಕ್ಕೆ ಸರಣಿ ಗೆಲ್ಲುವ ತವಕ

- ಮಹಿಳಾ ಟಿ20 ಮೂರನೇ ಪಂದ್ಯ ಇಂದು
- ಒತ್ತಡದಲ್ಲಿ ಪ್ರವಾಸಿ ಶ್ರೀಲಂಕಾ ತಂಡ

ತಿರುವನಂತಪುರ (ಪಿಟಿಐ): ಎರಡು ಅಧಿಕಾರಯುತ ಗೆಲುವುಗಳೊಂದಿಗೆ ಆತ್ಮವಿಶ್ವಾಸದಲ್ಲಿರುವ ಭಾರತ ತಂಡ ಶುಕ್ರವಾರ ಇಲ್ಲಿ ಶ್ರೀಲಂಕಾ ವಿರುದ್ಧ ನಡೆಯಲಿರುವ ಮೂರನೇ ಟಿ20 ಪಂದ್ಯವನ್ನು ಜಯಿಸಿ ಸರಣಿ ಕೈವಶ ಮಾಡಿಕೊಳ್ಳುವ ತವಕದಲ್ಲಿದೆ.

ಭಾರತ ತಂಡವು ಬ್ಯಾಟಿಂಗ್ ಮತ್ತು ಬೌಲಿಂಗ್–ಈ ಎರಡೂ ವಿಭಾಗಗಳಲ್ಲಿ ಪ್ರಾಬಲ್ಯ ಮೆರೆದಿದ್ದು, ವಿಶಾಖಪಟ್ಟಣದಲ್ಲಿ ನಡೆದ ಪಂದ್ಯಗಳಲ್ಲಿ ಕ್ರಮವಾಗಿ ಎಂಟು ಮತ್ತು ಏಳು ವಿಕೆಟ್‌ಗಳ ಜಯಗಳಿಸಿತ್ತು. ದ್ವೀಪ ರಾಷ್ಟ್ರದ ವಿರುದ್ಧ ಭಾರತ ಆಡಿದ ಕೊನೆಯ 11 ಪಂದ್ಯಗಳಲ್ಲಿ ಒಂಬತ್ತರಲ್ಲಿ ಗೆಲುವು ಸಾಧಿಸಿದೆ. ಲಂಕಾ 2024ರ ಜುಲೈನಲ್ಲಿ ದಂಬುಲ್ಲಾದಲ್ಲಿ ಕೊನೆಯ ಬಾರಿ ಗೆಲುವು ಕಂಡಿತ್ತು.

ಭಾರತ ತಂಡದ ಶಫಾಲಿ ವರ್ಮಾ

ಭಾರತದ ಬ್ಯಾಟಿಂಗ್ ಬಲಾಢ್ಯವಾಗಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಹೊಸದಾಗಿ ಸಾರಥ್ಯ ವಹಿಸಿರುವ ಜೆಮಿಮಾ ರಾಡ್ರಿಗಸ್ ಮೊದಲ ಪಂದ್ಯದಲ್ಲಿ ಮಿಂಚಿದರೆ, ಶಫಾಲಿ ವರ್ಮಾ ಎರಡನೇ ಪಂದ್ಯದಲ್ಲಿ ಅಜೇಯ ಅರ್ಧ ಶತಕ ಬಾರಿಸಿದರು. ಬೌಲರ್‌ಗಳೂ ನಿರಾಸೆ ಮೂಡಿಸಲಿಲ್ಲ. ಎನ್.ಶ್ರೀಚರಣಿ ಜೊತೆ ಸರಣಿಯಲ್ಲಿ ಪದಾರ್ಪಣೆ ಮಾಡಿದ ಸ್ಪಿನ್ನರ್ ವೈಷ್ಣವಿ ಶರ್ಮಾ, ವೇಗಿ ಕ್ರಾಂತಿ ಗೌಡ ಅವರು ಪರಿಣಾಮಕಾರಿ ಎನಿಸಿದ್ದಾರೆ. ಶ್ರೀಲಂಕಾ ತಂಡವನ್ನು ಅಲ್ಪ ಮೊತ್ತಕ್ಕೆ ಕಟ್ಟಿ ಹಾಕಿದ್ದಾರೆ. ಅನುಭವಿ ದೀಪ್ತಿ ಶರ್ಮಾ ಜ್ವರದ ಕಾರಣ ಎರಡನೇ ಪಂದ್ಯ ಆಡಲಿಲ್ಲ. ಅವರ ಬದಲು ಸ್ನೇಹಾ ರಾಣಾ ಅವಕಾಶ ಪಡೆದು 4 ಓವರುಗಳಲ್ಲಿ 11 ರನ್ನಿತ್ತು 1 ವಿಕೆಟ್ ಪಡೆದಿದ್ದರು.

ತಾಲೀಮು ನಡೆಸಿದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರಗಳು

ಆದರೆ ಫೀಲ್ಡಿಂಗ್‌ನಲ್ಲಿ ಮಾತ್ರ ಹರ್ಮನ್‌ಪ್ರೀತ್ ಸಾರಥ್ಯದ ತಂಡ ಸುಧಾರಣೆ ಕಾಣಬೇಕಾಗಿದೆ. ಮೊದಲ ಪಂದ್ಯದಲ್ಲಿ ತಂಡ ಐದು ಕ್ಯಾಚ್‌ಗಳನ್ನು ಕೈಚೆಲ್ಲಿತ್ತು. ಎರಡನೇ ಪಂದ್ಯದಲ್ಲಿ ಅಲ್ಪ ಸುಧಾರಣೆಯಾಗಿದ್ದು, ಉತ್ತಮ ಕ್ಷೇತ್ರರಕ್ಷಣೆಯ ಫಲವಾಗಿ ಲಂಕಾದ ಮೂವರು ರನ್‌ಔಟ್ ಆಗಿದ್ದರು. ತಂಡ ತನ್ನ ಆಟದ ಮಟ್ಟ ಏರಿಸಿ ಸರಣಿ ಗೆಲ್ಲುವ ಉತ್ಸಾಹದಲ್ಲಿದೆ. ತಿರುವನಂತಪುರದಲ್ಲಿ ಕೊನೆಯ ಮೂರು ಪಂದ್ಯಗಳು ನಡೆಯಲಿವೆ.

ಎರಡು ಸೋಲುಗಳಿಂದ ಜರ್ಝರಿತವಾಗಿರುವ ಶ್ರೀಲಂಕಾ ಈಗ ಬ್ಯಾಟಿಂಗ್ ಬಲಪಡಿಸಿಕೊಳ್ಳುವತ್ತ ಚಿತ್ತ ಹರಿಸಲಿದೆ. ತಂಡ ಎರಡೂ ಪಂದ್ಯಗಳಲ್ಲಿ ಸ್ಪರ್ಧಾತ್ಮಕ ಮೊತ್ತಗಳಿಸಲು ವಿಫಲವಾಗಿತ್ತು. ಪ್ರಮುಖ ಆಟಗಾರ್ತಿಯರಾದ ವಿಶ್ಮಿ ಗುಣರತ್ನೆ, ಹಸಿನಿ ಪೆರೀರಾ, ಹರ್ಷಿತಾ ಸಮರವಿಕ್ರಮ ನಿಧಾನಗತಿಯಲ್ಲಿ ಆಡಿದ್ದರು. ಬೌಂಡರಿಗಳು ಬತ್ತಿದ್ದವು.

'ನಾವು ಅನಗತ್ಯವಾಗಿ ಒತ್ತಡಕ್ಕೆ ಒಳಗಾದೆವು. ಒಂದೊಂದು ರನ್ ಗಳಿಸುವುದಕ್ಕೇ ನಾವು ಪ್ರಯತ್ನಿಸಿದೆವು. ಹೆಚ್ಚು ಬೌಂಡರಿಗಳನ್ನು ಗಳಿಸಬೇಕಾದ ಅಗತ್ಯವಿದೆ. 150ಕ್ಕಿಂತ ಹೆಚ್ಚು ಮೊತ್ತ ಕಲೆಹಾಕಬೇಕಾಗಿದೆ' ಎಂದು ನಾಯಕಿ ಚಾಮರಿ ಅಟಪಟ್ಟು ಎರಡನೇ ಪಂದ್ಯದ ನಂತರ ಹೇಳಿದ್ದರು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ವಿಜಯ್ ಹಜಾರೆ ಟ್ರೋಫಿ • ದೆಹಲಿಗೆ ಇಂದು ಗುಜರಾತ್ ಎದುರಾಳಿ

ವಿರಾಟ್ ಕೊಹ್ಲಿಯೇ ಪ್ರಮುಖ ಆಕರ್ಷಣೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ಬುಧವಾರ ಮಧ್ಯಾಹ್ನ ವಿರಾಟ್ ಕೊಹ್ಲಿಯ ಬ್ಯಾಟಿಗೆ ಚೆಂಡು ಬಡಿದ ಸದ್ದು ಪ್ರತಿಧ್ವನಿಸುತ್ತಿತ್ತು. ಪ್ರೇಕ್ಷಕರೇ ಇಲ್ಲದ ಕ್ರೀಡಾಂಗಣದಲ್ಲಿ ಸಹ ಆಟಗಾರರ ಚಪ್ಪಾಳೆ, ಕೇಂದ್ರದ ಸಿಬ್ಬಂದಿಯ ಹರ್ಷೋದ್ಗಾರಗಳಷ್ಟೇ ಕೇಳುತ್ತಿದ್ದವು.

ಆದರೆ 'ಬ್ಯಾಟಿಂಗ್ ಚಾಂಪಿಯನ್' ವಿರಾಟ್ ಕೊಹ್ಲಿ ಅವರು ಮಾತ್ರ ತಮ್ಮದೇ ಲಹರಿಯಲ್ಲಿದ್ದರು. ಈಚೆಗೆ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯಲ್ಲಿ ಘಟಾನುಘಟಿ ಬೌಲರ್‌ಗಳನ್ನು ಎದುರಿಸಿದ ರೀತಿಯಲ್ಲಿಯೇ ಆಂಧ್ರದ ಎದುರೂ ಆಡಿದರು. ಅವರ ಶತಕದ ಆಟದಿಂದಾಗಿ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಗೆ ಅಮೋಘ ಆರಂಭ ದೊರೆಯಿತು. ಆಂಧ್ರದ ವಿರುದ್ಧ ಗೆದ್ದ ದೆಹಲಿ ತಂಡವು ಈಗ ಶುಕ್ರವಾರ ನಡೆಯಲಿರುವ ಎರಡನೇ ಹಣಾಹಣಿಯಲ್ಲಿ ಗುಜರಾತ್ ಎದುರು ಕಣಕ್ಕಿಳಿಯಲಿದೆ.

15 ವರ್ಷಗಳ ನಂತರ ತಮ್ಮ ತವರು ತಂಡವನ್ನು ಈ ಟೂರ್ನಿಯಲ್ಲಿ ವಿರಾಟ್ ಪ್ರತಿನಿಧಿಸುತ್ತಿದ್ದಾರೆ. ತಂಡದಲ್ಲಿ ವೇಗಿ ಇಶಾಂತ್ ಶರ್ಮಾ ಒಬ್ಬರನ್ನು ಬಿಟ್ಟರೆ ಉಳಿದೆಲ್ಲ ಆಟಗಾರರೂ ವಿರಾಟ್ ಅವರಿಗೆ ಜೂನಿಯರ್ಸ್. ಆದರೂ ಅವರೊಂದಿಗೆ ಉತ್ತಮ ತಾಳಮೇಳ ಸಾಧಿಸುವಲ್ಲಿ 37 ವರ್ಷದ ವಿರಾಟ್ ಯಶಸ್ವಿಯಾಗಿದ್ದಾರೆ. ಗುರಿ ಬೆನ್ನಟ್ಟಿದ ಸಂದರ್ಭದಲ್ಲಿ ವಿರಾಟ್ ಅವರೊಂದಿಗೆ ಪ್ರಿಯಾಂಶ್ ಆರ್ಯ ಹಾಗೂ ನಿತೀಶ್ ರಾಣಾ ಜೊತೆಯಾಟಗಳನ್ನು ಆಡಿದ್ದರು. ಈ ಇಬ್ಬರೂ ಆಟಗಾರರಿಗಿಂತಲೂ ಚುರುಕಾಗಿ ಪಿಚ್‌ನಲ್ಲಿ 2 ಮತ್ತು 3 ರನ್‌ಗಳನ್ನು ಗಳಿಸಿದರು ವಿರಾಟ್. ಬಿರುಬಿಸಿಲಿನಲ್ಲಿ ಫೀಲ್ಡಿಂಗ್ ಮಾಡುವಾಗಲೂ ಅವರು ಹದ ತಪ್ಪಲಿಲ್ಲ.

ಆದರೆ ತಂಡದ ನಾಯಕ ರಿಷಭ್ ಪಂತ್ ಅವರಿಗೆ ಲಯಕ್ಕೆ ಮರಳುವ ಸವಾಲು ಇದೆ. ಅದಕ್ಕಾಗಿಯೇ ಬುಧವಾರ ಪಂದ್ಯದ ನಂತರ ಸುಮಾರು 40 ನಿಮಿಷ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡಿದರು. ದೆಹಲಿ ತಂಡದ ಬೌಲರ್‌ಗಳಾದ ಸಿಮರ್‌ಜೀತ್ ಸಿಂಗ್, ಇಶಾಂತ್, ನವದೀಪ್ ಸೈನಿ ಅವರಿಗೆ ಗುಜರಾತ್ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇದೆ.

ರಿಷಭ್ ಪಂತ್ ಮತ್ತು ವಿರಾಟ್ ಕೊಹ್ಲಿ ಪಿಟಿಐ ಚಿತ್ರ

ಚಿಂತನ್ ಗಜ ನಾಯಕತ್ವದ ಗುಜರಾತ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಸರ್ವಿಸಸ್ ವಿರುದ್ಧ ಜಯಿಸಿದೆ. ಬ್ಯಾಟರ್ ಆರ್ಯ ದೇಸಾಯಿ ಮತ್ತು ಸ್ಪಿನ್ನರ್ ರವಿ ಬಿಷ್ಣೋಯಿ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9

ಕರ್ನಾಟಕಕ್ಕೆ ಕೇರಳ ಸವಾಲು



ಮಯಂಕ್

ಅಹಮದಾಬಾದ್: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿದೆ. ತನ್ನ ಮೊದಲ ಪಂದ್ಯದಲ್ಲಿ ದಾಖಲೆಯ ಬೃಹತ್ ಮೊತ್ತವನ್ನು ಬೆನ್ನಟ್ಟಿ ಗೆದ್ದಿತ್ತು. ಜಾರ್ಖಂಡ್ ಎದುರು 'ಚಾಂಪಿಯನ್ ತಂಡಕ್ಕೆ ತಕ್ಕ ಆಟ' ಆಡಿತು.

ಈ ಗೆಲುವಿನಿಂದಾಗಿ ಅಪಾರ ಆತ್ಮವಿಶ್ವಾಸದಲ್ಲಿರುವ ಮಯಂಕ್ ಬಳಗವು ಶುಕ್ರವಾರ ಕೇರಳ ತಂಡವನ್ನು ಎದುರಿಸಲಿದೆ

ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ನಿರಾಶಾದಾಯಕ ಪ್ರದರ್ಶನ ನೀಡಿದ್ದ ತಂಡವು ಇಲ್ಲಿ ಅಮೋಘವಾಗಿ ಪುಟಿದೆದ್ದು ನಿಂತಿದೆ. ಜಾರ್ಖಂಡ್ ತಂಡವು ಒಡ್ಡಿದ್ದ 413 ರನ್‌ಗಳ ಗುರಿಯನ್ನು ಮುಟ್ಟಿ ಗೆದ್ದ ರೀತಿ ಅನನ್ಯ. ನಾಯಕ ಮಯಂಕ್ ಅರ್ಧಶತಕ, ದೇವದತ್ತ ಪಡಿಕ್ಕಲ್ ಅವರ ಅಬ್ಬರದ ಶತಕ ಗೆಲುವಿಗೆ ಪ್ರಮುಖ ಕಾರಣವಾದವು. ಕೆಳ ಹಂತದಲ್ಲಿ ಅಭಿನವ್ ಮನೋಹರ್ ಅರ್ಧಶತಕ ಮತ್ತು ಹೊಸಪ್ರತಿಭೆ ಧ್ರುವ ಪ್ರಭಾಕರ್ ಅವರ ಬೀಸಾಟವೂ ತಂಡದ ಜಯವನ್ನು ಸುಲಭಗೊಳಿಸಿತು. ಇದೇ ಲಯವನ್ನು ಕೇರಳದ ಎದುರು ಮುಂದುವರಿಸಿದರೆ ಗೆಲುವು ಸುಲಭವಾಗಲಿದೆ.

ಕೇರಳ ತಂಡವು ತನ್ನಮೊದಲ ಪಂದ್ಯದಲ್ಲಿ ತ್ರಿಪುರ ಎದುರು ಜಯಿಸಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 9

ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಗೌರವ

ಹಾರ್ದಿಕ್ ಸಿಂಗ್ ಹೆಸರು ಶಿಫಾರಸು

ಹಾರ್ದಿಕ್ ಸಿಂಗ್

ನವದೆಹಲಿ (ಪಿಟಿಐ): ಭಾರತ ಪುರುಷರ ಹಾಕಿ ತಂಡದ ಉಪನಾಯಕ ಹಾರ್ದಿಕ್ ಸಿಂಗ್ ಅವರನ್ನು ಈ ವರ್ಷದ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಗೌರವಕ್ಕೆ ಶಿಫಾರಸು ಮಾಡಲಾಗಿದೆ. ಚೆಸ್ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್, ಡೆಕಾಥ್ಲಾನ್ ಅಥ್ಲೀಟ್ ತೇಜಸ್ವಿನ್ ಶಂಕರ್ ಸೇರಿದಂತೆ 24 ಸಾಧಕರನ್ನು ಅರ್ಜುನ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

ಕ್ರೀಡಾ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ ಖೇಲ್ ರತ್ನ ಗೌರವಕ್ಕೆ 27 ವರ್ಷದ ಹಾರ್ದಿಕ್ ಅವರನ್ನು ಮಾತ್ರ ಶಿಫಾರಸು ಮಾಡಲಾಗಿದೆ. ಬುಧವಾರ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ರಾಷ್ಟ್ರೀಯ ತಂಡದಲ್ಲಿ ಮಿಡ್‌ಫೀಲ್ಡರ್ ಆಗಿರುವ ಹಾರ್ದಿಕ್ 2021ರ ಟೋಕಿಯೊ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತ ತಂಡದಲ್ಲಿ ಆಡಿದ್ದರು. ಈ ವರ್ಷ ಏಷ್ಯಾ ಕಪ್ ಟೂರ್ನಿಯಲ್ಲಿ ಚಿನ್ನ ಗೆದ್ದ ಭಾರತ ತಂಡದ ಭಾಗವಾಗಿದ್ದರು.

ಯೋಗಪಟು ಆರತಿ ಪಾಲ್ ಹೆಸರನ್ನು ಅರ್ಜುನ ಪ್ರಶಸ್ತಿಗೆ ಶಿಫಾರಸು ಮಾಡಲಾಗಿದೆ. ಮೊದಲ ಬಾರಿ ಯೋಗಪಟು ಒಬ್ಬರಿಗೆ ಈ ಗೌರವ ಲಭಿಸಿದೆ. ಆರತಿ ಅವರು ಪ್ರಸ್ತುತ ರಾಷ್ಟ್ರೀಯ ಮತ್ತು ಏಷ್ಯನ್ ಚಾಂಪಿಯನ್ ಆಗಿದ್ದಾರೆ. 2026ರ ಏಷ್ಯನ್ ಗೇಮ್ಸ್‌ನಲ್ಲಿ ಯೋಗಾಸನ ಪ್ರದರ್ಶನ ಕ್ರೀಡೆಯಾಗಿರಲಿದೆ.

ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಭಾರತ ಒಲಿಂಪಿಕ್ ಸಂಸ್ಥೆ ಉಪಾಧ್ಯಕ್ಷ ಗಗನ್ ನಾರಂಗ್, ಮಾಜಿ ಬ್ಯಾಡ್ಮಿಂಟನ್ ಆಟಗಾರ್ತಿ ಅಪರ್ಣಾ ಪೋಪಟ್ ಮತ್ತು ಮಾಜಿ ಅಂತರರಾಷ್ಟ್ರೀಯ ಹಾಕಿ ಆಟಗಾರ ಎಂ.ಎಂ.ಸೋಮಯ್ಯ ಇದ್ದಾರೆ. ಖೇಲ್ ರತ್ನ ಪ್ರಶಸ್ತಿಯು ₹25 ಲಕ್ಷ ಮತ್ತು ಅರ್ಜುನ ಪ್ರಶಸ್ತಿಯು ₹ 15 ಲಕ್ಷ ನಗದು ಬಹುಮಾನ ಒಳಗೊಂಡಿದೆ.

ಅರ್ಜುನ ಪ್ರಶಸ್ತಿಗೆ ಯಾರು?

ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ: ಹಾರ್ದಿಕ್ ಸಿಂಗ್ (ಹಾಕಿ)

ಅರ್ಜುನ ಪ್ರಶಸ್ತಿ: ತೇಜಸ್ವಿನ್ ಶಂಕರ್, ಪ್ರಿಯಾಂಕಾ, ಮೊಹಮ್ಮದ್ ಅಫ್ಸಲ್ (ಮೂವರೂ ಅಥ್ಲೆಟಿಕ್ಸ್), ನರೇಂದರ್ (ಬಾಕ್ಸಿಂಗ್), ವಿದಿತ್ ಗುಜರಾತಿ, ದಿವ್ಯಾ ದೇಶಮುಖ್ (ಇಬ್ಬರೂ ಚೆಸ್), ಧನುಷ್ ಶ್ರೀಕಾಂತ್ (ಶ್ರವಣದೋಷವುಳ್ಳವರ ಶೂಟಿಂಗ್), ಪ್ರಣತಿ ನಾಯಕ್ (ಜಿಮ್ನಾಸ್ಟಿಕ್ಸ್), ರಾಜ್‌ಕುಮಾರ್ ಪಾಲ್ (ಹಾಕಿ), ಸುರ್ಜಿತ್ (ಕಬಡ್ಡಿ), ನಿರ್ಮಲಾ ಭಾಟಿ (ಕೊಕ್ಕೊ), ರುದ್ರಾಂಶ್ ಖಂಡೇಲ್ವಾಲ್ (ಪ್ಯಾರಾ ಶೂಟಿಂಗ್), ಏಕ್ತಾ ಭಯಾನ್ (ಪ್ಯಾರಾ ಅಥ್ಲೆಟಿಕ್ಸ್), ಪದ್ಮನಾಭ್ ಸಿಂಗ್ (ಪೋಲೊ), ಅರವಿಂದ್ ಸಿಂಗ್ (ರೋಯಿಂಗ್), ಅಖಿಲ್ ಶೆರಾನ್ , ಮೆಹುಲಿ ಘೋಷ್ (ಇಬ್ಬರೂ ಶೂಟಿಂಗ್), ಸುತೀರ್ಥ ಮುಖರ್ಜಿ (ಟೇಬಲ್ ಟೆನಿಸ್), ಸೋನಮ್ ಮಲಿಕ್ (ಕುಸ್ತಿ), ಆರತಿ (ಯೋಗ), ಟ್ರೀಸಾ ಜೋಳಿ, ಗಾಯತ್ರಿ ಗೋಪಿಚಂದ್ (ಇಬ್ಬರೂ ಬ್ಯಾಡ್ಮಿಂಟನ್), ಲಾಲ್ರೆಮ್ಸಿಯಾಮಿ (ಹಾಕಿ), ಪೂಜಾ (ಕಬಡ್ಡಿ)

ಹರ್ಷ, ಭಾನು ಶತಕ; ಪಂದ್ಯ ಡ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರನೇ ಕ್ರಮಾಂಕದ ಆಟಗಾರ ಟಿ.ಹರ್ಷ ಸಾಯಿ ಸಾತ್ವಿಕ್ (133, 217ಎ, 4x11, 6x1) ಮತ್ತು ನಾಯಕ ಕೆ.ಭಾನು ಶ್ರೀಹರ್ಷ (174, 223ಎ, 4x16, 6x6) ಅವರ ಅಮೋಘ ಶತಕಗಳ ನೆರವಿನಿಂದ ಆಂಧ್ರ ಪ್ರದೇಶದ ತಂಡ ವಿಜಯ್ ಮರ್ಚಂಟ್ ಟ್ರೋಫಿ (16 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡದ ಎದುರು ಹೋರಾಟ ತೋರಿತು.

ಆದರೆ ಛತ್ತೀಸಗಢದ ಭಿಲಾಯಿಯಲ್ಲಿ 'ಡ್ರಾ' ಆದ ಈ ಮೂರು ದಿನಗಳ ಪಂದ್ಯದಲ್ಲಿ ಕರ್ನಾಟಕ 64 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆದು ಮೂರು ಪಾಯಿಂಟ್ಸ್ ಪಡೆಯಿತು. ಆಂಧ್ರ ಒಂದು ಪಾಯಿಂಟ್ ಗಳಿಸಿತು. ಸತತ ನಾಲ್ಕನೇ ಡ್ರಾ ದಿಂದಾಗಿ ಕರ್ನಾಟಕ, ಆರು ತಂಡಗಳ 'ಡಿ' ಗುಂಪಿನಲ್ಲಿ 12 ಅಂಕಗಳೊಂದಿಗೆ ನಾಲ್ಕನೇ ಸ್ಥಾನಕ್ಕಿಳಿಯಿತು. ಮಧ್ಯಪ್ರದೇಶ (20) ಮತ್ತು ಆಂಧ್ರ (14) ಮೊದಲ ಎರಡು ಸ್ಥಾನ ಪಡೆದಿವೆ. ಇನ್ನೊಂದು ಸುತ್ತಿನ ಪಂದ್ಯ ಉಳಿದಿದೆ.

ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 9 ವಿಕೆಟ್‌ಗೆ 473 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು. ಇದಕ್ಕೆ ಉತ್ತರವಾಗಿ ಬುಧವಾರ ಎರಡನೇ ದಿನದಾಟದ ಕೊನೆಗೆ 2 ವಿಕೆಟ್‌ಗೆ 189 ರನ್ ಗಳಿಸಿದ್ದ ಆಂಧ್ರ ಮೊದಲ ಇನಿಂಗ್ಸ್‌ನಲ್ಲಿ 409 ರನ್ ಗಳಿಸಿತು. ಹರ್ಷ ಸಾಯಿ ಮತ್ತು ಭಾನು ಶ್ರೀಹರ್ಷ ಅವರು ಮೂರನೆ ವಿಕೆಟ್‌ಗೆ 273 ರನ್ ಸೇರಿಸಿದ್ದರಿಂದ ಕರ್ನಾಟಕದ ಗೆಲುವಿನಾಸೆ ಮೊದಲ ಅವಧಿಯಲ್ಲೇ ಕರಗಿತು.

ಕರ್ನಾಟಕದ ಕಡೆ ಸ್ಪಿನ್ನರ್‌ಗಳಾದ ಸಮರ್ಥ ಕುಲಕರ್ಣಿ ಮತ್ತು ಸುವಿಕ್ ಗಿಲ್ ತಲಾ ಮೂರು ವಿಕೆಟ್‌ಗಳನ್ನು ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 9 ವಿಕೆಟ್‌ಗೆ 473 ಡಿ; ಆಂಧ್ರ: 132.3 ಓವರುಗಳಲ್ಲಿ 409 (ಟಿ. ಹರ್ಷ ಸಾಯಿ ಸಾತ್ವಿಕ್ 133, ಕೆ.ಭಾನು ಶ್ರೀಹರ್ಷ 174, ರಿಶಿ ಕುಮಾರ್ ರೆಡ್ಡಿ ಔಟಾಗದೇ 26; ಸಮರ್ಥ ಕುಲಕರ್ಣಿ 64ಕ್ಕೆ3, ಸುವಿಕ್ ಗಿಲ್ 91ಕ್ಕೆ3).

ರಾಷ್ಟ್ರಮಟ್ಟದ ಕೊಕ್ಕೊ 31ರಿಂದ

ಬೆಂಗಳೂರು: ಜೂನಿಯರ್ ಬಾಲಕ ಮತ್ತು ಬಾಲಕಿಯರ ರಾಷ್ಟ್ರಮಟ್ಟದ ಕೊಕ್ಕೊ ಚಾಂಪಿಯನ್‌ಷಿಪ್ ಇದೇ 31ರಿಂದ ಜನವರಿ 4ರವರೆಗೆ ನಗರದ ಗುಂಜೂರು ವಾಜಪೇಯಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಕೊಕ್ಕೊ ಸಂಸ್ಥೆ ಅಧ್ಯಕ್ಷ ಲೋಕೇಶ್ವರ್ ಹೇಳಿದರು.

ಕರ್ನಾಟಕ ರಾಜ್ಯ ಕೊಕ್ಕೊ ಸಂಸ್ಥೆ ಮತ್ತು ಗುಂಜೂರು ಕೊಕ್ಕೊ ಕ್ಲಬ್ ಆಶ್ರಯದಲ್ಲಿ 44ನೇ ಆವೃತ್ತಿಯ ಚಾಂಪಿಯನ್‌ಷಿಪ್ ನಡೆಯಲಿದ್ದು, ಹೊನಲು ಬೆಳಕಿನಲ್ಲಿ ನಡೆಯುವ ಸ್ಪರ್ಧೆಯಲ್ಲಿ ವಿವಿಧ ರಾಜ್ಯಗಳ 32 ತಂಡಗಳು ಭಾಗವಹಿಸಲಿವೆ. ಅದಕ್ಕಾಗಿ ನಾಲ್ಕು ಕೋರ್ಟ್‌ಗಳನ್ನು ನಿರ್ಮಿಸಲಾಗಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನೆಟ್‌ಬಾಲ್: ಕರ್ನಾಟಕ ಶುಭಾರಂಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾರುವಾಕ್ ಗುರಿ ಇಟ್ಟ ಶೂಟರ್ ಹರ್ಷಿತಾ, ಆಲ್‌ರೌಂಡ್ ಆಟ ಪ್ರದರ್ಶಿಸಿದ ನಿಖಿತಾ ಮತ್ತು ರಕ್ಷಣೆಯ ಗೋಡೆ ಕಟ್ಟದ ಡಿಫೆಂಡರ್ ನಿತ್ಯಾ ಅವರ ಅಮೋಘ ಆಟದ ನೆರವಿನಿಂದ ಕರ್ನಾಟಕದ ಬಾಲಕಿಯರು ಪದವಿಪೂರ್ವ ವಿದ್ಯಾರ್ಥಿಗಳ ರಾಷ್ಟ್ರ ಮಟ್ಟದ ನೆಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯಗಳಿಸಿದರು.

ಶಾಲಾ ಶಿಕ್ಷಣ ಇಲಾಖೆ ಹಾಗೂ ಮಂಗಳೂರು ತಾಲ್ಲೂಕಿನ ಎಡಪದವು ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜು ಆಶ್ರಯದಲ್ಲಿ ಪಿಲಿಕುಳ ಸ್ಪೋರ್ಟ್ ಅಂಗಣದಲ್ಲಿ ಗುರುವಾರ ಆರಂಭ ಗೊಂಡ ಟೂರ್ನಿಯ ಲೀಗ್ ಪಂದ್ಯದಲ್ಲಿ ಕರ್ನಾಟಕ 35-3ರಲ್ಲಿ ಒಡಿಶಾ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ಆಕ್ರಮಣಕಾರಿಯಾಗಿಯೇ ಆಟ ಆರಂಭಿಸಿದ ಆತಿಥೇಯ ಕಾಲೇಜಿನ ನಿಖಿತಾ ನಾಯಕತ್ವದ ತಂಡ ಕೊನೆಯವರೆಗೂ ಲಯವನ್ನು ಕಾಯ್ದುಕೊಂಡಿತು. ಹರ್ಷಿತಾ ನಿರಂತರವಾಗಿ